SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 9 Pages:56
April - 2025, Price Rs. 20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2025

ಬೆಲೆ ರೂ. 20/-



**ತಿರುಮಲೆ ಸ್ವಾಮಿಯವರ ವಸಂತೋತ್ಸವಗಳು**

**10-04-2025 ರಿಂದ 12-04-2025 ರ ವರೆಗೆ**



ಶ್ರೀನಿವಾಸಮಂಗಾಪುರಂ,
ಶ್ರೀಕಲ್ಯಾಣ ವೆಂಕಟೇಶ್ವರ
ಸ್ವಾಮಿಯವರಿಗೆ
18-02-2025 ರಿಂದ
26-02-2025 ರ ವರೆಗೆ
ವೈಭವವಾಗಿ ನಡೆದ
ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ.

ತಿರುಪತಿ
ಶ್ರೀ ಕಪಿಲೇಶ್ವರ
ಸ್ವಾಮಿಯವರಿಗೆ
19-02-2025 ರಿಂದ
28-02-2025
ರ ವರೆಗೆ
ವೈಭವವಾಗಿ ನಡೆದ
ಬ್ರಹ್ಮೋತ್ಸವಗಳ
ದೃಶ್ಯಮಾಲಿಕೆ.




# ಭಗವದ್ಗೀತೆ

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್।
ತಥಾಽಪಿ ತ್ವಂ ಮಹಾಬಾಹೋ ನೈವಂ ಶೋಚಿತು ಮರ್ಹಸಿ ॥

**ಒಂದು ವೇಳೆ ದೇಹದ ಮೂಲಕವಾದರೂ ಈ ಜೀವ ನಿರಂತರವಾಗಿ ಹುಟ್ಟುತ್ತಾನೆ, ಸಾಯುತ್ತಾನೆ ಎಂದು ತಿಳಿದರೂ, ಓ ಅರ್ಜುನ, ನೀನು ಅದಕ್ಕಾಗಿ ಹೀಗೆ ದುಃಖಿಸಬೇಕಿಲ್ಲ**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -26)





ರಾಮನಾಮ ಪಾಯಸಕ್ಕೆ
ಕೃಷ್ಣನಾಮ ಸಕ್ಕರೆ
ವಿಠಲನಾಮ ತುಪ್ಪವ ಬೆರಸಿ
ಬಾಯಿ ಚಪ್ಪರಿಸಿರೋ ।
ಒಮ್ಮಾನ ಗೋಧಿಯ ತಂದು
ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮಾನ ಸಜ್ಜಿಗೆಯ ತೆಗೆದು
ಸಣ್ಣ ಶ್ಯಾವಿಗೆ ಹೊಸೆದು ॥
ಹೃದಯವೆಂಬೊ ಮಡಿಕೆಯಲ್ಲಿ
ಭಾವವೆಂಬ ಎಸರನಿಟ್ಟು
ಬುದ್ಧಿಯಿಂದ ಪಾಕ ಮಾಡಿ
ಹರಿವಾಣಕೆ ಬಡಿಸಿಕೊಂಡು ।
ಆನಂದವೆಂಬೋ ತೇಗು
ಬಂದಾಗ ನಮ್ಮ ಆನಂದ
ಮೂರುತಿ ಪುರಂದರ ವಿಠಲನ
ನೆನೆಯಿರೋ ॥

\- ಶ್ರೀ ಪುರಂದರದಾಸರು

# ದಯಾ ಶತಕಮ್



**ನಿಸ್ಸೀಮವೈಭವಜುಷಾಂ ಮಿಷತಾಂ ಗುಣಾನಾಂ ಸ್ತೋತುರ್ದಯೇ ವೃಷಗಿರೀಶಗುಣೇಶ್ವರೀಂ ತ್ವಾಮ್ ।**

**ತ್ರೈರೇವ ನೂನಮವಶ್ಯೈರಭಿನಂದಿತಂ ಮೇ ಸತ್ಯಾಪಿತಂ ತವ ಬಲಾದಕುತೋಭಯತ್ವಂ ॥101॥**

ಹಿಂದಿನ ಕೊನೆಯದಾದ ದಶಕದಲ್ಲಿ ದಯಾದೇವಿಯ ಅನುಗ್ರಹವು ತನ್ನ ಮೇಲೆ ಅತ್ಯಂತ ವ್ಯಾಪಕವಾದ ರೀತಿಯಲ್ಲಿ ಪ್ರಸರಿಸಿ ತನ್ನ ಉದ್ಧಾರಕ್ಕೆ ಕಾರಣವಾಗಬೇಕೆಂದು ಪ್ರಾರ್ಥಿಸಿ ಆಚಾರ್ಯರು ಈ ಶ್ಲೋಕದಿಂದ ಪ್ರಾರಂಭಿಸಿ, ದಯಾದೇವಿಯ ಮಹಿಮೆಯನ್ನು ಸಂಗ್ರಹವಾಗಿ ವರ್ಣಿಸಿ ಸ್ತೋತ್ರಮಾಡಿ, ಇಂತಹ ದಯಾದೇವಿಯನ್ನು ಕುರಿತು,ಅಂದರೆ ಭಗವಂತನ ಅತ್ಯಂತ ಶ್ರೇಷ್ಠಗುಣವಾದ ದಯೆಯನ್ನು ಕುರಿತು, ಸ್ತೋತ್ರವನ್ನು ಅಧ್ಯಯನ ಮಾಡುವುದರಿಂದ ಉಂಟಾಗಬಹುದಾದ ಫಲಗಳನ್ನು ತಿಳಿಸುತ್ತಾರೆ. ಈ ಶ್ಲೋಕದಲ್ಲಿ,ಅತ್ಯಂತ ದುರ್ಲಭವಾದ ಲಾಭವನ್ನು, ದೈವೀಸಂಪತ್ತನ್ನು-ದೊರಕಿಸಿಕೊಡುವುದಕ್ಕೆ ಸಿದ್ಧಳಾಗಿರುವ ದಯಾದೇವಿಯ ಮಹಿಮೆಯನ್ನು ವರ್ಣಿಸಿ ಆಕೆಯನ್ನು ಸ್ತುತಿಸಿದ್ದಾರೆ.

ಭಗವಂತನ ಗುಣಗಳೆಲ್ಲವೂ ಅಪಾರವಾದ ಸಂಪತ್ತನ್ನು ಹೊಂದಿರುವುವು. ಅಂದರೆ, ಜಗತ್ತಿನಲ್ಲಿರುವ ಚೇತನರಿಗೆಲ್ಲ ದಿವ್ಯವಾದ ಸಂಪತ್ತನ್ನು ಕೊಡುವುದಕ್ಕೆ ಸದಾ ಸಿದ್ಧವಾಗಿರುವುವು. ಒಂದೊಂದು ಗುಣವೂ ಒಂದೊಂದು ರೀತಿಯಲ್ಲಿ ಅಪೇಕ್ಷಣೀಯವಾದ ಆ ಸಂಪತ್ತನ್ನು ಕರುಣಿಸುವುದಕ್ಕಾಗಿಯೇ ಇರುವುದು. ಈ ಎಲ್ಲ ಗುಣಗಳಿಗೂ ಮೂಲ ದಯಾಗುಣ. ಅಂದರೆ ಭಗವಂತನು ಚೇತನರನ್ನು ಉದ್ಧರಿಸಬೇಕಾದರೆ ಮೊಟ್ಟ ಮೊದಲು ದಯೆಯನ್ನೇ ತೋರಿಸುವುದು. ಭಗವಂತನ ಕರುಣೆಯೊಂದಿಲ್ಲದೇ ಇದ್ದರೆ ಸೌಲಭ್ಯಾದಿ ಮಿಕ್ಕಗುಣಗಳು ತೋರ್ಪಡುವುದಕ್ಕೆ ಅವಕಾಶವೇ ಇಲ್ಲ. ಮೊದಲು ದಯೆ, ಆ ಮೇಲೆ ಮಿಕ್ಕಗುಣಗಳು, ಆದ್ದರಿಂದಲೇ ದಯೆಯನ್ನು ಗುಣಗಳಿಗೆಲ್ಲ **'ಅಧೀಶ್ವರೀ'** ಎಂದು ಸಂಬೋಧಿಸಿರುವುದು. ಭಗವಂತನು ತನ್ನ ಯಾವ ಗುಣದಿಂದ ನಮ್ಮನ್ನು ಅನುಗ್ರಹಿಸಿದರೂ ಅದು ಅವನ ಸ್ವೇಚ್ಛೆಯಿಂದ ನಾವು ಅವನನ್ನು ಬಲಾತ್ಕರಿಸಿ ಏನನ್ನೂ ಪಡೆಯುವುದು ಸಾಧ್ಯವಿಲ್ಲ ಎಂಬುದನ್ನು **'ಅವಶ್ಯೈಃ'** ಎಂಬ ಪದ ಪ್ರಯೋಗದಿಂದ ಸ್ಪಷ್ಟಪಡಿಸಿದ್ದಾರೆ, ನಾವು ಪ್ರಾರ್ಥಿಸಬಹುದು. ಪ್ರಾರ್ಥನೆಯನ್ನು ನೆರವೇರಿಸುವುದು ಅಥವಾ ಬಿಡುವುದು ಅವನ ಅಧೀನ. ನಾವು ಸರಿಯಾದ ರೀತಿಯಲ್ಲಿ ಅವನನ್ನು ಸ್ತುತಿಸಿ, ಪ್ರಾರ್ಥನೆಮಾಡಿ, ತೃಪ್ತಿಪಡಿಸಿ ನಮ್ಮ ಇಷ್ಟಾರ್ಥಗಳನ್ನು ಪಡೆಯುವ ಪ್ರಯತ್ನ ಮಾಡ ಬೇಕೆಂಬುದು ನಿಜವಾದರೂ, ಅವನ ಕೃಪಾಕಟಾಕ್ಷವಿಲ್ಲದೇ ಇದ್ದರೆ ಯಾವ ಇಷ್ಟಾರ್ಥವೂ ನೆರವೇರುವಂತೆಯೇ ಇಲ್ಲ. ಅವನ ಈ ಕೃಪಾಕಟಾಕ್ಷವೇ ನಿರ್ವ್ಯಾಜಪ್ರೇಮವೆಂಬುದು ಇದು ದಯಾದೇವಿಯ ಕಾರ್ಯ. ಆದ್ದರಿಂದ ದಯಾದೇವಿಯ ಬಲವಿದ್ದರೆ, ಭಗವಂತನ ದಯೆಯೊಂದಿದ್ದರೆ, ಯಾರಿಂದಲೂ ಯಾವ ರೀತಿಯ ಭಯಕ್ಕೂ ಕಾರಣವಿಲ್ಲ. ಈ ವಿಚಾರ ತನ್ನ ವಿಷಯದಲ್ಲಿ ನಿಜವಾಗಿದೆ, ದಯೆಯ ಬಲವಿದೆ. ಇದು ಆಕೆಯ ಮಹಿಮೆ ಎಂದು ಆಕೆಯನ್ನು ಆಚಾರ್ಯರು ಸ್ತುತಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಚೈತ್ರ - ವೈಶಾಖಮಾಸ ಸಂಚಿಕೆ

ಸಂಪುಟ : 04 ಏಪ್ರಿಲ್ - 2025 ಸಂಚಿಕೆ : 09



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,
ಪಿ.ಜಿ. ಡಿಪ್ಲೊಮಾದಲ್ಲಿ ಎಫಿಗ್ರಫಿ, ಡಿಪ್ಲೊಮಾ ಇನ್ ಯೋಗ

**ಸಂಪಾದಕರು**
ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ . ಪಿ. ರಾಮರಾಜು , ಎಮ್.ಎ.,
ವಿಶೇಷಾಧಿಕಾರಿ, ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ., ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಭಕ್ತಪ್ರಿಯ ಶ್ರೀರಾಮ | - ಹನುಮಂತ ಮ. ದೇಶಕುಲಕರ್ಣಿ | 07 |
| ಒಂಟಿಮಿಟ್ಟ | ---- | 09 |
| ಶ್ರೀರಾಮ ಜಯರಾಮ ಜಯ ಜಯ ರಾಮ | -ಎಚ್.ಎಸ್. ಸೀತಾಲಕ್ಷ್ಮೀ ಸತ್ಯಮೂರ್ತಿ | 10 |
| ಕ್ಷೇತ್ರ ದರ್ಶನ | - ವಿ. ನಾಗೇಂದ್ರ ಪ್ರಸಾದ್ | 12 |
| ಚಿತ್ರಾ ಪೂರ್ಣಿಮೆ | -ಡಾ॥ ಸುಮನ ಬದರೀನಾಥ್ | 16 |
| ದೊಡ್ಡಮಳೂರಿನ ಶ್ರೀ ಅಪ್ರಮೇಯ ದೇವಾಲಯ | - ಕೆಂಗೇರಿ ಚಕ್ರಪಾಣಿ | 18 |
| ಅಕ್ಷಯ ತೃತೀಯದ ಅಕ್ಷಯ ಫಲ | - ಸಚಿನ್ ಮುಂಗಿಲ | 22 |
| ಶ್ರೀ ವೇಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಜಿ.ಎನ್. ಶ್ರೀನಿವಾಸನ್ | 24 |
| ವಯಿರಮುಡಿ ಉತ್ಸವ (ಸಂ) | - ಡಾ॥ ಎನ್.ಕೆ. ರಾಮಶೇಷನ್ | 31 |
| ಶ್ರೀವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 34 |
| ನೈಷದ ಸಾಮ್ರಾಜ್ಞ | - ಡಾ॥ ವಾಣಿಶ್ರೀ ಬಿ.ಎಂ | 36 |
| ರಾಮಾಶ್ವಮೇಧದ ಪುಣ್ಯಭೂಮಿ ನೈಮಿಷಾರಣ್ಯ | - ಎಸ್. ಆರ್. ಪೂಜಾರ್ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 41 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 43 |
| ತಿರುವೈಗುಂದವಿಣ್ಣಗರಮ್ | - ಶ್ರೀಮತಿ ಸೂರ್ಯವಂಶಿ | 45 |
| ರಾಶಿಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಸಣ್ಣ ಕೆಲಸದಿಂದಲೇ ಪ್ರಾಮಾಣಿಕ ನಡೆ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಸುಗುಣಾಭಿರಾಮ | - ಕೆ. ವೆಂಕಟ ಅಪ್ಪಲಾಚಾರ್ಯ | 52 |


**ಮುಖಚಿತ್ರ -** ವಸಂತೋತ್ಸವದಲ್ಲಿ ಉಭಯದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿ, ತಿರುಮಲೆ

**ಹಿಂಬದಿಚಿತ್ರ -** ಶ್ರೀ ಸೀತಾಲಕ್ಷ್ಮಣ ಸಮೇತ ಪಟ್ಟಾಭಿರಾಮ ಸ್ವಾಮಿಯವರು, ವಾಯಲ್ಪಾಡು.

## ಸಂಪಾದಕೀಯ..............................

# ಶ್ರೀ ರಾಮರಕ್ಷ ಸರ್ವಜಗದ್ರಕ್ಷ

ಒಬ್ಬ ವ್ಯಕ್ತಿಯು ಆದರ್ಶವಂತನಾಗಿದ್ದರೆ ಆತನ ಕುಟುಂಬವೂ ಆದರ್ಶವಾಗಿರುತ್ತದೆ. ಒಬ್ಬ ವ್ಯಕ್ತಿಯು ಎಷ್ಟು ಆದರ್ಶವಂತನಾಗಿರಬೇಕೆಂದು ಶ್ರೀರಾಮನ ಉದಾಹರಣೆ ತೆಗೆದುಕೊಳ್ಳಬಹುದು. ಶ್ರೀರಾಮನಿಗಿಂತಲೂ ಮಿಗಿಲಾದ ಆದರ್ಶವಂತ ವ್ಯಕ್ತಿ ಮತ್ತೊಬ್ಬರಿಲ್ಲ. ಈ ಆಧುನಿಕ ಯುಗದಲ್ಲಿ ರಾಮಾಯಣವನ್ನು ಪಾರಾಯಣ ಮಾಡುತ್ತಿದ್ದೇವೆ. ಆದರೆ ಅದರಲ್ಲಿರುವ ಅರ್ಥವನ್ನು ಪರಮಾರ್ಥವನ್ನು ಸರಿಯಾಗಿ ಗ್ರಹಿಸಲಾರದೇ ಸೋಲುತ್ತಿದ್ದೇವೆ.

ರಾಮಾಯಣ ಮಹಾಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಒಬ್ಬಳೇ ಪತ್ನಿ, ಒಂದೇ ಬಾಣ ಎನ್ನುವ ಶ್ರೀರಾಮನ ನಿಯಮಗಳು, ಸ್ನೇಹಭಾವನೆ, ಪ್ರತಿಜ್ಞೆಯನ್ನು ನಡೆಸಿಕೊಡುವುದು,ಶಿಷ್ಟರನ್ನು ರಕ್ಷಿಸುವುದು, ಉದಾರತೆ-ಹೀಗೆ ಸೀತಾದೇವಿಯ ಪಾತಿವ್ರತ್ಯ, ಸಹನೆ, ಆದರ್ಶವಂತನಾದ ಧರ್ಮಾಚರಣೆ, ಪುತ್ರವಾತ್ಸಲ್ಯ, ದಶರಥನ ಪುತ್ರಪ್ರೇಮ, ಭರತಾದಿಗಳ ಸೋದರ ಪ್ರೇಮ,ಲಕ್ಷ್ಮಣನ ಸೇವೆ, ರಾಮಕಾರ್ಯಾದುರಂಧರನಾದ ಶ್ರೀಆಂಜನೇಯನ ಸ್ವಾಮಿ ಭಕ್ತಿ, ಸಮಯಪ್ರಜ್ಞೆ, ಬ್ರಹ್ಮಚರ್ಯಪರಿಪಾಲನೆ, ಭಕ್ತರನ್ನು ರಕ್ಷಿಸುವ ರೀತಿ ಇವೆಲ್ಲವೂ ಸೇರಿ ರಾಮಾಯಣ ಪವಿತ್ರತೆಗೆ ಪ್ರಚಾರಕ್ಕೆ ದಾರಿ ಮಾಡಿಕೊಟ್ಟವೆ.

ನಮ್ಮಲ್ಲಿ ಒಬ್ಬನಾಗಿ, ನಮ್ಮವನೇ ಆಗಿ, ನಮ್ಮಂತೆಯೇ ಕಷ್ಟಗಳನ್ನು ಅನುಭವಿಸಿದವನಾಗಿ ಇರುವುದರಿಂದಲೇ ರಾಮನೆಂದರೆ ಎಲ್ಲರಿಗೂ ಇಷ್ಟ!ಕಾಮಾಂಧನಾದವನಿಗೆ ಮರಣಶಿಕ್ಷೆ ತಪ್ಪುವುದಿಲ್ಲ ಎಂಬ ಧರ್ಮಸೂಕ್ಷ್ಮವನ್ನು ವಾಲಿಗೆ ಶ್ರೀರಾಮಚಂದ್ರನು ಉಪದೇಶಿಸಿದನು. ಸನಾತನ ಧರ್ಮವನ್ನು ಬಿಟ್ಟು ತಮ್ಮನಾದ ಸುಗ್ರೀವನ ಪತ್ನಿಯಾದ ರುಮಳನ್ನು ಸೆರೆಹಿಡಿದು ಪಾಪವನ್ನು ಮೂಟೆಕಟ್ಟಿಕೊಂಡ. ಕೇವಲ ಕಾಮಭಾವನೆಯಿಂದಲೇ ಪಾಪವನ್ನು ಮಾಡಿದ. ಅದಕ್ಕೇ ವಾಲಿಗೆ ಶ್ರೀರಾಮನು ಮರಣ ಶಿಕ್ಷೆಯನ್ನು ವಿಧಿಸಿದ. ಸೀತಾದೇವಿಯನ್ನು ಅಪಹರಿಸಿದ್ದರಿಂದಲೇ ರಾವಣಾಸುರನಿಗೆ ಮರಣ ತಪ್ಪಲಿಲ್ಲ.

ಕೈಕೇಯಿಯ ಕೋರಿಕೆಯ ಮೇರೆಗೆ, ಪಿತೃವಾಕ್ಯಪರಿಪಾಲನೆಗಾಗಿ ಕಾಡಿಗೆ ಹೋಗಿ, **"ಮಾತೃದೇವೋಭವ-ಪಿತೃದೇವೋಭವ"** ದಂತಹಾ ವೇದ ವಾಕ್ಯಗಳಿಗೆ ಶ್ರೀರಾಮನು ಉದಾಹರಣೆಯಾದ. ಸಹಧರ್ಮಚಾರಿಣಿಯಾದ ಜಾನಕಿಯನ್ನು ಬಿಟ್ಟು ಮತ್ತೊಬ್ಬ ಸ್ತ್ರೀಯನ್ನು ಕಣ್ಣೆತ್ತಿಯೂ ನೋಡದಂತಹಾ ಪುಣ್ಯಪುರುಷ ಶ್ರೀರಾಮ! ವಿಭೀಷಣನು ಶತ್ರುವರ್ಗದವನಾದರೂ ಶರಣಾದ್ದರಿಂದ ಇಲ್ಲವೆನ್ನದೇ ಆಶ್ರಯವನ್ನು ನೀಡಿದ.


ಏಕಪತ್ನೀವ್ರತ, ಶರಣಾಗತ ರಕ್ಷಣೆ, ಎಂಬ ಕಾರ್ಯಗಳನ್ನು ದೃಢದೀಕ್ಷೆಯಿಂದ ಮಾಡಿದ ದೃಢವ್ರತನೆಂದು ಹೆಸರು ಪಡೆದ ಕಲ್ಯಾಣಚಕ್ರವರ್ತಿ ನಮ್ಮ ಅಯೋಧ್ಯಾರಾಮ! ಸೋದರರು ಹೇಗೆ ನಡೆದುಕೊಳ್ಳಬೇಕು. ಹೇಗೆ ನಡೆದುಕೊಂಡರೆ ಒಳ್ಳೆಯ ಫಲವನ್ನು ಪಡೆಯಬಹುದು ಎನ್ನುವುದಕ್ಕೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರನ್ನು ನೋಡಿದರೆ ತಿಳಿಯುತ್ತದೆ. ಅಣ್ಣತಮ್ಮಂದಿರು ಹೇಗೆ ಇರಬಾರದೆಂದು ವಾಲಿ-ಸುಗ್ರೀವರು, ರಾವಣ-ಕುಂಭಕರ್ಣರನ್ನು ನೋಡಿದರೆ ತಿಳಿದುಬರುತ್ತದೆ. ಈ ರೀತಿ ಮನುಷ್ಯರನ್ನು ಪ್ರತಿನಿತ್ಯವೂ ಎಚ್ಚರಿಸುತ್ತಿರುವುದು ಈ ಶ್ರೀಮದ್ರಾಮಾಯಣ ಮಹಾಕಾವ್ಯವೆನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

ಧಾರ್ಮಿಕ ಶಕ್ತಿ, ಜೀವನ್ಮುಕ್ತಿಗೆ ಅತ್ಯಂತ ಸುಲಭವಾದ ಮಾರ್ಗವನ್ನು ಆತ ತೋರಿಸಿದ್ದಾನೆ. ತಿಳಿಯದೇ ತಪ್ಪು ಮಾಡಿದರೆ ತಪ್ಪಲ್ಲ ಅದರಲ್ಲೂ ಪ್ರಾಯಶ್ಚಿತ್ತವನ್ನು ಅನುಭವಿಸಿದರೆ ದೋಷವು ಇರುವುದಿಲ್ಲವೆಂದು ಭಾವಿಸಿ, ಭಸ್ಮಶಾಯಿನಿಯಾದವಳನ್ನು ಕನ್ಯೆಯಾಗಿ ಬದಲಿಸಿ ಪತಿತಪಾವನನು ಈ ಶ್ರೀರಾಮ! ಗಂಗಾಪುತ್ರನಾದ ಗುಹನ ಭಕ್ತಿಯನ್ನು ಅರಿತು ಅವನಿಗೆ ಆಲಿಂಗನ ಭಾಗ್ಯವನ್ನು ನೀಡಿದ ಸಮತಾಶೀಲ, ಪರಂಧಾಮ ನಮ್ಮಶ್ರೀರಾಮ! ಹಾಗೇ ಗಿರಿಜನ ಸ್ತ್ರೀಯಾದ ಶಬರಿಯ ಪ್ರೇಮವನ್ನು ಆದರಿಸಿ ಎಂಜಿಲು ಹಣ್ಣನ್ನು ಪ್ರೀತಿಯಿಂದ ಸ್ವೀಕರಿಸಿ ನಿಷ್ಕಲ್ಮಷವಾದ ಭಾವನೆಯನ್ನು ತಾರತಮ್ಯ ಭೇದಗಳನ್ನು ಪಾಲಿಸಬಾರದು ಎಂಬ ಪರಮಸತ್ಯವನ್ನು ಜಗತ್ತಿಗೇ ಸಾರಿದ ಪ್ರೇಮಮೂರ್ತಿ ಶ್ರೀರಾಮ!

ಜಟಾಯು, ಶಬರಿ, ವಿಭೀಷಣ, ಸುಗ್ರೀವ, ವಾನರರು, ಕಾಕಾಸುರ, ಪಶುಗಳು, ಪಕ್ಷಿಗಳು ಮೊದಲಾದವುಗಳ ನಡುವೆ ಹಿತಕರನಾಗಿ ಸಂಚಾರ ಮಾಡಿ, **"ಸರ್ವಭೂತೇಷು ಹಿತಃ"** ಎಂಬ ಹೆಸರನ್ನು ಪಡೆದಿರುವವನು ನಮ್ಮ ಶ್ರೀರಾಮ! ಸ್ನೇಹದ ಕುರಹಾಗಿ ಭಾಷೆಯನ್ನು ನೀಡಿ ವಾಲಿಯನ್ನು ಸಂಹರಿಸಿ ಸುಗ್ರೀವನಿಗೆ ಅವನ ರಾಜ್ಯವನ್ನು ಹಿಂದಿರುಗಿಸಿ, ಹೆಂಡತಿಯನ್ನು ಪುನಃ ಅವನಿಗೆ ಒಪ್ಪಿಸಿ ಸತ್ಯವಾಕ್ಯ ಪರಿಪಾಲಕನೆಂದು ನಿರೂಪಿಸಿಕೊಂಡವನು ನಮ್ಮ ಶ್ರೀರಾಮ!

ಶ್ರೀರಾಮನನ್ನು ದೇವರಾಗಿ ಪೂಜಿಸುವುದೇ ಅಲ್ಲದೇ, ನಿತ್ಯಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನೂ ಆತನನ್ನು ಆದರ್ಶವಾಗಿ ತಗೆದುಕೊಂಡು ಜೀವನವನ್ನು ನಡೆಸಿದಲ್ಲಿ ಈ ಪ್ರಪಂಚವೇ ಒಂದು ಅಯೋಧ್ಯವಾಗಿ ಪ್ರತಿಯೊಬ್ಬರೂ ಭಗವಂತನ ಸ್ವರೂಪರಾಗುವುದರಲ್ಲಿ ಸಂದೇಹವಿಲ್ಲ. ಅದೇ ಪರಮಸತ್ಯ.

**ಶ್ರೀ ರಾಮರಕ್ಷ ಸರ್ವಜಗದ್ರಕ್ಷ**




# ಭಕ್ತ ಪ್ರಿಯ ಶ್ರೀ ರಾಮ

– ಹನುಮಂತ ಮ. ದೇಶಕುಲಕರ್ಣಿ
94803 64915

ರಾಮನ ಇಚ್ಛೆಯಂತೇ ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ವಾನರ ಸೇನೆ ಅಣಿಗೊಂಡಿತು. ನೆಲ ಹಾಗೂ ನೀರು ಸೇತುವೆಯನ್ನು ನಿರ್ಮಿಸುವ ಉಸ್ತುವಾರಿ ಹೊತ್ತರು ಹೋಗಿ ಪರ್ವತಗಳನ್ನು ಎತ್ತಿಕೊಂಡು ಬಂದು ಸಮುದ್ರದಲ್ಲಿ ಎಸೆಯಿರಿ ಎಂದು ಶ್ರೀರಾಮ ವಾನರ ಸೇನೆಗೆ ಆಜ್ಞಾಪಿಸಿದ್ದ. ವಾನರ ಸೇನೆ ಪ್ರಭುವಿನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿತ್ತು. ಉತ್ಸಾಹದಿಂದ ಅಷ್ಟದಿಕ್ಕುಗಳಿಗೂ ವಾನರ ಸೇನೆ ಓಡಿತ್ತು. ಅಸಂಖ್ಯ-ಅಸಂಖ್ಯ ಪರ್ವತಗಳು ತಂದು ಸಮುದ್ರದಲ್ಲಿ ಧಬ ಧಬನೆ ಎಸೆದರು.

ಈ ವಾನರಸೇನೆಯಲ್ಲಿ ಅಧಿಕ ಬಲಶಾಲಿ ಆಂಜನೇಯ. ಆತ ಶರವೇಗದಿಂದ ಗೋವರ್ಧನ ಪರ್ವತದತ್ತ ಸಾಗಿದ. ಬಂದವನೇ ಪರ್ವತದ ಮೂಲಕ್ಕೆ ಕೈ ಹಾಕಿ ಎತ್ತಲು ಹವಣಿಸಿದ. ಆದರೆ ಪರ್ವತ ಮಾತ್ರ ಒಂದಿಂಚೂ ಕದಲಲಿಲ್ಲ. ಆಂಜನೇಯನ ಪ್ರಯತ್ನ ಕ್ಷೀಣಿಸುತ್ತ ಬಂತು.

ಆತನ ನಿರಾಶೆಯನ್ನು ಕಂಡ ಪರ್ವತರಾಜ ನಸುನಕ್ಕು ಆಂಜನೇಯ! ಶ್ರೀರಾಮದರ್ಶನ ಭಾಗ್ಯವನ್ನು ಕರುಣಿಸುವೆನೆಂದು ನನಗೆ ಪ್ರತಿಜ್ಞೆ ಮಾಡು. ಆಗ ನಾನೇ ನಿನ್ನೊಂದಿಗೆ ಬರುತ್ತೇನೆ ಎಂದು ಕೇಳಿಕೊಂಡ. ಪರ್ವತರಾಜನ ಮಾತನ್ನು ಕೇಳಿದ ಆಂಜನೇಯ. ಪರ್ವತರಾಜ!ನಿನಗೆ ಶ್ರೀರಾಮನ ದರ್ಶನವನ್ನು ಖಂಡಿತ ಮಾಡಿಸುತ್ತೇನೆಂದು ಪ್ರತಿಜ್ಞೆಗೈದ. ವಿಶ್ವಾಸದಿಂದ ಪರ್ವತರಾಜ ಗೋವರ್ಧನ ಹನುಮಂತನ ಕೈಯಲ್ಲಿ ಸುಶೋಭಿತನಾದ. ಆಂಜನೇಯ ಪರ್ವತವನ್ನು ಕೈಯಲ್ಲಿ ಹಿಡಿದು ಸಮುದ್ರದತ್ತ ಸಾಗಿದ.

ಗಿರಿಶಿಖರಗಳನ್ನು ದಾಟಿ ಆಂಜನೇಯ ಬೃಜಭೂಮಿಗೆ (ಒಂದು ಸ್ಥಳದ ಹೆಸರು) ಬಂದ. ಆ ಸಮಯದಲ್ಲಿ ಸೇತುವೆಯನ್ನು ಕಟ್ಟುವ ಕಾರ್ಯಮುಗಿಯುತ್ತಾ ಬಂದಿತ್ತು. ವಾನರರೇ! ಇನ್ನು ಪರ್ವತಗಳನ್ನು ತರಬೇಡಿ. ಪರ್ವತಗಳನ್ನು ನೀವಿರುವ ಪ್ರದೇಶದಲ್ಲೇ ಅವುಗಳನ್ನು ಪ್ರತಿಷ್ಠಾಪಿಸಿ ಎಂದು ಆಜ್ಞೆಗೈದ. ರಾಮನಾಜ್ಞೆಯನ್ನು ಕೇಳಿ ವಾನರರು ಅಲ್ಲಲ್ಲಿಯೇ ಪರ್ವತ



ಗಳನ್ನು ಇಟ್ಟುಬಿಟ್ಟರು. ಆದರೆ ಆಂಜನೇಯನ ಪರಿಸ್ಥಿತಿ...? ಆ ಕಡೆ ರಾಮನಾಜ್ಞೆಯನ್ನು ನಿರಾಕರಿಸುವಂತಿಲ್ಲ. ಈ ಕಡೆ ಕೊಟ್ಟ ಪ್ರತಿಜ್ಞೆಯನ್ನು ಮೀರುವಂತಿಲ್ಲ..!! ಆದರೆ ರಾಮನಾಜ್ಞೆಗಿಂತ ತನ್ನ ಪ್ರತಿಜ್ಞೆ ಚಿಕ್ಕದೆನಿಸಿತು. ಗೋವರ್ಧನ ಪರ್ವತವನ್ನು ಅಲ್ಲಿಯೇ ಪ್ರತಿಷ್ಠಾಪಿಸಿದ.

ಇದನ್ನು ನೋಡಿ ಪರ್ವತರಾಜನಿಗೆ ಕೋಪ ಬಂತು. ಆಂಜನೇಯ! ಶ್ರೀರಾಮದರ್ಶನವನ್ನು ಮಾಡಿಸುವೆನೆಂದು ಪ್ರತಿಜ್ಞೆಗೈದು ನನ್ನನ್ನು ಇಲ್ಲಿಯೇ ಪ್ರತಿಷ್ಠಾಪಿಸಿದೆಯಲ್ಲ! ಪತಿತ ಪಾವನ ಶ್ರೀರಾಮನ ದರ್ಶನ ನಾನೀಗ ಹೇಗೆ ಮಾಡಲಿ? ನಿನ್ನ ಪ್ರತಿಜ್ಞೆ ಭಂಗವಾಯಿತೆಂಬ ಅಪರಾಧಿ ಪ್ರಜ್ಞೆ ನಿನ್ನನ್ನು ಕಾಡುತ್ತಿಲ್ಲವೇ? ಹಂಗಿಸಿದ.


ಹನುಮಂತ ತಪ್ಪು ಮಾಡಿದೆನೆಂಬ ಪಾಪಪ್ರಜ್ಞೆ ಆತನನ್ನು ಕಾಡತೊಡಗಿತು. ಪರ್ವತರಾಜ!ನಿರಾಶೆಯನ್ನು ಹೊಂದಬೇಡ. ನಾನೀಗಲೇ ಶ್ರೀರಾಮನ ಸನಿಹ ಹೋಗಿ ಪ್ರಾರ್ಥಿಸುತ್ತೇನೆ. ದೀನದಯಾಳು ಶ್ರೀರಾಮ ನಿನ್ನನ್ನು ಕರೆತರಲು ಹೇಳಬಹುದು. ಆಗ ನಿನ್ನನ್ನು ಕೊಂಡೊಯ್ಯುತ್ತೇನೆ,ನೀನು ಶ್ರೀರಾಮನ ದರ್ಶನ ಮಾಡಬಲ್ಲೆ ಎಂದು ಆಶ್ವಾಸನೆ ನೀಡಿ ರಾಮನ ಹತ್ತಿರ ಧಾವಿಸಿದ.

ರಾಮನ ಸನಿಹ ಬಂದು ಶಿರಸಾಷ್ಟಾಂಗ ಪ್ರಣಾಮ ಮಾಡಿ ನಡೆದ ಘಟನೆಗಳನ್ನೆಲ್ಲಾ ವಿವರಿಸಿದ. ಆಗ ರಾಮ ಆಂಜನೇಯ! ಕೂಡಲೇ ನೀನು ಪರ್ವತರಾಜನಲ್ಲಿಗೆ ಹೋಗಿ ಶ್ರೀರಾಮ ದ್ವಾಪರಯುಗದಲ್ಲಿ ಶ್ರೀಕೃಷ್ಣನ ಅವತಾರ ತಾಳುತ್ತಾನೆ. ಆಗ ನಿನಗೆ ದರ್ಶನ ಭಾಗ್ಯವನ್ನು ನೀಡುತ್ತಾನೆ ಎಂದು ಹೇಳಿ ಆಶ್ವಾಸನೆ ನೀಡಿದ. ಹನುಮಂತ ವೇಗವಾಗಿ ಪರ್ವತ ರಾಜನ ಬಳಿ ಹೋದ. ಪರ್ವತರಾಜ! ಶ್ರೀರಾಮ ದ್ವಾಪರ ಯುಗದಲ್ಲಿ ಶ್ರೀಕೃಷ್ಣನ ಅವತಾರವೆತ್ತುವನಂತೆ. ಆಗ ನಿನಗೆ ದರ್ಶನಭಾಗ್ಯವನ್ನು ನೀಡುವನಂತೆ ಎಂದ, ಪರ್ವತ ರಾಜ ಆಗಲೆಂದು ತಲೆಯಾಡಿಸಿದ.

ದ್ವಾಪರಯುಗ ಬಂದೇ ಬಿಟ್ಟಿತು. ಶ್ರೀಕೃಷ್ಣನ ಅವತಾರವಾಯಿತು. ಆ ಸಮಯದಲ್ಲಿ ದೇವತೆಗಳ ರಾಜ ಇಂದ್ರನಿಗೆ ಬ್ರಜಪ್ರದೇಶದವರು ತನಗೆ ಪೂಜೆಯನ್ನು ಸಲ್ಲಿಸಿಲ್ಲವೆಂಬ ಕಾರಣಕ್ಕೆ ಕೋಪ ಬಂದಿತ್ತು,ಕೂಡಲೇ ಬ್ರಜಪ್ರದೇಶಕ್ಕೆ ಹೋಗಿ ಜೋರಾಗಿ ಮಳೆಸುರಿಸಿ, ಬ್ರಜಭೂಮಿ ಹಾಗೂ ಅಲ್ಲಿನ ನಿವಾಸಿಗಳನ್ನು ನಾಶಪಡಿಸು ಎಂದು ಮೋಡಕ್ಕೆ ಆಜ್ಞೆಯಿತ್ತ. ಮೋಡ ಸ್ವಾಮಿಯ ಆಜ್ಞೆಯನ್ನು ಅಕ್ಷರಶಃ ಪಾಲಿಸಿತು. ಅತಿವೃಷ್ಟಿಯಾಯಿತು. ಎಲ್ಲೆಲ್ಲೆಯೂ ಹಾಹಾಕಾರ ಮೊಳಗಿತು. ಜನ ಜೀವನ ಅಸ್ತವ್ಯಸ್ತವಾಯಿತು. ಎಲ್ಲರೂ ಭಯಭೀತರಾಗಿ ನಂದನ ಮನೆಗೆ ಓಡಿದರು. ಶ್ರೀಕೃಷ್ಣ ಎಲ್ಲರನ್ನೂ ಸಾಂತ್ವನಗೊಳಿಸಿದ.

ಬ್ರಜನಿವಾಸಿಗಳೇ ಹೆದರಬೇಡಿ. ಇಂದ್ರನ ಕೋಪ ನಮ್ಮನ್ನೇನೂ ಮಾಡಲಾರದು. ಎಲ್ಲರೂ ನನ್ನೊಂದಿಗೆ ಬನ್ನಿ ಎಂದು ಹೇಳಿ ನಂತರ ಶ್ರೀಕೃಷ್ಣ ಹಾಗೂ ಬ್ರಜನಿವಾಸಿಗಳು ಗೋವರ್ಧನ ಪರ್ವತದತ್ತ ಹೆಜ್ಜೆ ಹಾಕಿದರು. ಯುಗಯುಗಗಳಿಂದ ಭಗವಂತನ ದರ್ಶನಕ್ಕಾಗಿ ಗೋವರ್ಧನಗಿರಿ ತಹತಹಿಸುತ್ತಿತ್ತು. ಸ್ವಾಮಿಯ ದರ್ಶನದಿಂದ ಗೋವರ್ಧನಗಿರಿ ಪುನೀತವಾಯಿತು. ಹತ್ತಿಯಂತೇ ಗೋವರ್ಧನಗಿರಿ ಶ್ರೀಕೃಷ್ಣನ ಕಿರುಬೆರಳನ್ನು ಸೇರಿತು. ಬ್ರಜನಿವಾಸಿಗಳ ಆತಂಕ ದೂರವಾಯಿತು. ಇಂದ್ರನ ಅಹಂಕಾರ ಕ್ಷೀಣಿಸಿತು. ಹನುಮಂತನ ಪ್ರತಿಜ್ಞೆ ನೆರವೇರಿತು.





# ಒಂಟಿಮಿಟ್ಟ

## ಒಂಟಿಮಿಟ್ಟ ಎಲ್ಲಿದೆಯೆಂದರೆ...

ಒಂಟಿಮಿಟ್ಟ ಕೋದಂಡರಾಮ ದೇವಸ್ಥಾನದಲ್ಲಿ ಸೀತಾ ರಾಮ ಲಕ್ಷ್ಮಣರು ಒಂದೇ ಶಿಲೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿದ್ದಾರೆ. ಆದ್ದರಿಂದ ಈ ದೇವಾಲಯಕ್ಕೆ ಏಕಶಿಲಾನಗರವೆಂದು ಹೆಸರು. ಸುಪ್ರಸಿದ್ಧ ಪ್ರಾಚೀನ ಶ್ರೀರಾಮ ದೇವಾಲಯಗಳಲ್ಲಿ ಪ್ರಮುಖವಾದ ಪುಣ್ಯಕ್ಷೇತ್ರವೆಂದು ಈ ದೇವಾಲಯವು ಪ್ರಸಿದ್ಧಿ ಹೊಂದಿದೆ. ಇದು ವೈ.ಎಸ್. ಆರ್. ಕಡಪ ಜಿಲ್ಲೆಯ ಒಂಟಿಮಿಟ್ಟ ಗ್ರಾಮದಲ್ಲಿದೆ.

## ರಮಣೀಯ ಶಿಲ್ಪಸಂಪತ್ತು ಹೇಗಿದೆಯೆಂದರೆ...

ಈ ಒಂಟಿಮಿಟ್ಟ ಎನ್ನುವ ಕ್ಷೇತ್ರವು ಕಡಪದಿಂದ ರಾಜಂಪೇಟಕ್ಕೆ ಹೋಗುವ ಮಾರ್ಗದಲ್ಲಿ ಇದೆ. ತುಂಬಾ ದೂರದಿಂದಲೇ ಎತ್ತರವಾದ ಗೋಪುರಗಳಿಂದ ಸುವಿಶಾಲವಾದ ಪ್ರಾಂಗಣದಲ್ಲಿ ಸುಂದರ ಶಿಲ್ಪಗಳ ರಮಣೀಯವಾದ ನಿರ್ಮಾಣವು ನಮಗೆ ಕಾಣಿಸುತ್ತದೆ. ಈ ಆಲಯವು ನೋಡುಗರಿಗೆ ಬಹಳ ನಯನಮನೋಹರವಾಗಿ ಕಾಣಿಸುತ್ತದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಒಂದೇ ಶಿಲೆಯಲ್ಲಿ ಸೀತಾರಾಮ ಲಕ್ಷ್ಮಣರ ವಿಗ್ರಹಗಳನ್ನು ಸುಂದರವಾಗಿ ಕೆತ್ತಲಾಗಿದ್ದು ಶೋಭಾಯಮಾನವಾಗಿ ಕಾಣಿಸುತ್ತವೆ.

ದೇವಾಲಯದ ಮುಖ್ಯದ್ವಾರದ ಎದುರಿನಲ್ಲಿ ಶ್ರೀ ಸಂಜೀವರಾಯ ಸ್ವಾಮಿ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಇದನ್ನು ಮೂರು ಬಾರಿ ನಿರ್ಮಿಸಿದ್ದಾರೆಂದು ಆಲಯ ಮುಖ ಮಂಟಪದಲ್ಲಿನ ದೇವಾಲಯ ಚರಿತ್ರೆ ತಿಳಿಸುವ ಶಾಸನಗಳು 11ನೇ ಶತಮಾನದ ಶಿಲ್ಪಗಳು, ಶಾಸನಗಳ ಮೂಲಕ ಶ್ರೀಕೋದಂಡರಾಮ ದೇವಸ್ಥಾನದ ಮಹಾಗೋಪುರದ ಉತ್ತರ ಭಾಗದಲ್ಲಿ ಎರಡು ಶಾಸನಗಳಿವೆ. ಆಲಯಮುಖ ಮಂಟಪದಲ್ಲಿ ರಾಮಾಯಣ, ಮಹಾಭಾರತ ಕಥೆಗಳು, ದಶಾವತಾರಗಳು, ವಟಪತ್ರಶಾಯಿ, ಆಂಜನೇಯಸ್ವಾಮಿ ಸೇತುವೆ ಕಟ್ಟಲು ಅಗೆಯುತ್ತಿರುವ ದೃಶ್ಯ, ಬಾಲಕೃಷ್ಣನು ಗೋವರ್ಧನಗಿರಿಯನ್ನು ಎತ್ತುತ್ತಿರುವ ದೃಶ್ಯ, ಲಕ್ಷ್ಮಣನು ಮಾರ್ಛೆಹೋಗಿರುವ ದೃಶ್ಯ, ಸೀತಾದೇವಿಗೆ ಆಂಜನೇಯನು ಉಂಗುರ ನೀಡುವ ದೃಶ್ಯ, ಶ್ರೀಕೃಷ್ಣನ ಕಾಳೀಮರ್ದನ, ಬಾಲಕೃಷ್ಣನು ಪೂತನಿಯನ್ನು ಸಂಹರಿಸುವ ದೃಶ್ಯ, ಇನ್ನು ಎಷ್ಟೋ ತರಹದ ನರ್ತಕಿ ನರ್ತಕರ ದೃಶ್ಯಗಳು ನೋಡಲು ಸುಂದರವಾಗಿವೆ. ಎತ್ತರವಾದ ಕಲ್ಯಾಣ ಮಂಟಪದಲ್ಲಿ ಸೀತಾರಾಮರ ವಿವಾಹದ ಮುಂಚೆ ನಡೆಯುವ ಎದುರುಗೊಳ್ಳುವ ಮಂಟಪಗಳು, 160 ಅಡಿ ಎತ್ತರದ ಗಾಳಿಗೋಪುರ, ಮುಖ ಮಂಟಪದಲ್ಲಿ ಒಂದೇ ಕಲ್ಲಿನ ಮೇಲೆ ಆನೆ, ಹಸು ಮೊದಲಾದ ಶಿಲ್ಪಗಳಿವೆ.

## ತಿ.ತಿ. ದೇವಸ್ಥಾನಗಳ ರಕ್ಷಣೆಯಲ್ಲಿ...

ಪ್ರಸ್ತುತ ತೆಲಂಗಾಣ,ಆಂಧ್ರರಾಷ್ಟ್ರಗಳೆಂದು ವಿಭಜನೆಯಾದ ನಂತರ ಒಂಟಿಮಿಟ್ಟ ಕೋದಂಡರಾಮ ದೇವಾಲಯವನ್ನು ಬಹಳ ಅಭಿವೃದ್ಧಿ ಮಾಡಿ ದೇಶ ವಿದೇಶಗಳಲ್ಲಿ ಇದರ ಖ್ಯಾತಿಯನ್ನು ಹರಡುವಂತೆ ಮಾಡಬೇಕೆಂದು ನಿರ್ಣಯಿಸಲಾಗಿದೆ.ಇದನ್ನು ನಿರ್ವಹಿಸಲು ತಿರುಮಲೆ ತಿರುಪತಿ ದೇವಸ್ಥಾನದವರಿಗೆ ಅತ್ಯಧಿಕ ಬಾಧ್ಯತೆಯನ್ನು ನೀಡಲಾಗಿದೆ. ಅದರನ್ವಯ ಎಷ್ಟೊಂದು ಅಭಿವೃದ್ಧಿ ಕಾರ್ಯಗಳನ್ನು ಅಳವಡಿಸಿ ಶ್ರೀರಾಮನವಮಿ ಹಬ್ಬದಂದು ಅತ್ಯಂತ ವೈಭವೋಪೇತವಾಗಿ ಬ್ರಹ್ಮೋತ್ಸವಗಳನ್ನು ನಿರ್ವಹಿಸುತ್ತಿದೆ. ಎಷ್ಟೋ ರೀತಿಯ ಸೇವೆಗಳನ್ನು, ಆರ್ಜಿತ ಸೇವೆಗಳನ್ನು ಪ್ರಾರಂಭಿಸಿದ ಪುಷ್ಪಯಾಗವನ್ನು ಸಹ ಬಹಳ ವಿಜೃಂಭಣೆಯಿಂದ ನಡೆಸುತ್ತಿದೆ. ಇವುಗಳೆಲ್ಲವನ್ನೂ ತಿರುಮಲೆಯ ರೀತಿಯಲ್ಲಿ ಅಂಗರಂಗ ವೈಭವದಿಂದ ಮಾಡಲು ತಿ.ತಿ.ದೇ. ಸಹಾಯಹಸ್ತ ನೀಡಿದೆ.

ಈ ಕ್ರಮವಾಗಿ ಒಂಟಿಮಿಟ್ಟದಲ್ಲಿ ಶ್ರೀಕೋದಂಡರಾಮ ಸ್ವಾಮಿಯವರಿಗೆ ಬ್ರಹ್ಮೋತ್ಸವಗಳನ್ನು ಜರುಗಿಸಲಾಗುತ್ತಿದೆ. ಅವುಗಳನ್ನು ಎಷ್ಟೋ ಅಂಗರಂಗ ವೈಭವದಿಂದ ನಡೆಸಲಾಗುತ್ತದೆ. ಅವುಗಳು ವ್ಯಾಸಾಭಿಷೇಕ, ಅಂಕುರಾರ್ಪಣೆ, ಧ್ವಜಾರೋಹಣ, ಶೇಷವಾಹನ, ವೇಣುಗಾನಾಲಂಕಾರ, ಹಂಸವಾಹನ, ವಟಪತ್ರಶಾಯಿ ಅಲಂಕಾರ,ಸಿಂಹವಾಹನ, ನವನೀತ ಕೃಷ್ಣಾಲಂಕಾರ, ಹನುಮತ್ಸೇವೆ ಮೋಹಿನೀಸೇವೆ, ಗರುಡಸೇವೆ, ಶಿವಧನುರ್ಬಾಣಾಲಂಕಾರ, ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ, ರಥೋತ್ಸವ, ಕಾಳೀಯಮರ್ದನಾಲಂಕಾರ, ಅಶ್ವವಾಹನ, ಧ್ವಜಾವರೋಹಣದಂತಹ ವಾಹನ ಸೇವೆಗಳು ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳನ್ನು ಜರುಗಿಸಲಾಗುತ್ತದೆ.

ಈ ಬ್ರಹ್ಮೋತ್ಸವದಲ್ಲಿ ಆಂಧ್ರಪ್ರದೇಶ ರಾಜ್ಯ ಸರ್ಕಾರದ ಪರವಾಗಿ ಮುಖ್ಯಮಂತ್ರಿಯವರು ರೇಷ್ಮೆ ವಸ್ತ್ರವನ್ನು ಸಮರ್ಪಿಸುತ್ತಾರೆ. ಇದು ಒಂದು ಆಚರಣೆಯಾಗಿ ಇಲ್ಲಿ ನಡೆಯುತ್ತದೆ.

ಇನ್ನೂ ಅರ್ಜಿತಸೇವೆಗಳಾದ ಶ್ರೀ ಆಂಜನೇಯ ಸ್ವಾಮಿಗೆ ಅಭಿಷೇಕ, ಸೀತಾರಾಮರಿಗೆ ಶನಿವಾರಾಭಿಷೇಕ ಮತ್ತು ಹುಣ್ಣಿಮೆಯಂದು ಕಲ್ಯಾಣೋತ್ಸವಗಳು ಜರಗುತ್ತವೆ. ಹೀಗೆ ಒಂಟಿಮಿಟ್ಟ ಕೋದಂಡರಾಮ ದೇವಾಲಯವನ್ನು ಪ್ರಪಂಚದಲ್ಲಿರುವ ಪ್ರಸಿದ್ಧ ರಾಮಾಲಯಗಳಲ್ಲಿ ಒಂದಾಗಿ ಒಂಟಿಮಿಟ್ಟಕ್ಷೇತ್ರವೂ ಚಿರಸ್ಮರಣೀಯವಾಗಿದೆ.

# ಶ್ರೀ ರಾಮ ಜಯರಾಮ ಜಯ ಜಯ ರಾಮ

**– ಎಚ್.ಎಸ್. ಸೀತಾಲಕ್ಷ್ಮೀ ಸತ್ಯಮೂರ್ತಿ**



ಆದಿಕಾವ್ಯವಾಗಿರುವ ರಾಮಾಯಣ ಮಹಾಕಾವ್ಯವು, ಸಾರ್ವಕಾಲಿಕವಾಗಿಯು, ಸಾರ್ವದೇಶಿಕವಾಗಿಯು ಅತ್ಯಂತ ಪ್ರಚಲಿತವಾಗಿರುವ ಗ್ರಂಥವಾಗಿದೆ. ರಾಮಾಯಣದಿಂದ ಎಲ್ಲರಿಗೂ ಅವರವರ ಮನೋಧರ್ಮಕ್ಕೆ ಅನು ಸಾರವಾಗಿ ಮನೋರಂಜನೆ ದೊರೆಯುತ್ತದೆ.

ರಾಮ ತಪೋವನಾಭಿಗಮನಂ
ಹತ್ಯಾಮೃಗಂ ಕಾಂಚನಂ, ವೈದೇಹೀ ಹರಣಂ
ಜಟಾಯು ಮರಣಂ, ಸುಗ್ರೀವ ಸಂಭಾಷಣಂ
ವಾಲೀ ನಿಗ್ರಹಣಂ, ಸಮುದ್ರ ತರಣಂ
ಲಂಕಾಪುರೀದಾಹನಂ, ಪಶ್ಚಾತ್ ರಾವಣ
ಕುಂಭಕರ್ಣ ಮರ್ಥನಂ, ಏತತ್ ಹಿ ರಾಮಾಯಣಂ

ಶ್ರೀರಾಮಾಯಣದ ಪ್ರಮುಖ ಘಟನೆಗಳು, ಈ ಶ್ಲೋಕದಲ್ಲಿ ವರ್ಣಿತವಾಗಿರುತ್ತವೆ. ಶ್ರೀರಾಮನು ದಶರಥನ ಮಗನಾಗಿ ಜನಿಸಿದ ನಂತರದಲ್ಲಿ, ಅಯೋಧ್ಯೆಯಿಂದ ಅಡವಿಗೆ ತೆರಳುವುದು,ಬಂಗಾರದ ಜಿಂಕೆಯನ್ನು ಕೊಲ್ಲುವುದು, ರಾವಣನಿಂದ ಸೀತೆಯ ಅಪಹರಣ, ಜಟಾಯುವಿನ ಮರಣ ರಾಮನು, ಸುಗ್ರೀವನೊಡನೆ ಸಂಭಾಷಣೆ ಮಾಡುವುದು, ರಾಮನಿಂದ ವಾಲಿಯವಧೆ, ಸಮುದ್ರವನ್ನು ದಾಟುವುದು, ಕಪಿಸೈನ್ಯದೊಂದಿಗೆ ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ಅಲ್ಲಿ ಲಂಕಾಪಟ್ಟಣವನ್ನು ಸುಡುವುದು ಕೊನೆಗೆ ರಾವಣ, ಕುಂಭಕರ್ಣ ಮೊದಲಾದವರನ್ನು ನಾಶಪಡಿಸುವುದು. ಇದು ರಾಮಾಯಣದ ಪ್ರಮುಖ ಸಾರಾಂಶ. ಈ ಗಡಿಬಿಡಿಯ ಜೀವನ ಶೈಲಿಯಲ್ಲಿ ದೇವರ ಧ್ಯಾನಕ್ಕೆ ಬಿಡುವು ಇರುವುದಿಲ್ಲ. ಆಗ ಈ ಶ್ಲೋಕವನ್ನಾದರೂ ಹೇಳಿಕೊಂಡರೆ ರಾಮಾಯಣ ಪಾರಾಯಣ ಮಾಡಿದ ಹಾಗೆ ಆಗುತ್ತದೆ.

ವಾಲ್ಮೀಕಿ ರಾಮಾಯಣವು 20,000 ಶ್ಲೋಕಗಳಿಂದ ಕೂಡಿದ ಮಹಾಕಾವ್ಯ ಇದು ವಿಶ್ವದಲ್ಲಿಯೇ ಮೇರುಕೃತಿಯಾಗಿದೆ. ಮರ್ಯಾದ ಪುರುಷೋತ್ತಮನಾದ ಶ್ರೀರಾಮನ ದಿವ್ಯಚರಿತ್ರೆಯನ್ನು ಭಕ್ತಿಭಾವದಿಂದ ಭಾರತದಲ್ಲಿ ಪ್ರತಿ ದಿನವೂ ಪಾರಾಯಣ ಮಾಡುವ ಜನರಿದ್ದಾರೆ. ಇದು 2000 ವರ್ಷಗಳಿಗಿಂತಲೂ ಮುಂಚೆ ರಚಿತವಾಗಿದೆ ಎಂದು ಹೇಳುತ್ತಾರೆ. ಇದನ್ನು ಅನೇಕ ಭಾಷೆಗಳಲ್ಲಿ ಭಾಷಾಂತರ ಮಾಡಲಾಗಿದೆ. ಶ್ರೀರಾಮಮಂತ್ರವು **"ತಾರಕಮಂತ್ರ"** ವೆಂದೇ ಪ್ರಸಿದ್ಧಿಯಾಗಿದೆ. ರಾಮನ ಜನ್ಮದಿನವನ್ನು **"ರಾಮನವಮಿ"** ಹಬ್ಬವಾಗಿ ದೇಶದ ತುಂಬೆಲ್ಲಾ ಸಡಗರದಿಂದ ಆಚರಿಸುತ್ತಾರೆ. ಆಗ ವಿದ್ವಾಂಸರುಗಳಿಂದ ರಾಮಾಯಣದ ಬಗ್ಗೆ ಉಪನ್ಯಾಸಗಳು, ಸಂಗೀತ, ಪಾರಾಯಣಗಳು ವಿಜೃಂಭಣೆಯಿಂದ ನಡೆಯುತ್ತದೆ.

ಚೈತ್ರ ಶುದ್ಧ ನವಮಿಯಂದು ಶ್ರೀರಾಮನ ಜನುಮವಾಯಿತು. ಇವನು ನಾರಾಯಣನ ಅವತಾರ, ಭೂಮಿಯಲ್ಲಿ ದಶರಥನ ಮಗನಾಗಿ ಬೆಳೆದ, ಇವನನ್ನು ದಶರಥರಾಮ ಎನ್ನುತ್ತಾರೆ. ಈತನ ತಾಯಿ ಕೌಸಲ್ಯೆ ಸಹೋದರರು ಭರತ, ಲಕ್ಷ್ಮಣ, ಶತ್ರುಘ್ನರು. ಈತನ ಪತ್ನಿ ಸೀತೆ, ಬಾಲ್ಯದಲ್ಲೇ ವಿಶ್ವಾಮಿತ್ರರ ನೇತೃತ್ವದಲ್ಲಿ ಸುಬಾಹು,ತಾಟಕೆಯರನ್ನು ಕೊಂದನು. ಸೀತಾಪರಿಣಯವಾಗಿ ಬರುವಾಗ ಪರಶುರಾಮನ ಗರ್ವ ಭಂಗ ಮಾಡಿದನು. ದಶರಥ ಮಹಾರಾಜನು ರಾಮನಿಗೆ



ಪಟ್ಟಾಭಿಷೇಕವನ್ನು ಮಾಡಬೇಕೆಂದಾಗ ರಾಜನ ಕಿರಿಯ ರಾಣಿ ಕೈಕೆಯ ದಾಸಿಯಾದ ಮಂಥರೆಯು ಅದಕ್ಕೆ ವಿಘ್ನ ತಂದು, ರಾಮನನ್ನು ಹದಿನಾಲ್ಕು ವರುಷ ವನವಾಸಕ್ಕೆ ಕಳುಹಿಸಲು ಸಂಚು ಮಾಡಿ, ವನವಾಸಕ್ಕೆ ಕಳುಹಿಸಿದರು. ವನವಾಸದಲ್ಲಿ ರಾವಣನು ಸೀತಾಪಹರಣವನ್ನು ಮಾಡಲು ಸುಗ್ರೀವ, ಹನುಮಂತ ಮೊದಲಾದವರ ಸ್ನೇಹದಿಂದ ಸೀತೆಯಿರುವ ಜಾಗವನ್ನು ತಿಳಿದು, ಲಂಕೆಗೆ ಹೋಗಲು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಯುದ್ಧದಲ್ಲಿ ರಾವಣನನ್ನು ಕೊಂದನು. ಸೀತಾಲಕ್ಷ್ಮಣ, ಹನುಮಂತರೊಡನೆ ಅಯೋಧ್ಯೆಗೆ ಬಂದನು ಅಲ್ಲಿ ರಾಮನಿಗೆ ಪಟ್ಟಾಭಿಷೇಕವಾಯಿತು. ಒಬ್ಬ ಮಡಿವಾಳನು ಸೀತೆಯನ್ನು ನಿಂದಿಸಿ ಮಾತನಾಡಿದುದಕ್ಕೆ ಬೇಸರಿಸಿ ತುಂಬು ಗರ್ಭಿಣಿ ಸೀತೆಯನ್ನು ವಾಲ್ಮೀಕಿ ಆಶ್ರಮದ ಬಳಿ ಬಿಟ್ಟು ಬರಲು ಹೇಳಿದನು. ಸೀತೆಯು ವಾಲ್ಮಿಕಿ ಮುನಿಗಳ ಆಶ್ರಮದಲ್ಲಿ ಲವ,ಕುಶರಿಗೆ ಜನ್ಮವಿತ್ತಳು. ಮಕ್ಕಳಿಗೆ ಮುನಿಗಳು ರಾಮಾಯಣವನ್ನು ರಾಗವಾಗಿ ಹೇಳುವುದನ್ನು ಹೇಳಿಕೊಟ್ಟರು. ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಿದನು. ಯಮನ ಸೂಚನೆಯಂತೆ ಕೊನೆಗೆ ತನ್ನ ವಾಸಸ್ಥಾನ ವೈಕುಂಠವನ್ನು ಸೇರಿದನು.

ರಾಮಾಯಣವು ಆದರ್ಶ ಜೀವನಕ್ಕೆ ಮಾರ್ಗದರ್ಶನ ಮಾಡುತ್ತದೆ. ಮಾನವರು ಉತ್ತಮ ಗುಣಗಳನ್ನು ಹೊಂದಿ ಉತ್ತಮ ನಡವಳಿಕೆಯನ್ನು ಮೈಗೂಡಿಸಿಕೊಳ್ಳಬೇಕು. ಜೀವನದಲ್ಲಿ ಬರುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕೆಂದು ರಾಮಾಯಣವು ಒಂದು ವರ್ಗಕ್ಕೆ ಮೀಸಲಾಗಿರುವುದಿಲ್ಲ ಇದು ಎಲ್ಲಾ ಜನಾಂಗದವರಿಗೂ ದಾರಿ ದೀಪ.

ಹಲವಾರು ಆದರ್ಶ ವ್ಯಕ್ತಿತ್ವವನ್ನು ನಾವು ರಾಮಾಯಣದಲ್ಲಿ ಕಾಣಬಹುದು. ವಸಿಷ್ಠರ ಧೀಮಂತಿಗೆ, ಹನುಮಂತನ ನಿಸ್ವಾರ್ಥ ಸೇವೆ, ಭಕ್ತಿ, ಶಬರಿಯ ಮುಗ್ಧ ಭಕ್ತಿ, ಇಂದ್ರಜಿತನ ಪರಾಕ್ರಮ, ಲಕ್ಷ್ಮಣನ ಭ್ರಾತೃವಾತ್ಸಲ್ಯ, ಭರತನ ಪ್ರೀತಿ ಇವೆಲ್ಲವೂ ಮಾನವೀಯ ಗುಣಗಳನ್ನು ವಿಶ್ಲೇಷಿಸಿ ಮಾರ್ಗದರ್ಶನ ಮಾಡುತ್ತವೆ. ಆರಂಭದಿಂದ ಕಡೆಯವರೆವಿಗೂ ಶ್ರೀರಾಮನ ಮಹಿಮೆಯಿಂದಾಗಿ ರಾಮಾಯಣ ಎನ್ನುವ ಹೆಸರೇ ಪ್ರಸಿದ್ಧಿಯಾಗಿದೆ.

ವಾಲ್ಮೀಕಿ ಮಹರ್ಷಿಗಳಿಗೆ ನಾರದರು ಶ್ರೀರಾಮನ ಕಥೆಯನ್ನು ತಿಳಿಸಿದರು. ಬ್ರಹ್ಮದೇವನು ವಾಲ್ಮೀಕಿಗಳ ಆಶ್ರಮಕ್ಕೆ ಹೋಗಿ ತಮ್ಮ ದಿವ್ಯದೃಷ್ಟಿಯ ಪ್ರಭಾವದಿಂದ ವಾಲ್ಮೀಕಿ ಮುನಿಗಳಿಗೆ ಶ್ರೀರಾಮನ ಜೀವನದ ಎಲ್ಲಾ ಘಟನೆಗಳು ತಿಳಿಯುವಂತೆ ಅನುಗ್ರಹಿಸುವುದಾಗಿ ಹೇಳಿದರು. ಬ್ರಹ್ಮದೇವನ ದಿವ್ಯದೃಷ್ಟಿಯ ಪ್ರಭಾವದಿಂದ 24 ಸಾವಿರ ಶ್ಲೋಕಗಳ ರಾಮಾಯಣವನ್ನು ರಚಿಸಿದರು. ಮುಖ್ಯವಾಗಿ ಬಾಲಕಾಂಡ, ಅಯೋಧ್ಯಕಾಂಡ, ಅರಣ್ಯಕಾಂಡ, ಕಿಷ್ಕಿಂದಕಾಂಡ, ಸುಂದರಕಾಂಡ, ಯುದ್ಧ ಕಾಂಡ ಮತ್ತು ಉತ್ತರಕಾಂಡವೆಂದು ಏಳು ಭಾಗ ಮಾಡಿ ಬರೆದಿದ್ದಾರೆ.

ಸುಂದರವಾದ ಈ ರಾಮಾಯಣ ಲೋಕ ಪ್ರಸಿದ್ಧಿಯಾಗಿದೆ. ರಾಮ ಎಂದೋ ಆಗಿ ಹೋದ ವ್ಯಕ್ತಿಯಲ್ಲ ಎಂದೆಂದಿಗೂ ಇರುವ, ಪ್ರತಿನಿತ್ಯವೂ ನಮ್ಮಲ್ಲಿ ಅವತರಿಸುತ್ತಿರುವ ಮಹಾಶಕ್ತಿ. ಇದು ಬರಿ ಹಾಡುಗಾರಿಕೆ, ಉಪನ್ಯಾಸ ಪ್ರವಚನ ವಲ್ಲ, ರಾಮಾಮೃತಪಾನವನ್ನು ಬಯಸುವವರು ತ್ರಿಕರಣ ಶುದ್ಧನೂ ಪವಿತ್ರನೂ, ನೈಜ ಭಕ್ತನೂ ಆಗಿರಬೇಕು. ದೈಹಿಕ ವ್ಯಾಧಿಗಳಿಗಿಂತಲು ಹೆಚ್ಚು ಕೆಡುಕಿನ ವ್ಯಾಧಿಗಳಾದ ಮೋಹ, ದ್ವೇಷಾದಿಗಳನ್ನು ನಿವಾರಿಸಲು ರಾಮನಾಮವು ದಿವ್ಯೌಷಧಿ, ರಾಮ ಮಹಿಮೆಗೆ ಅಂಜಿ ಬರುವುದಿಲ್ಲ, ಅರಿತು ಬಾಳುವುದು ಮೇಲು, ರಾಮಾಯಣ ಬರಿಯ ಪೂಜಾ ಗ್ರಂಥವಾಗದೆ, ರಾಮನಾಮ ಸ್ಮರಣೆ ಬರಿಯ ತುಟಿ ಮಾತಾಗದೆ ನಮ್ಮ ಹೃದಯ ದಾಳದಿಂದ ಭಕ್ತಿ,ಶ್ರದ್ಧೆಯಿಂದ ಬಾಳ್ವೆಯ ಬೆಳಕನ್ನು ಪಡೆಯುವ ಸಾಧನವಾಗಬೇಕು.

## ಕಳೆದ ಸಂಚಿಕೆಯಿಂದ

### ಮನೋಕಾಮನ ದುರ್ಗಾ ಮಂದಿರ:-

ಕಠ್ಮಂಡುವಿನಿಂದ 130 ಕಿ.ಮೀ ದೂರದಲ್ಲಿದೆ. ರಸ್ತೆಗಳು ಬಹಳ ಕಿರಿದಾಗಿದ್ದು ಮಾರ್ಗವನ್ನು ಕ್ರಮಿಸಲು ಸುಮಾರು 6 ಗಂಟೆಗಳು ಬೇಕು ಇದು ಕಫಕ್‌ದಾದಾ ಎಂಬ ಪರ್ವತದ ಮೇಲೆ ದುರ್ಗೆಯ ಗುಡಿಯಿದೆ. ನಮ್ಮ ಮನಸ್ಸಿನ ಬಯಕೆಗಳನ್ನು ನೆರವೇರಿಸುವುದರಿಂದ ಇದಕ್ಕೆ ಮನೋಕಾಮನ ಎನ್ನಲಾಗಿದೆ. ದುರ್ಗೆಯ ಮಂದಿರವನ್ನು ತಲುಪಲು ಕೇಬಲ್ ಕಾರ್ ಬಳಸಬೇಕು. ಕೇಬಲ್ ಕಾರಿನಲ್ಲಿ ಸುಮಾರು 17 ನಿಮಿಷಗಳ ಪ್ರಯಾಣ ಮಾಡಿದರೆ ಬೆಟ್ಟದ ಮೇಲಿರುವ ಮಂದಿರವನ್ನು ತಲುಪಬಹುದು. ಚತುರ್ಭುಜಳಾಗಿ ಆಯುಧಪಾಣಿಯಾಗಿ ದುರ್ಗೆ ಇಲ್ಲಿ ನೆಲೆಸಿದ್ದಾಳೆ. ಇಲ್ಲಿ ಬೆಟ್ಟದ ಕೆಳಗೆ ತ್ರಿಶೂಲಿ ಹಾಗೂ ಮತ್ಸ್ಯಗಂಧಿ ನದಿ ಸಂಗಮವಾಗಿ ಹರಿಯುತ್ತದೆ.

ನಮಗೆ ಪೌರಾಣಿಕವಾಗಿ ಬಹಳ ಮುಖ್ಯವಾದ ಸ್ಥಳ. ಭಾಗವತದ ಪಂಚಮಸ್ಕಂದದಲ್ಲಿ ಋಷಭನಾಮಕ ಪರಮಾತ್ಮನ ಮಗನಾದ ಭರತನ ಕಥೆಯಿದೆ. ಆ ಎಲ್ಲಾ ಸ್ಥಳಗಳು ನಮಗೆ ಇಲ್ಲಿಂದ ಜೋಮ್‌ಸಮ್ ಹೋಗುವವರೆಗೂ ನೋಡಲು ಸಿಗುತ್ತದೆ. ಪ್ರಸಿದ್ಧವಾದ ದುರ್ಗೆಯ ಮಂದಿರ ಬೆಟ್ಟದ ಮೇಲಿದ್ದರೂ ತ್ರಿಶೂಲಿ ಹಾಗೂ ಮತ್ಸ್ಯಗಂಧಿ ನದಿ ಹರಿಯುವ ದಡದಲ್ಲೆ ಪುರಾತನವಾದ ಭದ್ರಕಾಳಿ ಮಂದಿರವಿದೆ. ಮನೋಕಾಮನ ಜಾಗದ ಕೇಬಲ್ ಕಾರ್ ಹತ್ತುವ ಮೊದಲು 2 ಕಿ.ಮೀ. ಮೊದಲು ಈ ದೇವಸ್ಥಾನವಿದೆ (ಭದ್ರಕಾಳಿ ಮಂದಿರ್) ಭಾಗವತದಲ್ಲಿಯೂ ಭದ್ರಕಾಳಿ ದೇವಸ್ಥಾನ ಎಂದೇ ಉಲ್ಲೇಖವಿದೆ.

**–ಸಜ್ಜನ ವಿಧೇಯ. ವಿ. ನಾಗೇಂದ್ರ ಪ್ರಸಾದ್**
**98454 00816**

### ಪೋಖರಾ:-

ಮನೋಕಾಮನದಿಂದ 96 ಕಿ.ಮೀ. ದೂರದಲ್ಲಿ ಪೋಖರಾ ನಗರವಿದೆ. ಮಾರ್ಗವನ್ನು ಕ್ರಮಿಸಲು ಸುಮಾರು 5 ಗಂಟೆಗಳು ಬೇಕಾಗುವುದು. ಕಠ್ಮಂಡುವನ್ನು ಹೋಲಿಸಿದರೆ ಪೋಖರಾನಗರ ಸಮತಟ್ಟು ಭೂಮಿಯಲ್ಲಿದೆ. ಇಲ್ಲಿ ಬಹಳಷ್ಟು ಪ್ರವಾಸಿ ತಾಣಗಳಿದ್ದು ಜನರನ್ನು ಆಕರ್ಷಿಸುವ ಸ್ಥಳ. ಪೋಖರಾ ಬಿಟ್ಟು ಜೋಮ್ ಸಮ್ ಪಟ್ಟಣವನ್ನು ಹೋಗುವ ದಾರಿಯಲ್ಲಿ ಗಂಡಕಿ ನದಿ ನಮ್ಮೊಡನೆ ಬರುವುದು ಕಾಣಬಹುದು.

### ಪುಮ್‌ಡಿಕೋಟ್ ರುದ್ರದೇವರು:

51 ಅಡಿಗಳ ಭವ್ಯವಾದ ರುದ್ರದೇವರ ಪ್ರತಿಮೆಯಿದೆ ಇದಕ್ಕೆ ಬುನಾದಿಯಾಗಿ 57 ಅಡಿಗಳ ಒಂದು ಬಿಳಿಯಾದ ಗೊಮ್ಮಟ (ಸ್ತೂಪ) ಆಸರೆಯಾಗಿದೆ. ಒಟ್ಟು ನೆಲದಿಂದ 108 ಅಡಿಗಳ ಎತ್ತರದಲ್ಲಿ ರುದ್ರದೇವರ ಪ್ರತಿಮೆಯಿದೆ. ಕೈಯಲ್ಲಿ ತ್ರಿಶೂಲ ಹಿಡಿದು ವೀರಾಸನದಲ್ಲಿ ರುದ್ರದೇವರು ಆಸೀನರಾಗಿದ್ದಾರೆ. ಇದು ಕೇವಲ ಪ್ರವಾಸಿ ತಾಣವಷ್ಟೆ ಯಾವುದೇ ಪೌರಾಣಿಕ ಹಿನ್ನೆಲೆಯಿಲ್ಲ. ಕರ್ನಾಟಕದ ಮುರುಡೇಶ್ವರದ





ಲ್ಲಿಯೂ ನಾವು ಇಂತಹುದೇ ರುದ್ರದೇವರ ಪ್ರತಿಮೆಯನ್ನು ನೋಡಬಹುದು. ಎರಡೂ ಪ್ರತಿಮೆಗಳಿಗೂ ಒಂದೇ ವಿಧವಾದ ಹೋಲಿಕೆಯಿದೆ. ಈ ಜಾಗ ಶಿಖರದ ತುತ್ತ ತುದಿಯಲ್ಲಿದೆ. ಇಲ್ಲಿಂದ ನಾವು ಮೌಂಟ್ ಅನ್ನಪೂರ್ಣದ ಹಿಮಾಚ್ಛಾದಿತ ಪರ್ವತ ಶ್ರೇಣಿಗಳನ್ನು ನೋಡಬಹುದು.

### ತಲ್ ಬಾರಾಹಿ ದೇವಸ್ಥಾನ:-

ನಗರದ ಮಧ್ಯಭಾಗದಲ್ಲಿ ಫೆವಾ ಎಂಬ ಸರೋವರವಿದೆ. ಸರೋವರದ ಮಧ್ಯಭಾಗದಲ್ಲಿ ಬಾರಾಹಿ ಅರ್ಥಾತ್ ವಾರಾಹಿ ಅಂದರೆ ಪಾರ್ವತಿಯ ದೇವಸ್ಥಾನವಿದೆ. ಇಲ್ಲಿಯ ಪ್ರಮುಖವಾದ ಆಕರ್ಷಣೆ ಎಂದರೆ ಸಂಜೆ 6 ಗಂಟೆಗೆ ಆರತಿ ಆಗುತ್ತದೆ ಅದರ ನಂತರ ದೇವಸ್ಥಾನವನ್ನು ಮುಚ್ಚುತ್ತಾರೆ. ಸರೋವರದ ಮಧ್ಯದಲ್ಲಿರುವುದರಿಂದ ದೇವರ ದರ್ಶನ ಮಾಡಲು ದೋಣಿಗಳಲ್ಲಿ ಹೋಗಬೇಕು.

### ಬಿಂಧ್ಯಭಾಸಿನಿ ಮಂದಿರ್ (ವಿಂಧ್ಯವಾಸಿನಿ)


ಪೋಖರಾದ ಅತ್ಯಂತ ಪುರಾತನ ಮಂದಿರ ಎಂದು ಹೇಳಲಾಗುತ್ತದೆ. ಇಲ್ಲಿ ದುರ್ಗೆ ಪ್ರತಿಷ್ಠಿತಳಾಗಿದ್ದಾಳೆ. ಇವಳು ಮುಕ್ತಿನಾಥನ ತಂಗಿ ಎಂಬ ಪ್ರತೀತಿ ಇದೆ. ಬಹಳ ವಿಶಾಲವಾದ ಮಂದಿರ ದುರ್ಗೆಯ ಸುತ್ತಮುತ್ತ ಸೂರ್ಯನಾರಾಯಣ, ವೀಣಾಪಾಣಿ ಲಕ್ಷ್ಮಿ, ಪಶುಪತಿನಾಥ, ರುದ್ರ, ಗಣಪತಿ, ಲಕ್ಷ್ಮೀನಾರಾಯಣ, ರಾಧಾಕೃಷ್ಣ ಹಾಗೂ ರಾಮ ಸೀತೆಯರ ವಿಗ್ರಹಗಳನ್ನೊಳಗೊಂಡ ಮಂದಿರಗಳಿವೆ. ಪೋಖರಾ ವೈಷ್ಣವ ಕ್ಷೇತ್ರ ಎಂದು ಹೇಳಲು ಈ ಮಂದಿರ ಒಂದು ಜ್ವಲಂತ ಸಾಕ್ಷಿ.


### ದೇವೀಸ್ ಫಾಲ್ಸ್ :-

ಇದು ಒಂದು ಜಲಪಾತ. ನಮಗೆ ಒಂದು ಸಣ್ಣ ಜಲಪಾತವಾಗಿ ಕಂಡರೂ ಮಳೆಗಾಲದಲ್ಲಿ ಇದರ ಘೋರ್ಗತವನ್ನು ಸುಮಾರು 2 ಕಿ.ಮೀ.ದೂರ ಕೇಳಿಸುತ್ತದೆ ಎಂದು ಇಲ್ಲಿಯವರು ಹೇಳುತ್ತಾರೆ. ಈ ಜಲಪಾತದಿಂದ ಹರಿವ ನೀರು ಹತ್ತಿರದಲ್ಲೇ ಇರುವ ಗುಪ್ತೇಶ್ವರ ಗುಹೆಗೆ ಹರಿದು ಹೋಗುತ್ತದೆ. ದೇವೀಸ್‌ಫಾಲ್ಸ್ ಎಂಬ ಹೆಸರು ಬರಲು ಡೇನಿಯಲ್ ಹಾಗೂ ದೇವಿ ಎಂಬ ದಂಪತಿಯರು 1961 ರಲ್ಲಿ ಇಲ್ಲಿ ಈಜಲು ನೀರಿಗೆ ಇಳಿದರಂತೆ. ನೀರಿನ ರಭಸಕ್ಕೆ ದೇವಿ ಕೊಚ್ಚಿಕೊಂಡು ಹೋದಳು. ಅಂದಿನಿಂದ ಈ ಜಾಗವನ್ನು ದೇವೀಸ್‌ಫಾಲ್ಸ್ ಎಂದು ಕರೆಯುತ್ತಾರೆ.

### ಗುಪ್ತೇಶ್ವರ ಗುಹೆ :-

ರಸ್ತೆಯ ಒಂದು ಬದಿಯಲ್ಲಿ ದೇವೀಸ್‌ಫಾಲ್ಸ್ ಇದ್ದರೆ ರಸ್ತೆಯ ಇನ್ನೊಂದು ಬದಿಯಲ್ಲಿ ಗುಪ್ತೇಶ್ವರ ಗುಹೆ ಇದೆ. ಇಲ್ಲಿ ರುದ್ರದೇವರು ಗುಪ್ತರಾಗಿ ತಪಸ್ಸು ಮಾಡುತ್ತಿರುವ ಜಾಗ, ಭೂಮಿಯಿಂದ ಸುಮಾರು 500 ಮೆಟ್ಟಿಲುಗಳನ್ನು ಇಳಿದಾಗ ಕಾಣುವ ಸುಂದರವಾದ ರುದ್ರದೇವರ ಲಿಂಗ. ಲಿಂಗಕ್ಕೆ ಶೇಷ ಕೊಡೆಯಾಗಿ ನಿಂತಿದ್ದಾನೆ. ಈ ಲಿಂಗದ ವಿಶೇಷವೆಂದರೆ ಎಲ್ಲ ಲಿಂಗಗಳಂತೆ ನುಣುಪಾಗಿಲ್ಲ, ಬಹಳ ಒರಟಾಗಿದೆ ಹಾಗೂ ಲಿಂಗದ ಮಧ್ಯಭಾಗದಲ್ಲಿ ಅರ್ಧನಾರೀಶ್ವರನ ಕೆತ್ತನೆ ಇದೆ. ಬೆಳಕಿನ ಅಭಾವದಿಂದ ಇದು ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಇಲ್ಲಿಂದ ಕೆಳಗೆ ಸುಮಾರು 200 ಮೆಟ್ಟಿಲುಗಳು ಇಳಿ






ದರೆ ಕತ್ತಲೆಯ ಪ್ರದೇಶ ಅದರ ಮಧ್ಯ ದೇವೀಸ್‌ಫಾಲ್ಸ್‌ನಿಂದ ಬಂದ ನೀರು ಇಲ್ಲಿ ಜಲಪಾತವಾಗಿ ಹರಿಯುತ್ತದೆ. ಈ ತಾಣಕ್ಕೆ ಪೌರಾಣಿಕ ಹಿನ್ನೆಲೆ ಇದೆ ಎಂದು ಇಲ್ಲಿನ ಕೆತ್ತನೆಗಳು ಸೂಚಿಸುತ್ತವೆ. ಗುಹೆಯ ಮೇಲು ಭಾಗದಲ್ಲಿ ಸಮುದ್ರಮಥನದ ದೃಶ್ಯವಿದು ಮಧ್ಯದಲ್ಲಿ ರುದ್ರದೇವರು ನಾಲಿಗೆ ಹೊರ ಚಾಚಿ ವಿಷವನ್ನು ಪಾನ ಮಾಡುತ್ತಿದ್ದಾರೆ. ಪ್ರಾಯಃ ಸಮುದ್ರಮಥನದ ಸಂದರ್ಭದಲ್ಲಿ ವಿಷಪಾನ ಮಾಡಿದ ರುದ್ರದೇವರು ಗುಪ್ತವಾಗಿ ಇಲ್ಲಿ ಬಂದು ನೆಲೆಸಿದ್ದರು ಎಂಬುದನ್ನು ಸೂಚಿಸಲು ಗುಹೆಯ ಮೇಲ್ಭಾಗದಲ್ಲಿ ಕೆತ್ತನೆ ಇರಬಹುದೆಂದು ಊಹಿಸಬಹುದು. ಗುಹೆಯ ಒಳಭಾಗದ ಕಲ್ಲುಗಳಿಂದ ಯಾವಾಗಲೂ ನೀರು ಒಸರುವುದರಿಂದ ಮೆಟ್ಟಿಲುಗಳು ಯಾವಾಗಲೂ ಒದ್ದೆಯಾಗಿದ್ದು ಜಾರಿಕೆ ಇದೆ. ನಿಧಾನವಾಗಿ ಇಳಿಯ ಬೇಕಾಗುತ್ತದೆ.

**ಕೇದಾರೇಶ್ವರ ಮಂದಿರ :-**

ಇಲ್ಲಿ ರುದ್ರದೇವರು ಲಿಂಗರೂಪದಲ್ಲಿ ಪ್ರತಿಷ್ಠಿತರಾಗಿದ್ದಾರೆ. ಮಂದಿರದ ಸುತ್ತಮುತ್ತಲೂ ಬೇರೆ ದೇವತೆಗಳ ದೇವಾಲಯವಿದೆ. ಇದರ ಪ್ರಮುಖವಾದ ಆಕರ್ಷಣೆಯೆಂದರೆ ಮಂದಿರದ ಹೊರಭಾಗದಲ್ಲಿ ವಿಶಾಲವಾದ ಉದ್ಯಾನವನವಿದೆ. ಇಲ್ಲಿ ಬೇರೆ ಬೇರೆ ತರಹ ಕಲ್ಲುಗಳ ಮೇಲೆ ಕೆತ್ತನೆ ಇರುವ ಶಿಲೆಗಳನ್ನು ಜೋಡಿಸಿದ್ದಾರೆ. ಉದಾ: ಒಂದು ಶಿಲೆಯಲ್ಲಿ ಕಣ್ಣಿದ್ದರೆ, ಇನ್ನೊಂದು ಶಿಲೆಯಲ್ಲಿ ಒಬ್ಬ ಮನುಷ್ಯನ ಮುಖವಿದೆ, ಮತ್ತೊಂದು ಶಿಲೆಯಲ್ಲಿ ರಂಗೋಲಿಯ ಚಿತ್ತಾರವಿದೆ ಹೀಗೆ ಸುಮಾರು 12 ವಿವಿಧ ಕೆತ್ತನೆಗಳನ್ನೊಳಗೊಂಡ ಕರಿ ಶಿಲೆಗಳು ಇದೆ.

**ಸೇತಿ ನದಿ (ಶ್ವೇತ ನದಿ)**

ಪೋಖರಾದ ಪ್ರಧಾನ ಆಕರ್ಷಣೆಗಳಲ್ಲಿ ಒಂದು ಸೇತಿ ನದಿ ಮೌಂಟ್ ಅಪಿ ಹಾಗೂ ಮೌಂಟ್ ನಂಪಾ ಎಂಬಲ್ಲಿ ಹುಟ್ಟಿ ಪೋಖರಾಕ್ಕೆ ಹರಿದು ಬರುತ್ತದೆ. ಇಲ್ಲಿ ಸೇತಿ ನದಿ ಒಂದು ಕಾಲುವೆಯಾಗಿ ಹರಿಯುತ್ತದೆ (ಕಾಲುವೆಯ ನೀರು ಬೆಳ್ಳಗಿದೆ). ಅದರ ಜೊತೆಗೆ ಪರ್ವತದ ಇಕ್ಕೆಲಗಳಲ್ಲಿ ಜಲಪಾತವಾಗಿ





ಧುಮುಕ್ಕುತ್ತದೆ. ಸೇತಿ ನದಿ ಜಲಪಾತವಾಗಿ ಸುಮಾರು 150 ಮೀಟರ್ ಆಳದ ಭೂಮಿ ಪ್ರದೇಶದಲ್ಲಿ ಬಿದ್ದು ಹರಿದು ಹೋಗುತ್ತದೆ. ಇದರ ಭೋರ್ಗರತೆ ಕೇಳುವುದೇ ಒಂದು ಚೆಂದ.

**ಜೋಮ್‌ಸ್‌ಮ್ :-**

ಪೋಖರಾದಿಂದ 160 ಕಿ.ಮೀ. ದೂರದಲ್ಲಿ ಜೋಮ್‌ಸಮ್ ಇದೆ. ಈ ದೂರವನ್ನು ಕ್ರಮಿಸಲು ಸುಮಾರು 9 ಗಂಟೆಗಳು ಬೇಕು. ಪೋಖರಾದಿಂದ ಸ್ವಲ್ಪ ದೂರ ಸಾಗಿದೊಡನೆ ಗಂಡಕಿ ನದಿ ನಮ್ಮೊಡನೆ ಹರಿದು ಬರುತ್ತಿರುತ್ತಾಳೆ. ಮುಕ್ತಿನಾಥಕ್ಕೆ ಹೋಗಬೇಕಾದರೆ ಜೋಮಸಮ್‌ನಲ್ಲಿ ಇಳಿದು ಬಸ್ಸಿನಲ್ಲಿ ಹೋಗಬೇಕು. ಇಲ್ಲಿ ಪ್ರವಾಸಿ ತಾಣಗಳು ಯಾವುದೂ ಇಲ್ಲ. ಆದರೆ ನಾವು ಎತ್ತ ಕಣ್ಣು ಹಾಯಿಸಿದರೂ ಹಿಮಾಚ್ಛಾದಿತ ಪರ್ವತಶ್ರೇಣಿಗಳನ್ನು ನೋಡುವುದೇ ಒಂದು ಆನಂದ. ಪೋಖರಾದಿಂದ ಜೋಮಸಮ್‌ಗೆ ವಿಮಾನ ಇದ್ದರೂ ಜೋಮ್‌ಸಮ್‌ನಿಂದ 21 ಕಿ.ಮಿ.ದೂರ ಬಸ್ಸಿನಲ್ಲೋ ಅಥವಾ ಜೀಪಿನಲ್ಲೋ ಪ್ರಯಾಣ ಮಾಡಬೇಕು. ಪೋಖರಾದಿಂದ ಸುಮಾರು 100 ಕಿ.ಮೀ. ದೂರ ಸಾಗಿದಾಗ ನಮಗೆ ಒಂದು ಸೇತುವೆ ಸಿಗುತ್ತದೆ ಅದರ ಹೆಸರು **"ರಹುಘಾಟ್ ಖೋಲಾ ಬ್ರಿಡ್ಜ್"** ಎಂಬ ಒಂದು ಸೇತುವೆ ಇದೆ. ಇದು ಪೌರಾಣಿಕವಾಗಿ ನಮಗೆ ಬೇಕಾದ ಸ್ಥಳ. ಭಾಗವತದಲ್ಲಿ ರಹುಗಣ ಮಹಾರಾಜನಿಗೆ ಜಡಭರತ ಭವಾಟವಿ ವರ್ಣನೆಯ ಉಪದೇಶವನ್ನು ಮಾಡುತ್ತಾನೆ. ಅದು ಇದೇ ಜಾಗದಲ್ಲೇ ಆಗಿರುವುದು. ಭರತ ತಪಸ್ಸು ಮಾಡಿದ ಜಾಗವೂ ಗಂಡಕಿ ನದಿಯ ಪಾತ್ರದಲ್ಲೇ ಆದ್ದರಿಂದ ಆ ಜಾಗವು ಇಲ್ಲೇ ಸುತ್ತಮುತ್ತ ಇದೆ. ಅದರ ಕುರುಹನ್ನು ನಾವು ಸೂಕ್ಷ್ಮವಾಗಿ ಗಮನವಿಟ್ಟು ನೋಡಿದರೆ ಕಾಣಬಹುದು. ಭರತ ತಪಸ್ಸು ಮಾಡಿದ ಜಾಗ ಭರತನ ಆಶ್ರಮ ಇವೆಲ್ಲವೂ ಈ ಪ್ರದೇಶದಲ್ಲೇ ಇದೆ.

ಸಾಲಿಗ್ರಾಮವನ್ನು ಖರೀದಿ ಮಾಡಬೇಕೆನ್ನುವರು ಪೋಖರಾದಲ್ಲಿ ಮಾಡಿದರೆ ಉತ್ತಮ, ನಮಗೆ ಅಗತ್ಯವಿರುವ ಎಲ್ಲಾ ವಿಧವಾದ ಸಾಲಿಗ್ರಾಮಗಳು ಕಡಿಮೆ ದರದಲ್ಲಿ ದೊರಕುತ್ತವೆ. ವಾಸುದೇವ, ಲಕ್ಷ್ಮೀನಾರಾಯಣ, ಮತ್ಸ್ಯ ಮುಂತಾದ ಸಾಲಿಗ್ರಾಮಗಳು).

**ಮುಕ್ತಿನಾಥ :-**

ಸಮುದ್ರಮಟ್ಟದಿಂದ 3710 ಮೀಟರ್ ಅಂದರೆ 12170 ಅಡಿಗಳಷ್ಟು ಎತ್ತರದಲ್ಲಿದೆ. ಮೋಕ್ಷಪ್ರದ ವಾಸುದೇವನ ಕ್ಷೇತ್ರವಾಗಿದೆ. ಜೋಮಸಮ್‌ನಿಂದ 21 ಕಿ.ಮೀ ದೂರದಲ್ಲಿ ಮುಕ್ತಿನಾಥನ ಕ್ಷೇತ್ರವಿದೆ. ಈ ದೂರವನ್ನು ಕ್ರಮಿಸಲು ಕನಿಷ್ಠ 2 ಗಂಟೆಗಳಾದರೂ ಬೇಕು. ಇದು ಮೌಂಟ್ ಅನ್ನಪೂರ್ಣ ಪರ್ವತ ಶ್ರೇಣಿಯ ಕೆಳಭಾಗದಲ್ಲಿದೆ. ಇಲ್ಲಿ ಮುಖ್ಯವಾಗಿ 108 ಗೋಮುಖದಿಂದ ಹರಿಯುವ ಗಂಡಕಿ (ಇದಕ್ಕೆ ಶತಧಾರಾ ಎಂಬ ಇನ್ನೊಂದು ಹೆಸರೂ ಇದೆ). ಇಲ್ಲಿ ಮೊದಲು ಸ್ನಾನ ಮಾಡಿ ನಂತರ ಪಾಪಕುಂಡ ಹಾಗೂ ಪುಣ್ಯ ಕುಂಡಗಳಲ್ಲಿ ಸ್ನಾನ ಮಾಡುವುದೇ ಪುಣ್ಯಕರವಾದ ಕೆಲಸ. ಶತಧಾರಾದಲ್ಲಿ ಸ್ನಾನ ಮಾಡುವುದು ಒಂದು ಸವಾಲು ಏಕೆಂದರೆ ಗೋಮುಖದಿಂದ ಬರುವ ನೀರು ಬಹಳ ಶೀತಲವಾಗಿರುತ್ತದೆ. ತೀರ್ಥ ವಿಧಿಯನ್ನು ಮಾಡುವವರು ಜೋಮ್‌ಸಮ್‌ನಿಂದ ಸುಮಾರು 15 ಕಿ.ಮೀ ದೂರದಲ್ಲಿ ಕಾಗ್‌ಬೇನಿ ಎಂಬ ಜಾಗವಿದೆ ಅದು ಕಾಲಿ ಹಾಗೂ ಗಂಡಕಿ ನದಿಯ ಸಂಗಮ ತಾಣ, ಅಲ್ಲಿ ತೀರ್ಥ ವಿಧಿಯನ್ನು ಗಂಡಕಿ ನದಿಯ ದಡದಲ್ಲಿಯೋ ಅಥವಾ ಅಲ್ಲಿ ಧರ್ಮಶಾಲಾಗಳು ಇವೆ ಅವುಗಳಲ್ಲಿಯೋ ಮಾಡಬಹುದು. ಮುಕ್ತಿನಾಥನಿಂದ ದಾಮೋದರ ಕುಂಡ ಬಹಳ ದೂರವಿದೆ. ಅಲ್ಲಿಗೆ ನಾವು 7 ದಿನ ನಡೆದುಕೊಂಡು ಹೋದರೆ ನೋಡಬಹುದು. ಅಲ್ಲಿಯೇ ಸಾಲಿಗ್ರಾಮ ಪರ್ವತವಿದೆ. ಆ ಪರ್ವತದಿಂದ ಬಿದ್ದ ಕರಿ ಶಿಲೆಗಳೇ ಬ್ರಹ್ಮ ದೇವರು ಕೀಟ ರೂಪದಿಂದ ಕೊರೆದದ್ದೇ ದಾಮೋದರಕುಂಡದಲ್ಲಿ ಸಾಲಿಗ್ರಾಮಗಳಾಗುತ್ತವೆ. ದಾಮೋದರಕುಂಡಕ್ಕೆ ಹೋದರೂ ಕುಂಡದೊಳಗೆ ಇಳಿಯಲು ನೇಪಾಳ ಸರ್ಕಾರದ ಅಂಗೀಕಾರಪತ್ರ ಬೇಕಾಗುತ್ತದೆ. ನಾರದೀಯ ಪುರಾಣದಲ್ಲಿ ಬರುವ ನದೀ ಸ್ತೋತ್ರದಲ್ಲಿ ಗಂಡಕಿ ನದಿಯ ವರ್ಣನೆಯಿದೆ. **"ಫಲ್ಗುನೀ ಶೋಣ ಭದ್ರಾಚ ನರ್ಮದಾ ಗಂಡಕೀ ತಥಾಃ ಕೃಷ್ಣವೇಣೀ ಭೀಮರಥೀ ಖಾಗಿನೀ ಭವ ನಾಶಿನಿ"** ವಾದಿರಾಜ ಗುರುಸಾರ್ವಭೌಮರು ದಾಮೋದರ ಕುಂಡದಲ್ಲಿ ಮುಳುಗಿ 108 ಸಾಲಿಗ್ರಾಮಗಳನ್ನು ತೆಗೆದುಕೊಂಡು ಅದನ್ನು ಸಾಲಿಗ್ರಾಮ ಹಾರವನ್ನು ಶ್ರೀನಿವಾಸನಿಗೆ ಅರ್ಪಿಸಿದ ಕಥೆ ನಮಗೆ ಗೊತ್ತು. ಆ ಸಾಲಿಗ್ರಾಮ ಹಾರವನ್ನು ಇಂದಿಗೂ ಶ್ರೀನಿವಾಸನ ಕೊರಳನ್ನು ನಿರ್ಧಾರಿತ ದಿನಗಳಲ್ಲಿ ಅಲಂಕರಿಸುತ್ತಾರೆ.



## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಸಂತೋತ್ಸವ

| ದಿನಾಂಕ | ವಾರ | ಉತ್ಸವಗಳು |
|---|---|---|
| 10-04-2025 | ಗುರುವಾರ | ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ |
| 11-04-2025 | ಶುಕ್ರವಾರ | ಸ್ವಾಮಿಯವರಿಗೆ, ರಥೋತ್ಸವ |
| 12-04-2025 | ಶನಿವಾರ | ಸ್ವಾಮಿಯವರಿಗೆ, ಶ್ರೀಕೋದಂಡರಾಮ ಸ್ವಾಮಿಯವರಿಗೆ, ಶ್ರೀ ಕೃಷ್ಣಸ್ವಾಮಿಯವರಿಗೆ |

# ಚಿತ್ರಾ ಪೂರ್ಣಿಮೆ




– ಡಾ॥ ಸುಮನ ಬದರೀನಾಥ್
94820 94855


ಚಾಂದ್ರಮಾಸವು ಶುಕ್ಲಪಕ್ಷ, ಕೃಷ್ಣಪಕ್ಷ ಎಂದು ಎರಡು ಪಕ್ಷಗಳನ್ನು ಒಳಗೊಂಡಿರುತ್ತದೆ. ಪಕ್ಷ ಎಂದರೆ 15 ದಿನ ಅಮಾವಾಸ್ಯೆಯ ಮರುದಿನ ಪ್ರಾರಂಭಗೊಳ್ಳುವ ಶುಕ್ಲ ಪಕ್ಷವು ಪ್ರಥಮ,ದ್ವಿತೀಯ ಮುಂತಾಗಿ ತಿಥಿಗಳಿಂದ ಕೂಡಿದ್ದು ಹುಣ್ಣಿಮೆಯಂದು ಕೊನೆಗೊಳ್ಳುತ್ತದೆ. ಅಂದು ಚಂದ್ರ ತನ್ನೆಲ್ಲ ಷೋಡಶಕಲೆಗಳಿಂದ ಕೂಡಿ ಪ್ರಕಾಶಿಸುತ್ತಾನೆ. ಪೂರ್ಣಿಮೆ ದೇವತೆಗಳಿಗೆ ಪ್ರಿಯವಾದ ದಿನ, ಸಂವತ್ಸರದಲ್ಲಿ ಬರುವ 12 ಪೂರ್ಣಿಮೆಗಳೂ ತನ್ನದೇ ಆದ ವಿಶೇಷತೆಯನ್ನು ಹೊಂದಿವೆ. ಅವುಗಳಲ್ಲಿ ಚೈತ್ರಪೂರ್ಣಿಮೆ ಅಥವಾ ಚಿತ್ರಾಪೂರ್ಣಿಮೆ ಹಲವಾರು ವಿಶೇಷತೆಗಳಿಂದ ಕೂಡಿದ್ದು ಬಹು ಮಹತ್ವ ಪಡೆದಿದೆ.

ಚಿತ್ರಾಪೂರ್ಣಿಮೆಯಂದು ಚಿತ್ರಗುಪ್ತ ಜಯಂತಿಯನ್ನು ಆಚರಿಸಲಾಗುತ್ತದೆ. ಸನಾತನ ಧರ್ಮದಲ್ಲಿ ದೇವತೆಗಳಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ದಿನ ಕೊಟ್ಟಿದೆ. ಚಿತ್ರಗುಪ್ತರ ದಿನವೇ ಚಿತ್ರಾಪೂರ್ಣಿಮೆ. ನಮ್ಮೆಲ್ಲರ ಪಾಪಪುಣ್ಯಗಳನ್ನು ಬರೆದಿಡುವ ಯಮನ ಭಂಟರೇ, ಲೆಕ್ಕಿಗರೇ ಚಿತ್ರ ಮತ್ತು ಚಿತ್ರಗುಪ್ತ, ಚಿತ್ರಾಪೂರ್ಣಿಮೆ ಅವರ ಜನ್ಮದಿನ. ಈ ದಿನ ಅವರನ್ನು ಸ್ಮರಿಸಿ ಅವರನ್ನು ನಾವು ಸಂತೋಷಪಡಿಸಬೇಕು. ಈ ದಿನ ಒಂದು ಪುಣ್ಯ ಕಾರ್ಯ ಮಾಡಿದರೆ ಎರಡು ಪುಣ್ಯದ ಲೆಕ್ಕ ಬರೆದುಕೊಳ್ಳುತ್ತಾರೆ. ಒಂದು ಪಾಪ ಕಾರ್ಯ ಮಾಡಿದರೆ ಎರಡು ಪಾಪದ ಲೆಕ್ಕ ಬರೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಅದರಿಂದ ಈ ದಿನ ಸಾಧ್ಯವಾದಷ್ಟು ಪುಣ್ಯಕಾರ್ಯ ಮಾಡಬೇಕು. ಈ ಪೂಜೆಯಿಂದ ಚಿತ್ರಗುಪ್ತಾಂತರ್ಗತ ನರಸಿಂಹ ದೇವರು ಸಂಪ್ರೀತನಾಗುವನು.

ಚಿತ್ರಾ ಪೂರ್ಣಿಮೆಯು ಭಕ್ತಾಗ್ರೇಸರನಾದ ಹನುಮಂತನು ಜನಿಸಿದ ಮಂಗಳಮಯ ದಿನವಾಗಿದೆ. ಇಂದು ಚಿತ್ತಾ ನಕ್ಷತ್ರದಲ್ಲಿ ವಾಯುದೇವರು ಹನುಮಂತನಾಗಿ ಕೇಸರಿ ಅಂಜನಾ ದಂಪತಿಗಳಲ್ಲಿ ಜನಿಸಿದನು. ಹನುಮನು ಜನಿಸಿದ ಹನುಮಜ್ಜಯಂತಿ ಎಂದು ಪ್ರಸಿದ್ಧವಾಯಿತು. ದೇಶದ ಎಲ್ಲೆಡೆಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಕೂಡ ಬಹಳ ಸಂಭ್ರಮದಿಂದ ಹನುಮನನ್ನು ಇಂದು ಪೂಜಿಸುತ್ತಾರೆ. ಹನುಮನ ದೇಗುಲಗಳಿರುವೆಡೆಗಳಲ್ಲೆಲ್ಲ ಹನುಮಂತನಿಗೆ ವಿಶೇಷವಾಗಿ ಪೂಜೆ, ಅಭಿಷೇಕ, ವಿವಿಧ ಅಲಂಕಾರಗಳು, ರಥೋತ್ಸವಗಳು ನಡೆಯುತ್ತವೆ. ಮನೆಗಳಲ್ಲೂ ಸಹ ಹನುಮಂತನನ್ನು ಪೂಜಿಸುತ್ತಾರೆ. ಜೇನುತುಪ್ಪದ ಅಭಿಷೇಕ ಹನುಮಂತನಿಗೆ ಬಲುಪ್ರಿಯ. ಪ್ರಸಿದ್ಧ ಹನುಮ ಕ್ಷೇತ್ರಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿ ಹನುಮಂತನ ದರ್ಶನ ಪಡೆಯುತ್ತಾರೆ. ಈ ದಿನ ಸುಂದರಕಾಂಡ ಪಾರಾಯಣ, ಹನುಮಾನ್ ಚಾಲೀಸಾ ಮುಂತಾದ ಸ್ತೋತ್ರಗಳ ಪಾರಾಯಣ ಅತಿಪುಣ್ಯಪ್ರದವಾದುದು.

ಚಿತ್ರಾಪೂರ್ಣಿಮೆಯಿಂದ ವೈಶಾಖಸ್ನಾನ ಪ್ರಾರಂಭಗೊಳ್ಳುತ್ತದೆ. ಇದು ಮಾಘಸ್ನಾನ ಕಾರ್ತೀಕ ಸ್ನಾನಗಳಂತೆಯೇ ಬಹು ಶ್ರೇಷ್ಠವಾದುದು. ಈ ದಿನದಿಂದ ಪ್ರಾರಂಭಿಸಿ ಒಂದು ತಿಂಗಳು ವೈಶಾಖಪೂರ್ಣಿಮೆಯವರೆಗೆ ಸಂಕಲ್ಪ ಪೂರ್ವಕವಾಗಿ ವೈಶಾಖ ಸ್ನಾನವನ್ನು ಮಾಡಬೇಕು. ಈ ತಿಂಗಳಿನಲ್ಲಿ ನದೀ ಸರೋವರಗಳಲ್ಲಿ ಅಷ್ಟೇಕೆ ಮನೆಯ ಸ್ನಾನದ ನೀರಿನಲ್ಲೂ ದೇವರ ಸನ್ನಿಧಾನ ವಿಶೇಷವಾಗಿ ಇರುತ್ತದೆ. ಚಿತ್ರಾಪೂರ್ಣಿಮೆಯ ದಿನವನ್ನು ಆದಿಪುಷ್ಕರಣಿ ಎಂದು ಕರೆಯುತ್ತಾರೆ. ತಿಂಗಳು ಪೂರ್ತಿ ವೈಶಾಖ ಸ್ನಾನ ಮಾಡಲಾಗದಿದ್ದರೂ ಇಂದಾದರೂ ನದೀ ಪುಷ್ಕರಣಿಗಳಲ್ಲಿ, ಇದಾವುದೂ ಸಾಧ್ಯವಾಗದಿದ್ದರೆ ಮನೆಯಲ್ಲಾದರೂ ಸಂಕಲ್ಪ ಪೂರ್ವಕವಾಗಿ ಸೂರ್ಯೋದಯಕ್ಕೆ ಮುನ್ನ ಸ್ನಾನ ಮಾಡಬೇಕು. ತಿಂಗಳು ಪೂರ್ತಿ ಸ್ನಾನ ಮಾಡಿದುದರ ಫಲ ದೊರೆಯುತ್ತದೆ.

ಚಿತ್ರಾಪೂರ್ಣಿಮೆ ಇಂದ್ರ ಸಾವರ್ಣಿಕ ಮನ್ವಾದಿ ಎಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಈ ದಿನ ಎಲ್ಲೆಡೆ ದವನೋತ್ಸವ ಆಚರಿಸುತ್ತಾರೆ. ಈ ದಿನ ದವನವನ್ನು (ಒಂದು ರೀತಿಯ ಸುಗಂಧಿತ ಪತ್ರೆ) ಎಲ್ಲಾ ದೇವತೆಗಳಿಗೂ, ವಿಶೇಷವಾಗಿ ಲಕ್ಷ್ಮೀ







ನಾರಾಯಣರಿಗೂ, ಮನೆಗಳಲ್ಲಿ ದೇಗುಲಗಳಲ್ಲಿ ಪೂಜೆ ಮಾಡುವುದು ಬಹು ಶ್ರೇಷ್ಠ. ಈ ದಿನ ನಾವು ಮಾಡುವ ಪೂಜೆ ದಾನ,ಜಪ,ಸತ್ಕಾರ್ಯಗಳು ನೂರು ಪಟ್ಟು ಹೆಚ್ಚಾಗಿ ಫಲ ನೀಡುವುವು. ವಸಂತಪೂಜೆ ಇಂದಿನಿಂದ ಪ್ರಾರಂಭ ಗೊಳ್ಳುತ್ತದೆ. ವಸಂತ ಪೂಜೆಯೆಂದರೆ, ಅತಿಥಿ ಅಭ್ಯಾಗತ ರನ್ನು ಕರೆದು ಕಡಲೆಬೇಳೆ, ಹೆಸರು ಬೇಳೆ ಮುಂತಾದ ಕೋಸಂಬರಿಗಳು, ಪಾನಕ, ಮಜ್ಜಿಗೆ,ಹಣ್ಣುಗಳು, ಪುಷ್ಪ ಮಾಲೆ, ಗಂಧ, ಬೀಸಣಿಗೆ ಜಲಕುಂಭ ಮುಂತಾದ, ತಂಪಾದ ಬಿಸಿಲಿನ ತಾಪಕ್ಕೆ ಹಿತವಾದ ವಸ್ತುಗಳನ್ನು ದಕ್ಷಿಣೆಯೊಡನೆ ದಾನ ಮಾಡುವುದು ಚಿತ್ರಾನ್ನ, ಮೊಸ ರನ್ನಗಳನ್ನು ಮಾಡಿ, ದೇವರಿಗೆ ನೈವೇದ್ಯಮಾಡಿ ಬೇರೆ ಯವರಿಗೂ ಕೊಟ್ಟು ತಾನೂ ತಿನ್ನಬೇಕು. ವಸಂತ ಪೂಜೆ ಇಂದು ಮಾಡುವುದು ಶ್ರೇಷ್ಠ ಏಕೆಂದರೆ ಸಾಮಾನ್ಯವಾಗಿ ಚಿತ್ರಾಪೂರ್ಣಿಮೆಯಂದು ಮಾಸ ನಕ್ಷತ್ರವಾದ ಚಿತ್ತಾ ನಕ್ಷತ್ರವಿರುತ್ತದೆ.

ಚಿತ್ರಾಪೂರ್ಣಿಮೆಯಂದು ಸುವಾಸಿನೀ ಪೂಜೆ ಮಂಗಳಕರವಾದುದು. ಅಂದು ಸುಮಂಗಲಿಯರನ್ನು ಮನೆಗೆ ಆಹ್ವಾನಿಸಿ ಕಾಲು ತೊಳೆದು ಒಳಗೆ ಕರೆದೊಯ್ದು ಆಸನವಿತ್ತು ಕುಳ್ಳಿರಿಸಿ ಅರಿಶಿನ, ಕುಂಕುಮ , ಬಳೆ, ಹೂ, ಕಾಡಿಗೆ, ಕನ್ನಡಿ ಮುಂತಾದ ಮಂಗಳದ್ರವ್ಯಗಳು, ಕೋಸಂಬರಿ, ಪಾನಕ, ರಸಾಯನ ಮುಂತಾದ ವಸ್ತು ಗಳನ್ನು ನೀಡಬೇಕು. ಸ್ತ್ರೀಯರು ವಿಶೇಷವಾಗಿ ಚಿತ್ರವಸ್ತ್ರ ಗಳನ್ನು ಅಂದರೆ ಬಣ್ಣ ಬಣ್ಣದ ಚಿತ್ರಗಳಿರುವ ಸೀರೆ ಕುಬುಸಗಳನ್ನು ಧರಿಸಬೇಕು ಹಾಗೂ ಚಿತ್ರ ವಸ್ತ್ರಗಳನ್ನು ಬಾಗಿನ ನೀಡಬೇಕು. ಬಾಗಿನ ನೀಡುವುದರಿಂದ ಸೌಭಾಗ್ಯ ಅಭಿವೃದ್ಧಿಯಾಗುವುದು. ನಮ್ಮ ಬದುಕು ವರ್ಣಮಯವಾಗಲಿ ಎಂಬ ಆಶಯದ ಸಂಕೇತ ವಿದು.



ಚಿತ್ರಾಪೂರ್ಣಿಮೆಯಂದು ಕರ್ಣಾಟಕದ ಹಲವಾರು ಎಡೆ ಗಳಲ್ಲಿ ಪ್ರಮುಖವಾಗಿ ಬೆಂಗಳೂರಿನಲ್ಲಿ ಕರಗೋತ್ಸವ ಜರಗುತ್ತದೆ. ಕರಗವೆಂದರೆ ಶಕ್ತಿ ದೇವತೆಯ ಉಪಾಸನೆಯೇ,ಪೂಜೆಯೇ ಆಗಿದೆ. ಸ್ತ್ರೀವೇಷ ಧರಿಸಿದ ಪುರುಷ ವ್ಯಕ್ತಿ ಮಲ್ಲಿಗೆಯ ಹೂವಿನಿಂದ ರಚಿಸಿದ ಗೋಪುರಾಕೃತಿಯನ್ನು ಯಾವುದೇ ಆಧಾರವಿಲ್ಲದೇ ತಲೆಯ ಮೇಲೆ ಹೊತ್ತು ಊರಿನೆಲ್ಲೆಡೆ, ಬೀದಿ ಬೀದಿಗಳಲ್ಲಿ ಸಂಚರಿ ಸುವುದೇ ಕರಗ ಉತ್ಸವ. ಚಿತ್ರಾಪೂರ್ಣಿಮೆಯ ರಾತ್ರಿ ಚಂದ್ರ ಮೂಡಿದ ಮೇಲೆ ಕರಗ ದೇವಸ್ಥಾನದಿಂದ ಹೊರಡುತ್ತದೆ.

ಬೆಳದಿಂಗಳಿನಲ್ಲಿ ನಿಂತಲ್ಲಿ ನಿಲ್ಲದೆ ಸಂಚರಿಸುತ್ತಾ, ಜನರ ಪೂಜೆಯನ್ನು ಕೈಗೊಳ್ಳುತ್ತಾ ಬೆಳಗಿನ ಜಾವಕ್ಕೆ ಮತ್ತೆ ದೇವಸ್ಥಾನ ಸೇರುತ್ತದೆ. ಯಾವುದೇ ಆಧಾರವಿರದಿದ್ದರೂ, ಕರಗ ಹೊತ್ತವರು ಭರದಿಂದ ಓಡಿದರೂ ಕರಗ ಜಾರುವುದಿಲ್ಲ. ಇದೊಂದು ದೇವತಾ ರಹಸ್ಯ. ಊರಿನ ಅನೇಕ ದೇವಾಲಯಗಳ ದೇವರುಗಳ ರಥೋ ತ್ಸವಗಳೂ ಬಂದಿರುತ್ತವೆ. ಸಾವಿರಾರು ಸಂಖ್ಯೆಯಲ್ಲಿ ಜನ ಕರಗ ನೋಡಲು ಸೇರುತ್ತಾರೆ. ಬೇರೆ ಊರುಗಳಿಂದಲೂ ಜನ ಬಂದು ನೆರೆಯುತ್ತಾರೆ. ಅತ್ಯಂತ ಸಂಭ್ರಮದಿಂದ ಆಚರಿಸಲ್ಪಡುವ ಉತ್ಸವ ವಿದು.

ಚಿತ್ರಾಪೂರ್ಣಿಮೆಯಂದು ದೇಶದ ಹಲವಾರು ಪ್ರಸಿದ್ಧ ದೇವಾಲಯಗಳಲ್ಲಿ ರಥೋತ್ಸವಗಳು ಜರಗುತ್ತವೆ. ಜನತೆ ಸಂಭ್ರಮ, ಸಡಗರ, ಉತ್ಸಾಹದಿಂದ ನಲಿದಾಡುತ್ತಾರೆ. ಇಂತು ಚಿತ್ರಾಪೂರ್ಣಿಮೆ ನಾನಾ ರೀತಿಯಲ್ಲಿ, ಪ್ರಾಮುಖ್ಯತೆ ಪಡೆದ, ಮಹತ್ವ ದಿನವಾಗಿದೆ.





# ದೊಡ್ಡ ಮಳೂರಿನ ಶ್ರೀ ಅಪ್ರಮೇಯ ದೇವಾಲಯ

–ಕೆಂಗೇರಿ ಚಕ್ರಪಾಣಿ
94483 86886



ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ದೊಡ್ಡ ಮಳೂರು, ತಾಲ್ಲೂಕು ಕೇಂದ್ರದಿಂದ ಮೂರು ಕಿ.ಮೀ. ದೂರ ದಲ್ಲಿರುವ ಸಾವಿರ ವರ್ಷಗಳಷ್ಟು ಹಿಂದಿನ ಪುರಾತನ ಗ್ರಾಮ. ಕಾವೇರಿಯ ಉಪನದಿ ಕಣ್ವ ನದಿಯ ಬಲ ದಂಡೆಯ ಮೇಲಿದೆ.

ಶಾಸನಗಳಲ್ಲಿ ಪೆರಿಯಮಳವೂರು ಅಲಿಯಾಸ್ ರಾಜೇಂದ್ರಸಿಂಹ ಚತುರ್ವೇದಿ ಮಂಗಲ ಎಂದು ಕರೆದಿರುವ ದೊಡ್ಡಮಳೂರು ಹಿಂದೆ ಮಳೂರು ಅಗ್ರಹಾರವಾಗಿದ್ದು. ಅಗ್ರ ಹಾರ ರಚನೆಯಂತೆ ಊರ ಹೊರಗೆ ಪೂರ್ವಾಭಿಮುಖವಾಗಿ ಕೈಲಾಸೇಶ್ವರ ಮತ್ತು ಊರ ಮಧ್ಯೆ ಅಪ್ರಮೇಯ ದೇವಾಲ ಯವೆಂಬ ವಿಷ್ಣುವಿನ ಆಲಯವಿದೆ. ಭಾರತದ ಹಿಂದೂ ಕಾನೂನಿಗೆ ಮೂಲಾಧಾರವಾದ ಮಿತಾಕ್ಷರಾ ಎಂಬ ಯಾಜ್ಞಾ ವಲ್ಕ್ಯ ಸ್ಮೃತಿಯ ಟೀಕೆಯನ್ನು ವಿಜ್ಞಾನೇಶ್ವರನು ಬರೆದಿದ್ದು ದೊಡ್ಡಮಳೂರಿನಲ್ಲಿಯೇ ಎಂಬ ಅಭಿಪ್ರಾಯವಿದೆ. ಇಲ್ಲಿ ಶ್ರೀ ರಾಮಾನುಜರು ಕೆಲಕಾಲ ವಾಸ್ತವ್ಯ ಹೂಡಿದ್ದರೆಂದು ಪ್ರತೀತಿ. ವಿಜಯನಗರ ಕಾಲದಲ್ಲಿ ವ್ಯಾಸರಾಯರು, ಪುರಂದರ ದಾಸರು ಇಲ್ಲಿಗೆ ಆಗಮಿಸಿ ಅಪ್ರಮೇಯ ಸ್ವಾಮಿಯ ದೇವಾಲ ಯವನ್ನು ದರ್ಶಿಸಿದ್ದಾರೆ. ದಾಸ ಶ್ರೇಷ್ಠರಾದ ಪುರಂದರ ದಾಸರು ಇಲ್ಲಿಯ ದೇವತಾ ವಿಗ್ರಹಗಳನ್ನು ನೋಡಿ ಜನಪ್ರಿಯ ಕೀರ್ತನೆಯನ್ನು ರಚಿಸಿದ್ದಾರೆ.

ವ್ಯಾಸರಾಜರು ತಮ್ಮ ಕೃತಿಗಳನ್ನು ಅಪ್ರಮೇಯನಿಗೆ ಅರ್ಪಿಸಿರುವರು.

### ಶ್ರೀ ಅಪ್ರಮೇಯ ದೇವಾಲಯ

ಕನ್ನಡ ನಾಡಿನ ಸುಪ್ರಸಿದ್ಧ ಆಲಯ. ದೇವಾಲಯವು ಪೂರ್ವಾಭಿಮುಖವಾಗಿ ಬೃಹದಾಕಾರದಲ್ಲಿದ್ದು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ದೇವಾಲಯದ ಸುತ್ತಲೂ ಪ್ರಾಕಾರ ಹಾಗೂ ಬೃಹತ್ ರಾಜಗೋಪುರಗಳನ್ನು ಹೊಂದಿದೆ.

ದೇವಾಲಯವು ಮೂಲತಃ ಹತ್ತನೆಯ ಶತಮಾನದ ಚೋಳರ ಕಾಲಕ್ಕೆ ಸೇರಿದ್ದು, ಪ್ರಖ್ಯಾತ ಚೋಳ ದೊರೆ ಒಂದ ನೆಯ ರಾಜೇಂದ್ರ ಚೋಳನ ಕಾಲಕ್ಕೆ ಸೇರುವ ಆಲಯವಾ ಗಿದ್ದು. ಅನಂತರ ಹೊಯ್ಸಳರು ಮತ್ತು ವಿಜಯನಗರದ ರಸರ ಹಾಗೂ ಚನ್ನಪಟ್ಟಣದ ಪಾಳೆಯಗಾರರ ಕಾಲದಲ್ಲಿ ವಿಸ್ತರಣೆ ಯಾಗಿದೆ.

## ಶ್ರೀ ಅಪ್ರಮೇಯ ಸ್ವಾಮಿ





ಪ್ರಧಾನ ಗರ್ಭ ಗುಡಿಯಲ್ಲಿರುವ ಮಹಾವಿಷ್ಣುವಿನ ಮೂರ್ತಿಯನ್ನು ಅಪ್ರಮೇಯ ಎಂದು ಶಾಸನದಲ್ಲಿಯೇ ಕರೆಯಲಾಗಿದೆ. ಪ್ರಮೇಯ ಎಂದರೆ ಅಳೆಯಬಹುದಾದ, ಅಪ್ರಮೇಯ ಎಂದರೆ ಅಳತೆಗೆ ನಿಲುಕದವನು ಎಂದಿದ್ದು ವಿಷ್ಣುವಿನ ಸಹಸ್ರನಾಮದಲ್ಲಿ ಅಪ್ರಮೇಯನ ಹೆಸರಿದೆ. ಸುಮಾರು ನಾಲ್ಕೂವರೆ ಅಡಿಗಳಷ್ಟು ಎತ್ತರವಿರುವ ದಿವ್ಯಮೂರ್ತಿಯು ಹಸನ್ಮುಖನಾಗಿದ್ದು ಕೊಳಗದ ಮಾದರಿಯ ಕಿರೀಟವನ್ನು ಧರಿಸಿದ್ದು, ಮೇಲಿನ ಕೈಗಳಲ್ಲಿ ಚಕ್ರ, ಶಂಖ ಹಾಗೂ ಕೆಳಗಿನ ಕೈಗಳಲ್ಲಿ ಗದಾ ಮತ್ತು ಅಭಯ ಹಸ್ತಧಾರಿಯಾಗಿದ್ದಾನೆ. ದೇವನ ಅಭಯ ಹಸ್ತದಲ್ಲಿ ಪದ್ಮಲಾಂಛನವಿದ್ದು ಮೂರ್ತಿ ಶಿಲ್ಪದ ಲಕ್ಷಣದಿಂದ ಮಹಾವಿಷ್ಣುವಿನ ಜನಾರ್ದನನ ರೂಪವಾಗಿದೆ. ಪ್ರಸ್ತುತ ವಿಗ್ರಹವನ್ನು ಚೋಳರ ಕಾಲಕ್ಕೆ ಸೇರಿಸಬಹುದು. ಈ ದೇವಾಲಯದ ನವರಂಗದ ಬಾಗಿಲುವಾಡದ ಮೇಲಿನ ಪಟ್ಟಿಗೆಯಲ್ಲಿ ಬಹಳ ಅದ್ಭುತವಾದ ಪಟ್ಟಾಭಿರಾಮನ ಆಕರ್ಷಕ ಮೂರ್ತಿಯಿದೆ. ಒಂದು ಪೀಠದ ಮೇಲೆ ಆಸೀನರಾಗಿರುವ ಸೀತಾ ಸಮೇತನಾದ ಶ್ರೀರಾಮನ ಪಾದದ ಬಳಿ ಆಸೀನರಾಗಿರುವ ರಾಮಭಕ್ತ ಹನುಮಂತನು ಒಂದು ಕೈಯಲ್ಲಿ ತಂಬೂರಿ ಮೀಟುತ್ತಾ ರಾಮಧ್ಯಾನ ಮಾಡುತ್ತಿರುವ ಮೂರ್ತಿಯಿದೆ. ಶ್ರೀರಾಮ ಸೀತೆಯರ ಇಕ್ಕೆಲಗಳಲ್ಲಿ ಛಾಮರ ಬೀಸುತ್ತಿರುವ ಲಕ್ಷ್ಮಣ, ಸುಗ್ರೀವ ಮುಂತಾದವರ ವಿಗ್ರಹಗಳು ಗಮನ ಸೆಳೆಯುತ್ತವೆ. ದೇವಾಲಯದ ನೈಋತ್ಯ ಮೂಲೆಯಲ್ಲಿ ವಿಷ್ಣುಪತ್ನಿ ಮಹಾಲಕ್ಷ್ಮಿಯ ಸುಂದರ ಮೂರ್ತಿಯಿದೆ. ಅರವಿಂದವಲ್ಲಿ ಅಮ್ಮನವರೆಂದು ಕರೆಯುವ ದೇವಿಯು ಹಸನ್ಮುಖಳಾಗಿದ್ದು ಮೇಲಿನ ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದು ಕೆಳಗಿನ ಕೈಗಳು ಅಭಯವರದ ಹಸ್ತದಲ್ಲಿದ್ದು ಆಸೀನ ಭಂಗಿಯಲ್ಲಿರುವಳು.



## ಅಂಬೆಗಾಲು ಕೃಷ್ಣ

ಶ್ರೀ ಅಪ್ರಮೇಯ ದೇವಾಲಯದ ಪ್ರಾಕಾರದ ವಾಯುವ್ಯ ದಿಕ್ಕಿನಲ್ಲಿ ಮನೋಹರವಾದ ಅಂಬೆಗಾಲು ಕೃಷ್ಣನ ಮೂರ್ತಿಯಿದೆ. ಕೃಷ್ಣನು ಮುದ್ದಾದ ಬಾಲಕನ ರೂಪದಲ್ಲಿದ್ದು. ಬಲಗೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದಿದ್ದು, ಎಡಗೈಯನ್ನು ಲಂಬವಾಗಿ ನೆಲಕ್ಕೆ ಊರಿ, ಅಂಬೆಗಾಲನ್ನು ಇಟ್ಟು ನಡೆಯು ತ್ತಿರುವ ಮನೋಹರ ಮೂರ್ತಿಯಾಗಿದೆ. ಹಣೆಯಲ್ಲಿ ತಿಲಕ, ಗುಂಗುರು ಕೂದಲು, ಕೊರಳಿನ ಮಣಿಹಾರ ಪುಟ್ಟ ಬಾಲಕನು ಧರಿಸುವ ಹುಲಿಯುಗುರಿನ ಹಾರ, ಕಾಲಂದಿಗೆ, ಕೈಕಡಗ, ಉಡದಾರದಂತೆ ಧರಿಸಿರುವ ಗೆಜ್ಜೆಸರ, ಮುದ್ದಾದ ಮುಖ ಬಹಳ ಸುಂದರವಾಗಿದೆ. ಬಾಲಕೃಷ್ಣನನ್ನು ಸಂತಾನ ಗೋಪಾಲ ಕೃಷ್ಣ ಎಂತಲೂ ಕರೆಯುವರು. ಸಂತಾನ ಭಾಗ್ಯವನ್ನು ಅಪೇಕ್ಷಿಸುವ ದಂಪತಿಗಳು ಇಲ್ಲಿ ಬಂದು ನವನೀತ ಕೃಷ್ಣನಿಗೆ ಹರಕೆಯನ್ನು ಹೊತ್ತು, ಅದು ನೆರವೇರಿದ ಬಳಿಕ ಪುಟ್ಟ ತೊಟ್ಟಿಲಿನ ಕಾಣಿಕೆ ಹಾಗೂ ಸ್ವಾಮಿಗೆ ಬೆಣ್ಣೆಯ ಅಲಂಕಾರದ ಸೇವೆಯನ್ನು ನೆರವೇರಿಸುವರು.

ವ್ಯಾಸರಾಜರಿಂದ ಅರ್ಚಿತವಾದ ಬಾಲಕೃಷ್ಣನನ್ನು ದಾಸಶ್ರೇಷ್ಠರಾದ ಪುರಂದರದಾಸರು ದೊಡ್ಡಮಳೂರಿನ ಬಾಲಕೃಷ್ಣನನ್ನು ನೋಡಿ ಭಾವಪರವಶರಾಗಿ ತಮ್ಮ ಜನಪ್ರಿಯ ಕೃತಿ **"ಜಗದೋದ್ಧಾರನ ಆಡಿಸಿದಳೆಶೋದೆ"** ರಚಿಸಿದರು. ಇವರು ತಮ್ಮ ಕೃತಿಯಲ್ಲಿ ಇಲ್ಲಿರುವ ಮೂರೂ ಪ್ರಧಾನ ದೇವರುಗಳನ್ನು ಸ್ತುತಿಸಿದ್ದಾರೆ. **"ಜಗದೋದ್ಧಾರನ ಆಡಿಸದಳೆಶೋದೆ"** ಯೆಂದು ಬಾಲಕೃಷ್ಣನನ್ನು **"ಅಣೋರಣೀಯನ ಮಹಿತೋ ಮಹಿಮನ ಅಪ್ರಮೇಯನ"** ಎಂದು ಅಪ್ರಮೇಯನನ್ನು ಈ ದೇವಾಲಯದ ಆವರಣದಲ್ಲಿರುವ ಆದಿವಿಷ್ಣು, ವೈಕುಂಠ ನಾರಾಯಣ ಅಥವಾ ಪರವಾಸುದೇವ ಎಂದು ಕರೆಯುವ ವಿಷ್ಣು ಮೂರ್ತಿ



ಯನ್ನು **"ಪರಮಪುರುಷನ ಪರವಾಸು ದೇವನ ಆಡಿಸಿದಳ್ ಯಶೋದೆ"** ಎಂದು ಮೂರ್ತಿಯನ್ನು ಭಕ್ತಿಯಿಂದ ಸ್ತುತಿಸಿದ್ದಾರೆ. ಪುರಂದರದಾಸರ ಪುತ್ಥಳಿಯು ದೇವಾಲಯದ ಹೊರಗಿರುವ ರಥ ಮಂಟಪದ ಸ್ತಂಭದಲ್ಲಿದೆ.

ದೊಡ್ಡಮಳೂರಿನ ಅಪ್ರಮೇಯ ದೇವಾಲಯ ದಲ್ಲಿ ಮಹಾವಿಷ್ಣುವಿನ ಮೂರು ದಿವ್ಯರೂಪಗಳನ್ನು ದರ್ಶಿಸುವ ಭಾಗ್ಯ ಆಸ್ತಿಕರಿಗೆ ದೊರೆಯುತ್ತದೆ. ಈ ದೇವಾಲಯದ ರಾಜಗೋಪುರವು ಬಹಳ ಆಕರ್ಷ ಕವಾಗಿದೆ. ಸುಮಾರು ಐವತ್ತು ಅಡಿ ಎತ್ತರವಿರು ವುದು ಸ್ಥಳಗಳನ್ನು ಹೊಂದಿರುವ ಗೋಪುರದ ತುದಿ ಯಲ್ಲಿ ಎರಡು ಕೊಂಬುಗಳ ನಡುವೆ ಪಂಚ ಕಳಸ ವಿದೆ.

ಗೋಪುರದಲ್ಲಿ ಕೃಷ್ಣನ ಬಾಲಲೀಲೆಗಳಾದ ಕಾಳೀಯಮರ್ಧನ, ವಟಪತ್ರ ಶಾಯಿ, ನವನೀತ ಬಾಲಕೃಷ್ಣ ಹಾಗೂ ರಾಮಾಯಣದ ಕೆಲವು ದೃಶ್ಯ ಗಳು ನೋಡಲು ಆಕರ್ಷಕವಾಗಿವೆ. ದೊಡ್ಡ ಮಳೂ ರಿನ ಅಪ್ರಮೇಯ ದೇವಾಲಯದಲ್ಲಿ ಚೋಳರ ಕಾಲದ ಅನೇಕ ಶಾಸನಗಳು ದೊರೆತಿವೆ. ಕ್ರಿ.ಶ.1014 ರ ಶಾಸನದಲ್ಲಿ ಇವಕ್ಕಿಟ್ಟು ತೋಣಿಯಾ ಕ್ಕಿರ ಮಾವಿಟ್ಟನ್ ಎಂಬ ಅಧಿಕಾರಿಯು ಸ್ಥಳೀಯ ರಿಂದ ಭೂಮಿಯನ್ನು ಕೊಂಡು, ಭೂಮಿಯಲ್ಲಿ ಬೆಳೆ ಯನ್ನು ಬೆಳೆದು ನಿರ್ದಿಷ್ಟ ಪ್ರಮಾಣದ ಅಕ್ಕಿಯನ್ನು, ತುಪ್ಪವನ್ನು ಮಧ್ಯಾಹ್ನದ ನೈವೇದ್ಯಕ್ಕೆ ದೇವರಿಗೆ ಅರ್ಪಿಸಿ ಅದರಲ್ಲಿ ಸ್ವಲ್ಪ ಭಾಗ ಅಕ್ಕಿಯನ್ನು ದೇವಾ ಲಯಕ್ಕೆ ಹೊಂದಿಕೊಂಡಿರುವ ಹೂ ತೋಟವನ್ನು ನೋಡಿಕೊಳ್ಳುತ್ತಿದ್ದ ಕರುಮಾಣಿಕ್ಕ ಎಂಬ ತೋಟಿಗ ನಿಗೆ ನೀಡಿ, ಅವನ ಜೀವನ ನಿರ್ವಹಣೆಗೆ ವ್ಯವಸ್ಥೆ ಮಾಡಿದ್ದನು. ಕ್ರಿ.ಶ. 1050 ರ ಶಾಸನದಲ್ಲಿ ಅಪ್ರಮೇಯ ನಂಬಿಯಾರ ಎಂಬುವನು ಮೂರು ಗದ್ಯಾಣವನ್ನು ಠೇವಣಿ ಇರಿಸಿ ಅದರಲ್ಲಿ ಬರುವ ಬಡ್ಡಿಯಲ್ಲಿ ದೇವಾಲಯದ ಸೇವಾ ಕೈಂಕರ್ಯದ ನಿರ್ವಹಣೆಗೆ ವ್ಯವಸ್ಥೆ ಮಾಡಿದ್ದ. ಹೀಗೆ ಇಲ್ಲಿ ಹತ್ತಾರು ಶಾಸನ ಗಳಲ್ಲಿ ದೇವಾಲಯದ ನಿತ್ಯ ಸೇವೆಯ ವ್ಯವಸ್ಥೆ ಮಾಡಿದ್ದು ತಿಳಿಯ ಬರುತ್ತದೆ.

**ದೊಡ್ಡಮಳೂರಿನ ಅಪ್ರಮೇಯ ಸ್ವಾಮಿಯ ಬ್ರಹ್ಮ ರಥೋತ್ಸವ**

ಅಪ್ರಮೇಯ ಸ್ವಾಮಿಯ ಬ್ರಹ್ಮ ರಥೋತ್ಸವವು ಚೈತ್ರ ಮಾಸ ಶುಕ್ಲ ಪಕ್ಷದ ಚತುರ್ದಶಿಯಂದು ಮಧ್ಯಾಹ್ನ 12 ಗಂಟೆಯಿಂದ 12.30 ರೊಳಗೆ ನಡೆಯುವ ಶುಭ ಅಭಿಜಿತ್ ಲಗ್ನದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರುತ್ತದೆ.

**ಹೀಗೆ ಬನ್ನಿ**

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ದೊಡ್ಡಮಳೂರು ಗ್ರಾಮವು ಬೆಂಗಳೂರು-ಮೈಸೂರು ರಸ್ತೆಯಲ್ಲಿ, ಚನ್ನಪಟ್ಟಣದ ಸಮೀಪ ವಿರುವ ಕಣ್ವನದಿಯ ಸೇತುವೆಯ ನಂತರ ಸಿಗುತ್ತದೆ.

**ಫೆಬ್ರವರಿ 2025 ತಿಂಗಳ ರಸಪ್ರಶ್ನೆಯ ಉತ್ತರಗಳು**

01. ಏಳು
02. ಬಿಲ್ವಪತ್ರೆ
03. 12 ವರ್ಷ
04. ಸತ್ಯ
05. 101
06. ಮಾಘದ ಗೌರಿವ್ರತ
07. ಭೀಷ್ಮ ಪಿತಾಮಹರು
08. ತಪಸೀರಾಯ ಸ್ವಾಮಿ
09. ಪಾರ್ವತಿ ದೇವಿ
10. ಭೀಮ
11. ವ್ಯಾಘ್ರವಾದ
12. ವೆಂಕಟದಾಸರು
13. ಲಕ್ಷ್ಮೀದೇವಿ
14. ಗಿಳಿ ಮತ್ತು ಪಾರಿವಾಳದ ಎಣಿಕೆ
15. ಶಿವನ ಭಕ್ತಿ

## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

| | |
|---|---|
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಭಕ್ತವತ್ಸಲ | ಗೋವಿಂದಾ |
| ಭಾಗವತಪ್ರಿಯ | ಗೋವಿಂದಾ |
| ನಿತ್ಯನಿರ್ಮಲ | ಗೋವಿಂದಾ |
| ನೀಲಮೇಘಶ್ಯಾಮ | ಗೋವಿಂದಾ |
| ಪುರಾಣಪುರುಷ | ಗೋವಿಂದಾ |
| ಪುಂಡರೀಕಾಕ್ಷ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ನಂದನಂದನ | ಗೋವಿಂದಾ |
| ನವನೀತಚೋರ | ಗೋವಿಂದಾ |
| ಪಶುಪಾಲಕ ಶ್ರೀ | ಗೋವಿಂದಾ |
| ಪಾಪವಿಮೋಚನ | ಗೋವಿಂದಾ |
| ದುಷ್ಟಸಂಹಾರ | ಗೋವಿಂದಾ |
| ದುರಿತನಿವಾರಣ | ಗೋವಿಂದಾ |
| ಶಿಷ್ಟಪರಿಪಾಲಕ | ಗೋವಿಂದಾ |
| ಕಷ್ಟನಿವಾರಣ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಮಕುಟಧರ | ಗೋವಿಂದಾ |
| ವರಾಹಮೂರ್ತಿ | ಗೋವಿಂದಾ |
| ಗೋಪೀಜನಲೋಲ | ಗೋವಿಂದಾ |
| ಗೋವರ್ಧನೋದ್ಧಾರ | ಗೋವಿಂದಾ |
| ದಶರಥನಂದನ | ಗೋವಿಂದಾ |
| ದಶಮುಖಮರ್ದನ | ಗೋವಿಂದಾ |
| ಪಕ್ಷಿವಾಹನ | ಗೋವಿಂದಾ |
| ಪಾಂಡವಪ್ರಿಯ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಮತ್ಸ್ಯಕೂರ್ಮ | ಗೋವಿಂದಾ |
| ಮಧುಸೂದನ ಹರಿ | ಗೋವಿಂದಾ |
| ವರಾಹ ನರಸಿಂಹ | ಗೋವಿಂದಾ |
| ವಾಮನ ಭೃಗುರಾಮ | ಗೋವಿಂದಾ |
| ಬಲರಾಮಾನುಜ | ಗೋವಿಂದಾ |
| ಬೌದ್ಧಕಲ್ಕಿಧರ | ಗೋವಿಂದಾ |
| ವೇಣುಗಾನಪ್ರಿಯ | ಗೋವಿಂದಾ |
| ವೆಂಕಟರಮಣ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸೀತಾನಾಯಕ | ಗೋವಿಂದಾ |
| ಶ್ರಿತಪರಿಪಾಲಕ | ಗೋವಿಂದಾ |
| ದರಿದ್ರಜನಪೋಷಕ | ಗೋವಿಂದಾ |
| ಧರ್ಮಸಂಸ್ಥಾಪಕ | ಗೋವಿಂದಾ |
| ಅನಾಥರಕ್ಷಕ | ಗೋವಿಂದಾ |
| ಆಪತ್‌ಬಾಂಧವ | ಗೋವಿಂದಾ |
| ಶರಣಾಗತವತ್ಸಲ | ಗೋವಿಂದಾ |
| ಕರುಣಾಸಾಗರ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಕಮಲದಳಾಕ್ಷ | ಗೋವಿಂದಾ |
| ಕಾಮಿತಫಲದಾ | ಗೋವಿಂದಾ |
| ಪಾಪವಿನಾಶಕ | ಗೋವಿಂದಾ |
| ಪಾಹಿಮುರಾರೆ | ಗೋವಿಂದಾ |
| ಶ್ರೀಮುದ್ರಾಂಕಿತ | ಗೋವಿಂದಾ |
| ಶ್ರೀವತ್ಸಾಂಕಿತ | ಗೋವಿಂದಾ |
| ಧರಣೀನಾಯಕ | ಗೋವಿಂದಾ |
| ದಿನಕರತೇಜ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಪದ್ಮಾವತಿಪ್ರಿಯ | ಗೋವಿಂದಾ |
| ಪ್ರಸನ್ನಮೂರ್ತಿ | ಗೋವಿಂದಾ |
| ಅಭಯಹಸ್ತಪ್ರದರ್ಶನ | ಗೋವಿಂದಾ |
| ಮತ್ಸ್ಯಾವತಾರ | ಗೋವಿಂದಾ |
| ಶಂಖಚಕ್ರಧರ | ಗೋವಿಂದಾ |
| ಶಾರ್ಙ್ಗಗದಾಧರ | ಗೋವಿಂದಾ |
| ವಿರಜಾಸ್ಥ ತೀರ್ಥ | ಗೋವಿಂದಾ |
| ವಿರೋಧಿಮರ್ದನ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಸಾಲಗ್ರಾಮಧರ | ಗೋವಿಂದಾ |
| ಸಹಸ್ರನಾಮ | ಗೋವಿಂದಾ |
| ಲಕ್ಷ್ಮೀವಲ್ಲಭ | ಗೋವಿಂದಾ |
| ಲಕ್ಷ್ಮಣಾಗ್ರಜ | ಗೋವಿಂದಾ |
| ಕಸ್ತೂರಿ ತಿಲಕ | ಗೋವಿಂದಾ |
| ಕಾಂಚನಾಂಬರಧರ | ಗೋವಿಂದಾ |
| ಗರುಡವಾಹನ | ಗೋವಿಂದಾ |
| ಗಜರಾಜರಕ್ಷಕ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಾನರಸೇವಿತ | ಗೋವಿಂದಾ |
| ವಾರಧಿಬಂಧನ | ಗೋವಿಂದಾ |
| ಏಳುಬೆಟ್ಟದ ಒಡೆಯ | ಗೋವಿಂದಾ |
| ಏಕಸ್ವರೂಪ | ಗೋವಿಂದಾ |
| ಶ್ರೀರಾಮಕೃಷ್ಣ | ಗೋವಿಂದಾ |
| ರಘುಕುಲನಂದನ | ಗೋವಿಂದಾ |
| ಪ್ರತ್ಯಕ್ಷದೇವ | ಗೋವಿಂದಾ |
| ಪರಮದಯಾಕರ | ಗೋವಿಂದಾ |
| ಗೋವಿಂದ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ವಜ್ರಕವಚಧರ | ಗೋವಿಂದಾ |
| ವೈಜಯಂತಿಮಾಲ | ಗೋವಿಂದಾ |
| ಬಡ್ಡಿಯಕಾಸಿನ | ಗೋವಿಂದಾ |
| ವಸುದೇವತನಯ | ಗೋವಿಂದಾ |
| ಬಿಲ್ವಪತ್ರಾರ್ಚಿತ | ಗೋವಿಂದಾ |
| ಭಿಕ್ಷುಕ ಸಂಸ್ತುತ | ಗೋವಿಂದಾ |
| ಸ್ತ್ರೀಪುಂರೂಪ | ಗೋವಿಂದಾ |
| ಶಿವಕೇಶವಮೂರ್ತಿ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಬ್ರಹ್ಮಾಂಡರೂಪ | ಗೋವಿಂದಾ |
| ಭಕ್ತ ರಕ್ಷಕ | ಗೋವಿಂದಾ |
| ನಿತ್ಯಕಲ್ಯಾಣ | ಗೋವಿಂದಾ |
| ನೀರಜನಾಭ | ಗೋವಿಂದಾ |
| ಹಾಥೀರಾಮಪ್ರಿಯ | ಗೋವಿಂದಾ |
| ಹರಿಸರ್ವೋತ್ತಮ | ಗೋವಿಂದಾ |
| ಜನಾರ್ದನಮೂರ್ತಿ | ಗೋವಿಂದಾ |
| ಜಗತ್ಸಾಕ್ಷಿರೂಪ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಅಭಿಷೇಕಪ್ರಿಯ | ಗೋವಿಂದಾ |
| ಆಪನ್ನಿವಾರಣ | ಗೋವಿಂದಾ |
| ರತ್ನಕಿರೀಟ | ಗೋವಿಂದಾ |
| ರಾಮಾನುಜನುತ | ಗೋವಿಂದಾ |
| ಸ್ವಯಂಪ್ರಕಾಶ | ಗೋವಿಂದಾ |
| ಆಶ್ರಿತಪಕ್ಷ | ಗೋವಿಂದಾ |
| ನಿತ್ಯಶುಭಪ್ರದ | ಗೋವಿಂದಾ |
| ನಿಖಿಲಲೋಕೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಆನಂದರೂಪ | ಗೋವಿಂದಾ |
| ಆದ್ಯಂತರಹಿತ | ಗೋವಿಂದಾ |
| ಇಹಪರದಾಯಕ | ಗೋವಿಂದಾ |
| ಇಭರಾಜರಕ್ಷಕ | ಗೋವಿಂದಾ |
| ಪರಮದಯಾಳೋ | ಗೋವಿಂದಾ |
| ಪದ್ಮನಾಭ ಹರಿ | ಗೋವಿಂದಾ |
| ತಿರುಮಲೆವಾಸ | ಗೋವಿಂದಾ |
| ತುಲಸೀವನಮಾಲ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |
| ಶೇಷಾದ್ರಿನಿಲಯ | ಗೋವಿಂದಾ |
| ಶೇಷಶಾಯಿಯೆ | ಗೋವಿಂದಾ |
| ಶ್ರೀ ಶ್ರೀನಿವಾಸ | ಗೋವಿಂದಾ |
| ಶ್ರೀ ವೆಂಕಟೇಶ | ಗೋವಿಂದಾ |
| ಗೋವಿಂದಾ ಹರಿ | ಗೋವಿಂದಾ |
| ಗೋಕುಲನಂದನ | ಗೋವಿಂದಾ |

ಸರ್ವೇ ಜನಾ ಸುಖಿನೋಭವಂತು

# ಅಕ್ಷಯ ತೃತೀಯದ ಅಕ್ಷಯ ಫಲ





– ಸಚಿನ್ ಮುಂಗಿಲ

ಅಕ್ಷಯವೆಂದರೆ ಕ್ಷಯವಾಗದ್ದು ಎಂದು ಅರ್ಥ. ಹಿಂದೂ ಪಂಚಾಂಗ ಪದ್ಧತಿಯಲ್ಲಿ ಕೆಲವೊಂದು ದಿನಗಳು ಪಂಚಾಂಗ ನೋಡದೆಯೇ ಶುಭದಿನಗಳೆಂದು ಪರಿಗಣಿಸಲ್ಪಟ್ಟಿವೆ. ಅವುಗಳೆಂದರೆ ವಿಜಯದಶಮಿ,ಯುಗಾದಿ, ಅಕ್ಷಯ ತೃತೀಯ ಹಾಗೂ ಬಲಿ ಪಾಡ್ಯದ ಅರ್ಧದಿನ. ಈ ಮೂರೂವರೆ ದಿನಗಳಲ್ಲಿ ವಾರ, ನಕ್ಷತ್ರ ಹಾಗೂ ಕರಣಗಳನ್ನು ನೋಡಬೇಕಿಲ್ಲ. ಯಾವುದೇ ಶುಭಕಾರ್ಯ, ಉಪನಯನ, ಅಕ್ಷರಾಭ್ಯಾಸ ಅಥವಾ ಅನ್ನಪ್ರಾಶನ ಇತ್ಯಾದಿಗಳನ್ನು ಪಂಚಾಂಗ ನೋಡದೆಯೇ ನಿರ್ಧರಿಸಬಹುದು.

**"ಅಕ್ಷಯತೃತೀಯ ಯಾಕೆ ಪವಿತ್ರವಾದ ದಿನ?"**

ಅಕ್ಷಯ ತೃತೀಯ ದಿನದಂದು ಸ್ನಾನ,ಜಪ,ದಾನ ಎಲ್ಲವೂ ಅಕ್ಷಯ ಫಲ ನೀಡುತ್ತದೆ. ಈ ದಿನವೇ ಶ್ರೀವೇದವ್ಯಾಸ ದೇವರು ಶ್ರೀ ಮಹಾಭಾರತದ ರಚನೆಯನ್ನು ಪ್ರಾರಂಭಿಸಿದರು. ಶ್ರೀಸೂರ್ಯನಾರಾಯಣನಿಂದ ಪಾಂಡವರು ಅಕ್ಷಯಪಾತ್ರವನ್ನು ಪಡೆದದ್ದು ಈ ದಿನವೇ, ಸುದಾಮ (ಕುಚೇಲು) ಈ ದಿನದಂದೇ ಅವಲಕ್ಕಿಯನ್ನು ತೆಗೆದುಕೊಂಡು ಬಂದು ಶ್ರೀಕೃಷ್ಣನನ್ನು ಭೇಟಿ ಮಾಡುತ್ತಾನೆ. ಸಾಂಪ್ರದಾಯಿಕ ಹಿಂದೂ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ, ಸೂರ್ಯ ಮತ್ತು ಚಂದ್ರ ಈ ದಿನದಂದು ತಮ್ಮ ಅತ್ಯಂತ ಉನ್ನತ ಸ್ಥಾನದಲ್ಲಿರುತ್ತಾರೆ ಎಂದು ನಂಬಲಾಗಿದೆ. ಹಾಗಾಗಿ ಈ ದಿನವನ್ನು ವ್ಯರ್ಥ ಮಾಡದೆ,

ಭಗವಂತನ ಚಿಂತನೆಯಲ್ಲಿ ಕಳೆಯುವುದು ಹೆಚ್ಚು ಸೂಕ್ತವಾಗುತ್ತದೆ. ಹಾಗೆಯೇ ದೇವನ ಗಂಧಲೇಪಿತ ರೂಪ ನೋಡುವುದು ಕೂಡ ಅಚ್ಯುತನನ್ನು ಪಡೆಯುವ ದಾರಿಯಾಗಿ ತೋರುತ್ತದೆ ಎಂಬ ನಂಬಿಕೆ ಪರಂಪರೆಯಾಗಿ ಬಂದಿದೆ.

ಶ್ರೀಮದ್ಭಗವದ್ಗೀತೆಯ 11 ನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದಲ್ಲಿ **"ದಿವ್ಯಗಂಧಾನು ಲೇಪನಮ್"** ಎಂಬ ವಾಕ್ಯ ಬರುತ್ತದೆ. ಸಂಜಯನು ಧೃತರಾಷ್ಟ್ರನಿಗೆ ಪರಮಾತ್ಮನ ವಿಶ್ವರೂಪ ದರ್ಶನದ ವರದಿಯನ್ನು ನೀಡುವಾಗ, ಅರ್ಜುನನು ಭಗವಂತನ ದಿವ್ಯವಾದ ಗಂಧಲೇಪಿತ ಆಕಾರವನ್ನು ಕಂಡ ಎಂದು ಹೇಳುತ್ತಾನೆ.

ಇದೆಲ್ಲ ಭಗವಂತನ ರೂಪದ ವರ್ಣನೆಯಾದರೆ, ಭಗವದ್ಭಕ್ತರು ಪರಂಪರೆಯಲ್ಲಿ ಬಂದ ಗುರುಗಳ ಬೃಂದಾವನಕ್ಕೆ ಗಂಧ ಲೇಪನವನ್ನು ಮಾಡಿ ಕೃತಾರ್ಥರಾಗುತ್ತಾರೆ ಈ ಗಂಧಲೇಪನ ಅಕ್ಷಯ ತೃತೀಯ ದಂದು ನಡೆಯುವುದು.





ಮಂತ್ರಾಲಯ ರಾಯರ ಬೃಂದಾವನಕ್ಕೆ ಗಂಧ ಲೇಪವನ್ನು ಆ ದಿನ ಮಾಡುತ್ತಾರೆ. ಸಹಸ್ರಾರು ಭಕ್ತರು ಈ ಸೇವೆಯನ್ನು ಕೈಗೊಂಡು, ಗಂಧ ಲೇಪನ ಸ್ವರೂಪವನ್ನು ಕಂಡು ಧನ್ಯರಾಗುತ್ತಾರೆ. ಮಧ್ವ ಸಂಪ್ರದಾಯದಲ್ಲಿ ಬರುವ ಇತರ ಅನೇಕ ಗುರುಗಳ ಬೃಂದಾವನವನ್ನು ಕೂಡ ಗಂಧಲೇಪನಗೊಳಿಸಿ ಈ ದಿನವನ್ನು ಆಚರಿಸುತ್ತಾರೆ.

### ಲೌಕಿಕದಲ್ಲಿರುವ ಅಕ್ಷಯತೃತೀಯ ಆಚರಣೆಗಳು ಸರಿಯೇ?

ಲೌಕಿಕದಲ್ಲಿ ಅಕ್ಷಯ ತೃತೀಯದಂದು ಕೆಲವು ಆಚರಣೆಗಳು ಚಾಲ್ತಿಯಲ್ಲಿವೆ. ಆಭರಣಗಳ ಖರೀದಿ, ಚಿನ್ನದ ಖರೀದಿ, ಕಂಪನಿಗಳ ಶೇರುಗಳ ಖರೀದಿ, ಹೀಗೆ ಹತ್ತು ಹಲವು ನಂಬಿಕೆಗಳಿವೆ. ಇವು ಮಾರಾಟಗಾರರ ಆಸ್ತಿಯನ್ನು ಅಕ್ಷಯ ಮಾಡಬಹುದು. ಖರೀದಿ ಮಾಡುವವರು ಹಣ ಕಳೆದುಕೊಳ್ಳಬಹುದೇ ಹೊರತು ಇದರಲ್ಲಿ ಪಾರಮಾರ್ಥಿಕವಾದ ಯಾವುದೇ ಲಾಭವಿಲ್ಲ! ಇದಕ್ಕೆ ವೈದಿಕವಾದ ಮಾನ್ಯತೆಯಿಲ್ಲ. ಚಿನ್ನಾಭರಣಗಳ ಖರೀದಿ ಮಾಡಲೇ ಬೇಕೆಂದಿದ್ದರೆ ಪುಷ್ಯ ನಕ್ಷತ್ರ ಯಾವಾಗ ಗುರುವಾರದಂದು ಬರುತ್ತದೆ. ಆ ದಿನ ಖರೀದಿ ಮಾಡಬಹುದು. ಈ ದಿನವನ್ನು ಗುರು ಪುಷ್ಯವೆಂದು ಕರೆಯುತ್ತಾರೆ.


### ಪರಶುರಾಮ ಜಯಂತಿ

ಪರಶುರಾಮ ಜಯಂತಿಯ ಆಚರಣೆ ಅಕ್ಷಯ ತೃತೀಯದಂದು ನಡೆಯುವುದು. ಪರಶುರಾಮರನ್ನು ವಿಷ್ಣುವಿನ ಆರನೆಯ ಅವತಾರವನ್ನಾಗಿ ನಂಬಲಾಗುತ್ತದೆ. ರೇಣುಕ ಜಮದಗ್ನಿ ದಂಪತಿಗೆ ಜನಿಸಿದ ಪರಶುರಾಮ ರಾಮಾಯಣ ಹಾಗೂ ಮಹಾಭಾರತ ಕಾವ್ಯಗಳಲ್ಲಿ ಕಂಡು ಬರುತ್ತಾರೆ. ರಾಮಾಯಣದಲ್ಲಿ ಸೀತಾ ಸ್ವಯಂವರದ ಸಮಯದಲ್ಲಿ ಅವರ ವಿಷಯ ಬಂದರೆ ಮಹಾಭಾರತದಲ್ಲಿ ಪಿತಾಮಹಾ ಭೀಷ್ಮಾಚಾರ್ಯ, ದ್ರೋಣ, ರುಕ್ಮಿ ಹಾಗೂ ಕರ್ಣನ ಗುರುಗಳಾಗಿ ಸಿಗುತ್ತಾರೆ.

ಶ್ರೀಲಕ್ಷ್ಮಿಯ ಅವತಾರವಾದ ಧರಣೀದೇವಿಯನ್ನು ಪರಶುರಾಮರು ವಿವಾಹವಾಗುತ್ತಾರೆ.

ಕೊಂಕಣ ಕ್ಷೇತ್ರವಾದ ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ಜಾಗವನ್ನು ಸಾಗರ ರಾಜನಿಂದ ಪಡೆದ ಕಾರಣ ಆ ಭೂಭಾಗವನ್ನು ಇಂದಿಗೂ ಪರಶುರಾಮ ಸೃಷ್ಟಿ ಎಂದೇ ಕರೆಯುತ್ತಾರೆ.

ಒಟ್ಟಿನಲ್ಲಿ ಅಕ್ಷಯತೃತೀಯ ಪುಣ್ಯ ದಿನವೆಂಬುವುದರಲ್ಲಿ ಸಂಶಯವಿಲ್ಲ. ಪುಣ್ಯಾ ಚರಣೆಯೊಂದಿಗೆ ಪುರಾಣ ಪುಣ್ಯ ಜನರ ಜಯಂತಿಯು ಕೂಡ ಅಕ್ಷಯತೃತೀಯದಂದು ಇರುವುದು ಭಕ್ತಕೋಟಿ ಜನರಿಗೆ ಹರ್ಷ ತರುವ ಪರ್ವವಾಗಿದೆ.





## ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ॥ ಬಿ.ಎನ್.ಶ್ರೀನಿವಾಸನ್

### ಕಳೆದ ಸಂಚಿಕೆಯಿಂದ

ವಿಷ್ಣುಪುರಾಣದ ಏಳನೇ ಅಧ್ಯಾಯದ ಆರನೇ ಅಂಶದಲ್ಲಿ ಧ್ಯಾನಕ್ಕೆ ಅನುಕೂಲವಾಗುವಂತಹ ವಿಷ್ಣುವಿನ ಮೂರ್ತಿ ರೂಪದ ವಿವರಣೆಯಿದೆ. ಧ್ಯಾನದ ನಾಲ್ಕು ಸ್ತರಗಳನ್ನು ಕುರಿತು ಹೇಳಲಾಗಿದೆ. ಅತಿ ಕೆಳಸ್ತರದಲ್ಲಿ ಎಲ್ಲ ಆಯುಧ ಆಭರಣಗಳೊಡನೆ ಎಂಟು ಅಥವಾ ನಾಲ್ಕು ಕೈಗಳ ಮೂರ್ತಿಯನ್ನು ಹೇಳಲಾಗಿದೆ. ನಂತರದ ಧ್ಯಾನದ ಹಂತದ ಧ್ಯಾನದ ಮೂರ್ತಿಗೆ ಆಯುಧಗಳಿಲ್ಲ. ಇದಕ್ಕೂ ಮೇಲಿನ ಹಂತದಲ್ಲಿ ಆಭರಣಗಳೂ ಇಲ್ಲ. ಅತ್ಯುಚ್ಚ ಸ್ತರದಲ್ಲಿ ಮೂರ್ತಿಯ ಅವಯವಗಳು, ಎರಡು ಕೈಗಳು ಮಾತ್ರವೇ ಕಂಡುಬರುತ್ತವೆ. ಈ ಮೂರ್ತಿಯನ್ನು ಪ್ರಸನ್ನವದನನಾಗಿ, ಕಮಲದಳಾಯ ತಾಕ್ಷನಾಗಿ, ಸುಂದರವಾದ ಹುಬ್ಬುಗಳು, ವಿಶಾಲವಾದ ಹಣೆ, ವಿಶಾಲವಾದ ಕರ್ಣಕುಂಡಲಗಳು, ಸುಂದರವಾದ ವರ್ತುಲಾಕಾರದ ಬಲಮುರಿ ಶಂಖ ಸದೃಶಗಳ, ಶ್ರೀವತ್ಸದ ಗುರುತುಗಳ ಮೇಲೆ ಕುಳಿತ ಭಂಗಿಯಲ್ಲಿನ ಲಕ್ಷ್ಮೀದೇವಿಯನ್ನು ಹೊಂದಿದ ವಿಶಾಲವಾದ ವಕ್ಷಃಸ್ಥಳ, ತ್ರಿವಳಿಯ ಉದರ, ನಿಮ್ನನಾಭಿ, ಎಂಟು ಅಥವಾ ನಾಲ್ಕು ದೀರ್ಘಬಾಹುಗಳು, ಪರಿಶುದ್ಧ ಪೀತಾಂಬರ, ಕಿರೀಟ, ಕೇಯೂರ, ಹಾರ, ಕಡಗ ಉಂಗುರ, ಕಾಲುಂಗುರ ಮೊದಲಾದವುಗಳನ್ನು ಧರಿಸಿರುವಂತಿದೆ. ಅವನ ಕೈಲಿರುವ ಆಯುಧಗಳೆಂದರೆ ಶಾರ್ಙ್ಗ, ಶಂಖ, ಗದೆ, ಖಡ್ಗ, ಚಕ್ರ. ಅಕ್ಷಮಾಲೆಯು ಆರನೇ ಕೈಯಲ್ಲಿರುವುದು. ಮಿಕ್ಕ ಎರಡು ಕೈಗಳಲ್ಲಿ ಒಂದು ಅಭಯಹಸ್ತ ಮತ್ತೊಂದು ವರದ ಹಸ್ತ. ಕಮಲದ ಹೂವು ಅಲಂಕಾರವಾಗಿದೆ. ಮೇಲಿನ ಈ ರೂಪವು ಧ್ಯಾನದ ಪ್ರಥಮ ಹಂತಕ್ಕೆ ಸಂಬಂಧಿಸಿದ್ದು. ಈ ವಿವರಣೆಯು ವೆಂಕಟೇಶ್ವರಸ್ವಾಮಿಗೆ ಅನ್ವಯವಾಗುವುದಿಲ್ಲ. ನಂತರದ ಸ್ತರದಲ್ಲಿ ಎಲ್ಲ ಆಯುಧಗಳನ್ನು ಹೊರತುಪಡಿಸಿ, ನಾಲ್ಕು ಕೈಗಳು ಖಾಲಿಯಾಗಿರುತ್ತವೆ. ಆದರೆ ಇತರ ಎಲ್ಲ ಆಭೂಷಣಗಳೂ ದೇವರಿಗೆ ಉಂಟು. ಹೀಗಾಗಿ ಒಂದು ಸಾಮಾನ್ಯ ಅರ್ಥದಲ್ಲಿ ಈ ವಿವರಣೆ ವೆಂಕಟೇಶ್ವರಸ್ವಾಮಿಗೆ ಹೊಂದಬಹುದು. ಕೆಳಗಣ ಎರಡು ಕೈಗಳು ನಿಖರವಾಗಿದ್ದು ಒಂದು ವರದ ಹಸ್ತವಾಗಿ ಒಂದು ಕಟಿ ಅವಲಂಬಿತವಾಗಿ ಎರಡನೆಯ ಹಂತದ ಧ್ಯಾನ ಮೂರ್ತಿಗೆ ಸರಿಹೋಗುತ್ತದೆ. ಆದರೆ ತಿರುಮಲೆಯ ಮೂರ್ತಿ ಈ ನಿಯಮಗಳಿಗೆ ಒಳ ಪಡುವುದಿಲ್ಲ.

ಹೀಗಾಗಿ ಆಗಮಗಳ ನಿಯಮ ನಿರ್ದೇಶಗಳ ಅಧ್ಯಯನದ ನಂತರ ಯಾರಾದರೂ ಈ ಕೆಳಗಣ ಎರಡು ನಿರ್ಧಾರಗಳಲ್ಲಿ ಒಂದರತ್ತ ಬರಬಹುದು.

1. ತಿರುಮಲೆಯ ಆಲಯದಲ್ಲಿನ ಮೂರ್ತಿಯು ಆಗಮಗಳಲ್ಲಿನ ನಿಯಮಗಳ ಪ್ರಾಚುರ್ಯ, ದಾಖಲಾತಿಗಳಿಗೆ ಮೊದಲಿನಿಂದ ಇರುವಂತಹದು. ಅಥವಾ

2. ಇಲ್ಲಿನ ಮೂರ್ತಿಯು ಆದಿಕಾಲದಿಂದಲೂ ಅದರದೇ ಆದ ವರ್ಗಕ್ಕೆ ಸೇರಿದ್ದು, ದೇವರು ಸ್ವಯಂಭು ಅಥವಾ ಸರ್ವತಂತ್ರ ಸ್ವತಂತ್ರ ಎಂಬುದನ್ನು ಅವಧಾರಿಸಲು ಶಿಲ್ಪಿಯಿಂದ ಈ ರೀತಿಯಲ್ಲಿ ಪರಿಕಲ್ಪಿತವಾಯಿತು.

### ವಿಗ್ರಹ ವಿವರಣೆ:

ದೇವರ ಮೂರ್ತಿಯು ಸುಂದರವಾಗಿ, ಭವ್ಯವಾಗಿ, ಉತ್ಕೃಷ್ಟವಾಗಿ, ಇದೆ. ದೇವರ ಭವ್ಯತೆ, ಸೌಂದರ್ಯ, ಕಾರುಣ್ಯಗಳು ಸರ್ವರಿಗೂ, ಸಾಧಾರಣ ಅಲಂಕಾರಗಳಲ್ಲಿದ್ದಾಗಲಾಗಲೀ, ಶುಕ್ರವಾರದ ಅಭಿಷೇಕದಲ್ಲಾಗಲೀ ನೋಡಿದ ಮಾತ್ರದಿಂದ ಅನುಭವಕ್ಕೆ ಬರುವ ಸಂಗತಿಯಾಗಿದೆ. ದೇವರಲ್ಲಿ ಅತ್ಯಂತ ಆಕರ್ಷಕವಾದ ಅಂಶವೆಂದರೆ ಚುಂಬಕದಂತೆ ದೃಷ್ಟಿಯನ್ನು ಸೆಳೆದುಕೊಳ್ಳುವ ದಿವ್ಯ ಸೌಂದರ್ಯ, ಅದರಲ್ಲಿನ ಸಮುದ್ರ ಸದೃಶ ಕರುಣೆ, ಸಮದೃಷ್ಟಿಯನ್ನು ಹೊಂದಿದ ವಿಶಾಲ ಶ್ಯಾಮಲ ನಯನಗಳು ಅನಂತವಾದ ಕಿರುನಗೆ, ಅತ್ಯಂತ ವಿಶೇಷವಾದ ಶಾಂತಿ, ಸೌಲಭ್ಯವನ್ನು ಸೂಚಿಸುತ್ತ, ಪರಿಪೂರ್ಣ ಪ್ರೇಮವಾತ್ಸಲ್ಯಗಳನ್ನು ಪ್ರಕಟಿಸುತ್ತವೆ. ಪಂಥಗಳ ನಾಮಮಾತ್ರ ವೈವಿಧ್ಯದಿಂದ ಮೇಲೇರುವ ಸಾಮರ್ಥ್ಯವುಳ್ಳ ಪ್ರತಿಯೊಬ್ಬರೂ, ಬೇರೆ ಬೇರೆಡೆಯ ದೇವ ಸನ್ನಿಧಿಯಲ್ಲಿ ಪಡೆಯುವ ಸಂಯೋಗ ಚಿತ್ತಶಾಂತಿ ಸಮತೆಗಳನ್ನು ಇಲ್ಲಿಯೂ ಪಡೆಯಬಲ್ಲರು. ನಮ್ಮಲ್ಲಿನ ಅಹಂಕಾರವನ್ನು ನಾಶಪಡಿಸಿ, ನಾವು ದೇವಶಿಶುಗಳೆಂಬ ಭಾವದಲ್ಲಿ ಕುಟಿಲವಿಲ್ಲದೆ ಆನಂದ

ಪಡುವ ಕ್ಷಣ ತಿರುಮಲೇಶನ ಸನ್ನಿಧಿಯಲ್ಲಿ ಉಂಟು. ಅವನು ಎಲ್ಲರಲ್ಲಿಯೂ ಇರುವುದರಿಂದ ಎಲ್ಲರೂ ಅವನ ಅಂಶಗಳೇ ಆಗಿ ಅವನಿಗೆ ಶರಣಾದವರನ್ನು ಅವನೇ ನೋಡಿಕೊಳ್ಳುತ್ತಾನೆ. ನಮ್ಮ ಎಲ್ಲ ಎಚ್ಚರಗಳನ್ನೂ ಆ ನಿತ್ಯಸತ್ಯನು ನೋಡಿಕೊಳ್ಳು ವಾಗ, ನಮಗೇತರ ಭಯ! ಯಾತರ ಚಿಂತೆ! ಆತ ಇವೆಲ್ಲಕ್ಕೂ ಕೇಳುವುದು ಒಂದೇ ಬೆಲೆ-ಒಟ್ಟು ಬೆಲೆ-ನಮ್ಮ ಶರಣಾಗತಿ! ಅದನ್ನು ಒಪ್ಪಿಸುವುದು ಎಷ್ಟು ಸುಲಭ!!

ಸ್ವಾಮಿಯ ವಿಗ್ರಹವು ಶಿರೋಜಗಳಿಂದ ಕೂಡಿದ್ದು ಈ ಗುಂಗುರು ಹಲವು ಭಾಗ ಸ್ವಾಮಿಯ ಭುಜಗಳ ಮೇಲೆ ಇಳಿದು ಬಿದ್ದಿದೆ. ನಾಸಿಕವನ್ನು ಅತ್ಯಂತ ಎಚ್ಚರಿಕೆಯಿಂದ ತಿದ್ದಲಾಗಿದ್ದು ಅತಿ ಎತ್ತರವೂ ಅಲ್ಲದ ಅತಿ ಚಪ್ಪಟೆಯೂ ಅಲ್ಲದಂತಿದೆ. ದೇವರ ಬಾಯಿ ಕೂಡ ಅತಿ ಸುಂದರವಾಗಿದೆ. ಗಲ್ಲ ಹಾಗೂ ಕಿವಿಗಳು ಪ್ರಮಾಣಾನುಸಾರವಾಗಿವೆ. ದೇವರ ವಕ್ಷ ಪ್ರದೇಶವು ವಿಶಾಲವಾಗಿದ್ದು, ಉನ್ನತವಾಗಿದ್ದು,ಅಳತೆಮಾಡಿದರೆ 36 ಇಂಚಿನಿಂದ 40 ಇಂಚು ಇರಬಹುದು ಹಾಗೂ ಸೊಂಟದ ಅಳತೆ- 24 ರಿಂದ 27 ಇಂಚು ಆಗಿರಬಹುದು. ಕಂಠವು ಶಂಖಾಕಾರವಾಗಿದ್ದು ದೇಹವು ಸಿಂಹ ಸದೃಶವಾಗಿದೆ. ಹೊಟ್ಟೆಯೂ ಸುಂದರಾಕಾರ. ದೇವರಿಗೆ ನಾಲ್ಕು ಕೈಗಳಿದ್ದು ಮೇಲಿನೆರಡರಲ್ಲಿ ಚಕ್ರ, ಶಂಖಗಳನ್ನು ಹಿಡಿದಿದ್ದಾನೆ. ಆದರೆ ಮೂಲ ವಿಗ್ರಹದ ಭಾಗಗಳಲ್ಲ ಈ ಶಂಖಚಕ್ರಗಳು. ಮೇಲಿನ ಬಲಗೈ ಸುದರ್ಶನ ಚಕ್ರವನ್ನು ಹಿಡಿದಿದ್ದರೆ ಮೇಲಿನ ಎಡ ಗೈಯಲ್ಲಿ ಪಾಂಚಜನ್ಯ ಶಂಖವಿದೆ. ಕೆಳಗಡೆಯ ಬಲಗೈ ವರದ ಹಸ್ತವಾಗಿದೆ. ಕೆಳಗಡೆಯ ಎಡಗೈ ಕಟ್ಯವಲಂಬಿತ ಹಸ್ತ ವಾಗಿದೆ. ಕೆಳಗಡೆಯ ಎಡಗೈನ ಬೆರಳುಗಳು ಎಡಭಾಗದ ತೊಡೆಯನ್ನು ತಗಲುವಂತಿದ್ದು, ಹೆಬ್ಬೆರಳು ಹಾಗೂ ಕೈ ಮುಂಗೈ ಗಳು ಸೊಂಟದ ನೇರಕ್ಕೆ ಬಹುತೇಕ ಸಮಾನಾಂತರವಾಗಿವೆ. ವಿಗ್ರಹವು ತ್ರಿಭಂಗಿಯಲ್ಲಿ ನಿಂತ ನಿಲುವಿನದಾಗಿರದಿದ್ದರೂ, ಸೊಂಟದ ಹತ್ತಿರ ಹಾಗೂ ಕೆಳಗಡೆಯ ನಿಲುವು ತುಸು ಎಡಕ್ಕೆ ವಾಲಿದಂತೆ ಇದೆ. ಮೊಣಕಾಲುಗಳು ತುಸು ಬಾಗಿ, ಹೊರಕ್ಕೆ ತೆರೆದುಕೊಂಡು ವಿಗ್ರಹಕ್ಕೆ ಒಂದು ವಿಶೇಷ ಆಕರ್ಷಣೆಯನ್ನು ಒದಗಿಸಿದೆ. ಮೂಲಮೂರ್ತಿಯ ಎದೆಯ ಎಡಭಾಗದಲ್ಲಿ ವಿಗ್ರಹದ ಅವಿನಾಭಾವಿ ಅಂಗವಾಗಿ ಕುಳಿತ ಭಂಗಿಯಲ್ಲಿ ಲಕ್ಷ್ಮಿಯ ಚಿತ್ರವನ್ನು ಕೆತ್ತಲಾಗಿವೆ. ತೋಳುಗಳಿಗೆ ತೋಳ ಬಂದಿ ಯಿವೆ. ಸೊಂಟದಿಂದ ಕೆಳಕ್ಕೆ ವಿಗ್ರಹವು ಪಂಚೆಯನ್ನುಟ್ಟಂತೆ ಇದೆ. ಮೇಲಿನ ಭಾಗ ಯಾವುದೇ ವಸ್ತ್ರದಿಂದ, ಉತ್ತರೀಯ ದಿಂದ ಬಳಸಲ್ಪಟ್ಟಿಲ್ಲ. ದೇವರ ಎದೆಯಲ್ಲಿ ಎರಡೂ ಚೂಚುಕ ಗಳೂ ಪ್ರಮುಖವಾಗಿವೆ. ಕಟಿಬಂಧವೊಂದಿದ್ದು ಇದು ಅಗಲದಲ್ಲಿ ಎರಡು ಅಂಗುಲ ಇರಬಹುದು. ದೇವರ ಕಾಲು ಗಳು ಹಾಗೂ ಪಾದಗಳು ಸಮಪ್ರಮಾಣವಾಗಿ, ಸುಂದರ ವಾಗಿವೆ. ಎರಡೂ ಮೊಣಕಾಲುಗಳು ಸ್ವಲ್ಪ ಬಾಗಿ ಹೊರಕ್ಕೆ ತೆರೆದುಕೊಂಡಂತೆ ಇದ್ದು, ವಿಗ್ರಹಕ್ಕೆ ಭವ್ಯತೆಯನ್ನು ತಂದು ಕೊಟ್ಟಿವೆ. ಪಾದಗಳು ಪರಿಪೂರ್ಣತೆಯ ನಮೂನೆಗಳಾಗಿ, ಮೀನಖಂಡದ ಬಳಿಯಲ್ಲಿ ಆಭರಣಗಳಿವೆ. ದೇವರ ಭುಜ ಗಳಲ್ಲಿ ಬಿಲ್ಲು ಬಾಣಗಳನ್ನು ತೂಣೀರ ಧರಿಸಿದ ಗುರುತು ಗಳಿವೆ.

ದೇವರ ವಿಗ್ರಹವು ದಿವ್ಯ ಮನೋಹರಮೂರ್ತಿಯ ಒಂದು ವಿಶೇಷ ಮಾದರಿ,ಅಮೃತವಾದ ಶಾಶ್ವತ ತತ್ವದ ಮೂರ್ತಿ ರೂಪವೇ ಈ ವಿಗ್ರಹವೆಂದು ಎಲ್ಲರೂ ಒಪ್ಪುವು ದಾಗಿ,ಅತ್ಯಂತ ದಯಾಭಾವನೆಯ ತನ್ನ ಕರವನ್ನು ಮುಂದಕ್ಕೆ ಚಾಚಿ,ಮನುಷ್ಯನನ್ನು ಮುಟ್ಟಿ ಅವನಲ್ಲಿ ತಾನೇನು ಎಂಬುದರ ಬಗ್ಗೆ ನಿಜವನ್ನು ನಿರುಕಿಸುವಂತೆ ಮಾಡಿ,ಅವನ ಆತ್ಮವನ್ನು ಉದ್ಧಾರ ಮಾಡಲು ಇಳಿದು ಬಂದಿರುವ ಮೂರ್ತಿಯಿದು. ತಿರು ಮಲೆಯ ದೇವರ ದರ್ಶನ ಮಾಡಿದವನು ಯಾವನೂ ಇನ್ನೊಬ್ಬನನ್ನು ಎಂದಿಗೂ ದ್ವೇಷಿಸುವುದಿಲ್ಲ. ತಿರುಮಲೆಯ ದೇವರ ದರ್ಶನವೇ ಒಂದು ಆಧ್ಯಾತ್ಮಿಕ ಅನುಭವವಾಗಿದ್ದು ಅದಾದ ನಂತರ ಪ್ರತಿಯೊಬ್ಬರೂ ತಾವು ಮೊದಲಿಗಿಂತಲೂ ಪೂರ್ಣ ಬೇರೆಯಾದವರಂತೆ ಅನುಭವ ಪಡೆಯುವರು. ಅಸಂಖ್ಯ ಜನರು ಸ್ವಾಮಿಯ ಬಳಿಗೆ ಉದ್ದುದ್ದ ಕೋರಿಕೆ, ಪ್ರಾರ್ಥನೆಗಳ ಪಟ್ಟಿ ಹಿಡಿದು ಹೋಗುವರು. ಅವರವರ ಅಭಿ ಲಾಷೆಗಳು ಈಡೇರುವುವೋ ಇಲ್ಲವೋ, ಅವನತ್ತ ನಿಷ್ಕಳಂಕ ಹೃದಯದಿಂದ ತಿರುಗಿದ ಶರಣಾಗತನಿಗೆ ಅಪರೂಪವಾದ ಶಾಂತಿ ಸಮತೆಗಳು ದಕ್ಕಿ, ಒಂದು ದಿವ್ಯಶಕ್ತಿಯ ಸನ್ನಿಧಿಯಲ್ಲಿ ರುವ ಅನುಭವವಂತೂ ಆಗಿಯೇ ತೀರುವುದು.

ವಾಚಾಮಗೋಚರನಾದವನನ್ನು ವಾಕ್ಕಿನಲ್ಲಿ ವಿವರಿ ಸಲೂ, ಕಾಲಾತೀತನಾದವನನ್ನು ಕಾಲಿಕವಾದದ್ದರಿಂದ ಮಿತಿ ಗೊಳಿಸಲೂ ಯಾರಿಗೆ ಸಾಧ್ಯ! ನಾವು ನಮ್ಮ ಅಹಂಕಾರ ದಿಂದಾಗಿ ಅವನ ಸೇವೆ ಮಾಡಲು ಯೋಚಿಸುತ್ತೇವೆ. ನಾವೇನೇ ಮಾಡಿದರೂ ದೇವರ ದಯೆ, ಕರುಣೆ ಅಪಾರ ವಾಗಿದ್ದು,ಭಕ್ತನಿಗೆ ಏನೇ ಸಿಗಬಹುದು ಅಥವಾ ಬಿಡಬಹುದು. ಅವನಿಗೆ ಚಿತ್ತ ಸಮತೆ,ಯಾವುದನ್ನಾದರೂ ಸಹಿಸಬಲ್ಲ ದೃಢತೆ ಸಿಗುವುದರಲ್ಲಿ ಸಂದೇಹವಿಲ್ಲ.

ದೇವಾಲಯಗಳು ಜೀವಂತ ಸಂಸ್ಥೆಗಳೆನ್ನಲು ಆಧಾರ ವೇನಾದರೂ ಬೇಕಿದ್ದಲ್ಲಿ ತಿರುಮಲೆಯ ಆಲಯ ಅಂತಹ ಒಂದು ದಾಖಲಾದ ಸಾಕ್ಷ್ಯವೆನ್ನಬಹುದು.

**ವಿಗ್ರಹದ ವೈಷ್ಣವತೆ :**

ತಿರುಮಲೆಯ ಆಲಯದಲ್ಲಿನ ವಿಗ್ರಹವು ವಿಷ್ಣುವೋ ಶಿವನೋ ಎಂಬ ವಾದ ಬಹುಕಾಲದಿಂದಲೂ ನಡೆದು ಬಂದಿದೆ. ಈ ವಿಗ್ರಹ ಸುಬ್ರಹ್ಮಣ್ಯನದು ಎನ್ನುವ ಒಂದು ವಾದವೂ ಉಂಟು. ಅತಿ ಕೊನೆಯಲ್ಲಿ ವಿಗ್ರಹ ಶಕ್ತಿಯದು ಎನ್ನುವವರೂ ಉಂಟು. ಈ ಆಲಯದ ಪಾವಿತ್ರ್ಯವನ್ನು ನಂಬುವ ಭಕ್ತರ ಮನದಲ್ಲಿ ಆಗಾಗ ಕೋಲಾಹಲ ವೆಬ್ಬಿಸುವ ತೀವ್ರವಾದ ಪ್ರಶ್ನೆಗಳಿವು. ಹೀಗಾಗಿ ಈ ಪ್ರಶ್ನೆಯನ್ನು ಆಮೂ

ಲಾಗ್ರ ಪರಿಶೀಲಿಸಿ,ಒಂದು ಕಡೆಯ ಮಾತಿಗೆ ಬರಬೇಕಾದ ಅಗತ್ಯವಿದೆ. ಇಲ್ಲಿನ ವಿಗ್ರಹ ಶಿವನೆಂದು ವಾದ ಮಾಡುವ ಜನರು ಮುಂದಿಡುವ ಸಾಕ್ಷ್ಯಗಳು ಈ ರೀತಿಯಿವೆ-

1. ಇಪ್ಪತ್ತು ಅಂಗುಲಗಳಿಗಿಂತಲೂ ಉದ್ದವಿರುವ ದೇವರ ಕಿರೀಟದಿಂದ ಇಳಿದು ಬಂದಿರುವ ಜಟಾಜೂಟ, ಇದರ ಬಹು ಭಾಗ ಭುಜಗಳನ್ನು ಆವರಿಸಿದೆ.

2. ದೇವರ ತೋಳ ಬಂದಿಗಳಲ್ಲಿ ಬೆರಳಿನಾಕಾರ ಹೊರ ಬಂದ ಭಾಗವಿದ್ದು ನಾಗಭೂಷಣದಂತಿದ್ದು ದೇವರ ಬಲ ತೋಳಿನಲ್ಲಿ ಒಂದು ನಾಗಾಭರಣವೂ ಇದೆ.

3. ಆಲಯದಲ್ಲಿ ಶಿವಪೂಜೆಯಲ್ಲಿ ಮಾತ್ರವೇ ಬಳಸ ಲಾಗುವ ಬಿಲ್ವಪತ್ರವನ್ನು ಪೂಜೆಯಲ್ಲಿ ಬಳಸಲಾಗುತ್ತದೆ.

4. ದೇವರ ತಲೆಯಲ್ಲಿ ಚಂದ್ರನ ಗುರುತೂ ಇದ್ದು ವಿಗ್ರಹವು ಶಿವನದೇ ಎಂಬುದಾಗಿ ಸಾಬೀತು ಪಡಿಸುತ್ತದೆ.

5. ತಿರುಮಲೆಯ ಆಲಯದಲ್ಲಿ ಒಂದು ಸ್ಫಟಿಕಲಿಂಗವಿದ್ದು ಪ್ರಾಚೀನಕಾಲದಲ್ಲಿ ಇದು ಶಿವ ದೇವಾಲಯವಾಗಿದ್ದಿರಬೇಕು. ನಂತರದ ಕಾಲದಲ್ಲಿ ರಾಮಾನುಜರಿಂದ ನಿತ್ಯಾರ್ಚನೆ ಮುಂತಾದವುಗಳಲ್ಲಿ ಉಂಟಾದ ಪರಿವರ್ತನೆಗಳೊಡನೆ ಇದು ವೈಷ್ಣವ ಆಲಯವಾಗಿರಬೇಕು.

**- ಮುಂದುವರೆಯುತ್ತದೆ.**

## ಪುಸ್ತಕ ಪರಿಚಯ




**ಲೇಖರು :** ಆರ್.ಸಿ. ಕೃಷ್ಣಸ್ವಾಮಿರಾಜು
**ಕನ್ನಡಾನುವಾದ :** ಸೂರ್ಯವಂಶಿ
**ಪುಟಗಳು :** 95, **ಬೆಲೆ :** 150/-
**ಪ್ರತಿಗಳಿಗೆ :** ವಿಕ್ರಮ್ ಪ್ರಕಾಶನ,
ನಂ. 23, ಅರ್ಕ, 18 ನೇ ಅಡ್ಡರಸ್ತೆ,
1 ನೇ ಮುಖ್ಯ ರಸ್ತೆ, ಭುವನೇಶ್ವರಿ ನಗರ,
ಕಾಫೀಬೋರ್ಡ್ ಲೇಔಟ್ ಪಾರ್ಕ್ ಹತ್ತಿರ,
ಹೆಬ್ಬಾಳ, ಬೆಂಗಳೂರು - 560 024

ಈ ಪುಸ್ತಕವೂ ಆರ್.ಸಿ.ಕೃಷ್ಣಸ್ವಾಮಿ ರಾಜು ಅವರು ತೆಲುಗಿನಲ್ಲಿ ರಚಿಸಿದ್ದು, ಕನ್ನಡಕ್ಕೆ ಸೂರ್ಯವಂಶಿಯವರು ಅನುವಾದಿಸಿದ್ದಾರೆ.

ಈ ಪುಸ್ತಕದಲ್ಲಿ ರಾಣಿಯ ಕತೆಗಳು ಎಂಬ ಮುಖ ಶೀರ್ಷಿಕೆ ಇದ್ದರೂ ಒಳಗೆ ಇರುವ ಎಲ್ಲಾ ಕತೆಗಳು ವಿಭಿನ್ನವಾಗಿವೆ. ಹಾಗೇ ರಾಣಿಯು ತನ್ನ ರಾಜ್ಯದ ಒಳಿತಿಗಾಗಿ ಯಾವ ರೀತಿ ತ್ಯಾಗ ಮಾಡಿದಳು ಎಂಬುದನ್ನು "ಏಳು ಎಳೆಯ ಹಾರ" ಎಂಬ ಕತೆಯಲ್ಲಿ ವಿವರಿಸಿ, ನಿಸ್ವಾರ್ಥ ಜೀವನದ ಬಗೆಗೆ ತಿಳಿಸಿದ್ದಾರೆ.

ಯೋಗಾ ಒಂದು ಯೋಗ ಎಂಬ ಕತೆಯಲ್ಲಿ ಯೋಗಾ ಮಾಡುವುದರಿಂದ ದೊರೆಯುವ ಲಾಭಗಳನ್ನು ಮತ್ತು ಅದರ ಮಹತ್ವವನ್ನು ವಿವರಿಸಿದ್ದಾರೆ.

ಜಾಮೀನು ಎಂಬ ಕತೆಯಲ್ಲಿ ಹಾಸ್ಯವನ್ನು ಬೆರಸಿ, ಭಾಷೆಗಳಲ್ಲಿ ಇರುವ ವ್ಯತ್ಯಾಸವನ್ನು ತಿಳಿಸಿದ್ದಾರೆ. ಇದರಿಂದ ಪ್ರತಿಯೊಬ್ಬರೂ ಹಲವು ಭಾಷೆಗಳನ್ನು ಕಲಿತರೆ ಎಷ್ಟು ಒಳ್ಳೆಯದು ಎಂಬುದನ್ನು ತಿಳಿಸಿದ್ದಾರೆ.

ಮಳೆ - ಅಳು ಎಂಬ ಕತೆಯಲ್ಲಿ ರಾಜಕುಮಾರನಿಗೆ ಒಳ್ಳೆಯ ಬುದ್ಧಿಯನ್ನು ಕಲಿಸಿ ಅವನನ್ನು ಪ್ರಜಾರಂಜಕವಾಗಿ ಬದಲಾದ ಘಟನೆಯನ್ನು ತಿಳಿಸಿದ್ದಾರೆ.

ನಂಬಿಕೆಯ ಹೆಸರೇ ಅಪ್ಪ ಎಂಬ ಕತೆಯಲ್ಲಿ ತಂದೆ ಮಕ್ಕಳಿಗಾಗಿ ಯಾವ ರೀತಿ ಶ್ರಮಿಸುತ್ತಾನೆ. ಮಕ್ಕಳನ್ನು ಪ್ರೀತಿಸುವ ನಿಸ್ವಾರ್ಥ ತಂದೆಯ ಬಗೆಗೆ ಮನವನ್ನು ಸೆಳೆಯುವ ಘಟನೆಯ ಮೂಲಕ ಕತೆಯಲ್ಲಿನ ಸ್ವಾರಸ್ಯವನ್ನು ಹೆಚ್ಚಿಸಿದ್ದಾರೆ. ಈ ಕತೆಗಳನ್ನು ರಚಿಸಿ ಹಿರಿಯರ, ಕಿರಿಯರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡಿರುವ ಮೂಲ ಲೇಖಕರು ಹಾಗೂ ಅನುವಾದಕರಿಬ್ಬರಿಗೂ ಅಭಿನಂದನೆಗಳು.

**ಪ್ರತಿಗಳಿಗೆ ಸಂಪರ್ಕಿಸಿ: ಎಂ.ಎಲ್. ಹರಿಪ್ರಸಾದ್**
**ದೂರವಾಣಿ ಸಂಖ್ಯೆ :- 97409 94008**

**- ಎಸ್. ವಾದಿರಾಜ್**

# 2025 ಮಹಾಕುಂಭಮೇಳದ ವಿಶೇಷಗಳು



ಮಾಘ ಮಾಸದಲ್ಲಿ ಪ್ರಯಾಗದಲ್ಲಿ ನಿರ್ವಹಿಸಿದ ಮಹಾಕುಂಭಮೇಳವು ಪ್ರಪಂಚದಲ್ಲೇ ಅತಿ ದೊಡ್ಡ ಆಧ್ಯಾತ್ಮಿಕ ಸಂಗಮವೆಂದರೆ ತಪ್ಪಾಗಲಾರದು. ಈ ಮೇಳದಲ್ಲಿ ಪ್ರತ್ಯೇಕವಾಗಿ ನಾಗಸಾಧುಗಳು, ಸಾಧುಗಳು, ಸಂತರು ಅತಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡರು. ಅಲ್ಲಲ್ಲಿ ಶಿಬಿರಗಳನ್ನು ನಿರ್ಮಿಸಿಕೊಂಡು, ಮೆರವಣಿಗೆಗಳನ್ನು ಮಾಡುತ್ತಾ ನೋಡುಗರಿಗೆ ಅದೊಂದು ಜಾತ್ರೆಯಂತೆ ಭಾಸವಾಗುತ್ತಿತ್ತು. ದೇಶ,ವಿದೇಶಗಳಿಂದ ಹಳ್ಳಿಗಳು, ಪಟ್ಟಣಗಳಿಂದ ಹಾಜರಾಗುತ್ತಿದ್ದ ಚಿಕ್ಕವರು, ದೊಡ್ಡವರು, ಮಕ್ಕಳು, ವೃದ್ಧರು, ಬಡವರು, ಶ್ರೀಮಂತರೆಂಬ ಭೇದವಿಲ್ಲದೇ ಎಲ್ಲರೂ ಒಂದೆಡೆ ಸೇರಿ ಆಚರಿಸುವಂತಹಾ ಹಬ್ಬದಂತಿತ್ತು.

ಕುಂಭ ಅಂದರೆ ಕೊಡ ಅಥವಾ ಬಿಂದಿಗೆ ಎಂದರ್ಥ. ಇದನ್ನು ಕಲಶ ಎಂದೂ ಕರೆಯುತ್ತಾರೆ. 12 ವರ್ಷಗಳಿಗೆ ಒಮ್ಮೆ ಸಂಭವಿಸುವ ಗ್ರಹಗತಿಗಳನ್ನು ಅನುಸರಿಸಿ ನದಿಗಳಿಗೆ ಪುಷ್ಕರಗಳನ್ನು ನಡೆಸುವಂತೆ ಕುಂಭಮೇಳವನ್ನು ಗ್ರಹಗತಿಗಳನ್ನು ಅನುಸರಿಸಿ ನಿರ್ವಹಿಸಿದರು.


ದೇವತೆಗಳು ಮತ್ತು ದಾನವರು ಅತ್ಯಂತ ಶಕ್ತಿವಂತರಾಗಬೇಕೆಂದು ಅದಕ್ಕೆ ಅಮೃತವು ಬೇಕೆಂದು ಯೋಚಿಸಿ ಕ್ಷೀರಸಾಗರವನ್ನು ಮಥನ ಮಾಡುವುದಕ್ಕೆ ಸಿದ್ಧರಾದರು. ಕ್ಷೀರಸಾಗರ ಮಥನದಿಂದ ಉದ್ಭವಿಸುವ ಅಮೃತವನ್ನು ಇಬ್ಬರೂ ಸರಿಯಾಗಿ ಹಂಚಿಕೊಳ್ಳಬೇಕೆಂಬ ಒಪ್ಪಂದದ ಮೇರೆಗೆ ಇಬ್ಬರೂ ಮಂದರ ಪರ್ವತವನ್ನು ಕಡೆಗೋಲಿನಂತೆ ಹಾಗೂ ಸರ್ಪರಾಜನಾದ ವಾಸುಕಿಯನ್ನು ಹಗ್ಗದಂತೆ ಮಾಡಿಕೊಂಡು ಕ್ಷೀರಸಾಗರವನ್ನು ಕಡೆಯಲಾರಂಭಿಸಿದರು. ಅವರುಗಳ ಪ್ರಯತ್ನದ ಫಲವಾಗಿ ಅಮೃತವು ಉದ್ಭವಿಸಿತು. ಕೂಡಲೇ ಇಬ್ಬರ ನಡುವೆ ಗಲಾಟೆ ಪ್ರಾರಂಭವಾಗುತ್ತದೆ. ಆಗ ಮಹಾವಿಷ್ಣುವು ಈ ಅಮೃತಭಾಂಡವನ್ನು ತೆಗೆದುಕೊಂಡು ಬರುತ್ತಿರುವಾಗ ಹರಿದ್ವಾರ, ಉಜ್ಜಯಿನಿ, ನಾಸಿಕ್ ಪ್ರಯಾಗದಲ್ಲಿನ ನದಿಗಳಲ್ಲಿ ಅಮೃತ ಕಲಶದಿಂದ ಕೆಲವು ಬಿಂದುಗಳು ಅವುಗಳಲ್ಲಿ ಬಿದ್ದುವು. ಅಂದಿನಿಂದ ಕುಂಭಮೇಳ ಎಂಬ ಹೆಸರಿನಲ್ಲಿ ಇಲ್ಲಿ ಜಾತ್ರೆಯು ನಡೆಯುತ್ತಿದೆ ಎನ್ನುತ್ತಾರೆ. ಸೂರ್ಯ, ಬೃಹಸ್ಪತಿ ಗ್ರಹಗಳ ಸ್ಥಾನಗಳ ಆಧಾರದ ಮೇಲೆ ಈ ಸಂಭ್ರಮವನ್ನು ನಡೆಸುತ್ತಾರೆ. ಸೂರ್ಯ ಮತ್ತು ಗುರುಗ್ರಹಗಳು ಸಿಂಹರಾಶಿಯನ್ನು ಪ್ರವೇಶಿಸಿದಾಗ ಈ ಕುಂಭಮೇಳವು ನಾಸಿಕ್‌ನಲ್ಲಿನ ತ್ರಯಂಬಕೇಶ್ವರನಲ್ಲಿ, ಸೂರ್ಯನು ಮೇಷರಾಶಿಯಲ್ಲಿ ಪ್ರವೇಶಿಸಿದಾಗ ಹರಿದ್ವಾರದಲ್ಲಿ, ಬೃಹಸ್ಪತಿಯು ವೃಷಭರಾಶಿಯಲ್ಲಿ ಪ್ರವೇಶಿಸಿದಾಗ, ಸೂರ್ಯನು ಮಕರರಾಶಿಯಲ್ಲಿ ಪ್ರವೇಶಿಸಿದಾಗ ಪ್ರಯಾಗದಲ್ಲಿ ಬೃಹಸ್ಪತಿ ಸೂರ್ಯ ಇಬ್ಬರೂ ವೃಶ್ಚಿಕರಾಶಿಯಲ್ಲಿ ಪ್ರವೇಶಿಸಿದಾಗ ಉಜ್ಜಯಿನಿಯಲ್ಲಿ ಕುಂಭಮೇಳವು ನಡೆಯುತ್ತದೆ. ಸಾಧಾರಣವಾಗಿ ಕುಂಭಮೇಳವು ಪ್ರತಿ 4 ವರ್ಷಗಳಿಗೆ ಒಮ್ಮೆ, ಅರ್ಧಕುಂಭಮೇಳವು, ಪ್ರತಿ 6 ವರ್ಷಗಳಿಗೆ ಒಮ್ಮೆ ಹರಿದ್ವಾರದಲ್ಲಿ, ಪ್ರಯಾಗದಲ್ಲಿ ನಡೆಯುತ್ತದೆ. ಪೂರ್ಣಕುಂಭಮೇಳವು 12 ವರ್ಷಗಳಿಗೆ ಒಮ್ಮೆ ಪ್ರಯಾಗ, ಹರಿದ್ವಾರ, ಉಜ್ಜಯಿನಿ, ನಾಸಿಕ್‌ನಲ್ಲಿ ನಡೆಯುತ್ತದೆ. 12 ಪೂರ್ಣ ಕುಂಭಮೇಳಗಳು ಪೂರ್ತಿಯಾದ ನಂತರ 144 ವರ್ಷಗಳಿಗೆ ಒಮ್ಮೆ ಪ್ರಯಾಗರಾಜ್‌ದಲ್ಲಿರುವ ತ್ರಿವೇಣಿಸಂಗಮದಲ್ಲಿ ಮಹಾಕುಂಭಮೇಳವು ನಡೆದಿದೆ. ಇದು ಮಾಘ ಹುಣ್ಣಿಮೆಯಿಂದ ಅಂದರೆ ಜನವರಿ 13 ರಿಂದ ಪ್ರಾರಂಭವಾಗಿ 45 ದಿನಗಳ ಕಾಲ ಸುದೀರ್ಘವಾಗಿ ನಡೆದಿದ್ದು ಫೆಬ್ರವರಿ 26 ಮಹಾಶಿವರಾತ್ರಿಯ ಮಾರನೆಯ ದಿನ 27 ಮಾಘ ಅಮಾವಾಸ್ಯೆವರೆಗೂ ಕೊನೆಸಾಗಿತು. ನಮ್ಮ ದೇಶದಲ್ಲಿನ ವಿವಿಧ ಪ್ರಾಂತಗಳಿಂದ ಜನರು ತಂಡೋಪತಂಡವಾಗಿ ಬಂದು ಪ್ರಯಾಗದಲ್ಲಿನ ತ್ರಿವೇಣಿ ಸಂಗಮದಲ್ಲಿ ಪವಿತ್ರವಾದ ಸ್ನಾನಗಳನ್ನು ಆಚರಿಸಿ ಆರೋಗ್ಯವನ್ನು ಶಕ್ತಿಯನ್ನು ಪಡೆದಿದ್ದಾರೆ. ಈ ಕುಂಭಮೇಳದಲ್ಲಿ ಹೆಚ್ಚೂ ಕಡಿಮೆ 60 ಕೋಟಿ ಜನರು ಪುಣ್ಯ ಸ್ನಾನಗಳನ್ನು ಆಚರಿಸಿದಂತೆ ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೇ ಪಿತೃ ದೇವತೆಗಳಿಗೆ ತರ್ಪಣಗಳನ್ನು ನೀಡುವುದರಿಂದ ಪಿತೃ ದೇವತೆಗಳು ಪುಣ್ಯಲೋಕಗಳಿಗೆ ತಲುಪುತ್ತಾರೆಂದು ಪ್ರತೀತಿ. ಮಹಾಕುಂಭಮೇಳದ 45 ದಿನಗಳ ಕಾಲ ತಿರುಮಲೆ ತಿರುಪತಿ ದೇವಸ್ಥಾನದವರು ಪ್ರಯಾಗ್‌ರಾಜ್‌ನಲ್ಲಿ ನಮೂನ ಆಲಯವನ್ನು ಏರ್ಪಾಟು ಮಾಡಿದ್ದರು. ಹಾಗೇ ಸ್ವಾಮಿಗೆ ನಿತ್ಯಾರ್ಚನೆ, ಕಲ್ಯಾಣೋತ್ಸವಗಳನ್ನು ವೈಭವದಿಂದ ನೆರವೇರಿಸಲಾಯಿತು. ಈ ಉತ್ಸವಗಳನ್ನು ಎಸ್.ವಿ.ಬಿ.ಸಿ ಛಾನಲ್‌ನ ಮೂಲಕ ಭಕ್ತರು ವೀಕ್ಷಿಸುವ ಅವಕಾಶವನ್ನು ಕಲ್ಪಿಸಿದರು. ಮಹಾಕುಂಭಮೇಳದಲ್ಲಿ ಎಲ್ಲೆಲ್ಲಿಂದಲೋ ಜನರು ಬಂದು ಪುಣ್ಯ ಸ್ನಾನಗಳನ್ನು ಮಾಡಿ ಪ್ರತಿಯೊಬ್ಬರು ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀವೇಂಕಟೇಶ್ವರ ಸ್ವಾಮಿಯನ್ನು ದರ್ಶಿಸಿ ಪುನೀತರಾಗಿ ಆನಂದವನ್ನು ಪಡೆದರು. ಕುಂಭಮೇಳ, ಅರ್ಧಕುಂಭಮೇಳ, ಪೂರ್ಣಕುಂಭಮೇಳ, ಮಹಾಕುಂಭಮೇಳಗಳಿಗೆ ಸರ್ಕಾರವು ಯಾತ್ರಿಕರ ಸೌಕರ್ಯಾರ್ಥವಾಗಿ ಪ್ರಯಾಣ, ವೈದ್ಯರ ಸಹಾಯವನ್ನು ನಿರ್ವಹಿಸಿತು. ಆಹಾರ ಪಾನೀಯಗಳ ವಿಷಯಗಳಲ್ಲಿ ಭಕ್ತರು ಎಂತಹಾ ಕಷ್ಟಗಳನ್ನು ಎದುರಿಸದೇ ಇರುವಂತೆ ಎಲ್ಲಾ ರೀತಿಯಲ್ಲೂ ಏರ್ಪಾಟು ಮಾಡಿದ್ದರು. ದೇವನದಿಗಳು ಪ್ರವಹಿಸುವಂತಹಾ ಪುಣ್ಯಭೂಮಿಯಲ್ಲಿ ಜನಿಸಿದ ನಾವೇ ಧನ್ಯರು!

- ಡಾ. ಎಂ. ಲಲಿತಾಕುಮಾರಿ

- ಅನುವಾದ ಎಸ್. ವಾದಿರಾಜ

ಗೋವಿಂದಾ! ಗೋವಿಂದಾ!! ಗೋವಿಂದಾ!!

**ಉತ್ತರಪ್ರದೇಶದಲ್ಲಿರುವ ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭಮೇಳ ಸಂದರ್ಭವಾಗಿ 08-01-2025 ರಂದು ತಿರುಮಲೆ ಯಿಂದ ಹೊರಟ ಸ್ವಾಮಿಯವರ ಕಲ್ಯಾಣ ರಥವನ್ನು ಪ್ರಾರಂಭಿಸಿದ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್.ನಾಯುಡು ರವರು ಮತ್ತು ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯಚೌದರಿ, ಐ.ಆರ್.ಎಸ್., ರವರು. ಪ್ರಯಾಗ್‌ರಾಜ್‌ನಲ್ಲಿ 12-01-2025 ರಂದು ತಿ.ತಿ.ದೇ., ವತಿಯಿಂದ ಸ್ವಾಮಿಯವರ ನಮೂನಾ ಆಲಯವನ್ನು ನಿರ್ಮಿಸಿ ಆಲಯದಲ್ಲಿ ವೈಭವವಾಗಿ ನಡೆದ ಕೈಂಕರ್ಯಗಳು, ವಿಶೇಷಾರ್ಚನೆಗಳ ದೃಶ್ಯಮಾಲಿಕೆ.**
































**ಮಹಾಕುಂಭಮೇಳ ಸಂದರ್ಭವಾಗಿ ಉತ್ತರಪ್ರದೇಶ ಪ್ರಯಾಗ್‌ರಾಜ್‌ನಲ್ಲಿ ನಿರ್ಮಿಸಿದ ಸ್ವಾಮಿಯವರ ನಮೂನಾ ಆಲಯದಲ್ಲಿ 03-02-2025 ರಂದು ವಸಂತಪಂಚಮಿ ಸಂದರ್ಭವಾಗಿ ಸರಸ್ವತಿ ಅಲಂಕಾರದಲ್ಲಿ ಸ್ವಾಮಿಯವರು.**

**ಪ್ರಯಾಗ್‌ರಾಜ್‌ನಲ್ಲಿರುವ ದಶಾಶ್ವಮೇಥ ಘಾಟ್ ಬಳಿ 16-01-2025 ರಂದು ಶ್ರೀದೇವಿ ಭೂದೇವಿ ಸಮೇತ ಸ್ವಾಮಿಯವರಿಗೆ ವೈಭವವಾಗಿ ನಡೆದ ಸ್ನಪನ ತಿರುಮಂಜನ ಕಾರ್ಯಕ್ರಮದ ವೈಭವ ಮತ್ತು ಚಕ್ರಸ್ನಾನ ವೈಭವದ ದೃಶ್ಯಗಳು.**



**ಮಹಾಕುಂಭಮೇಳ ಸಂದರ್ಭವಾಗಿ 18-01-2025 ರಂದು ಪ್ರಯಾಗರಾಜ್‌ನಲ್ಲಿ ಸ್ವಾಮಿಯವರ ನಮೂನಾ ಆಲಯದಲ್ಲಿ ವೈಭವವಾಗಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದ ದೃಶ್ಯಮಾಲಿಕೆ.**











# ವಯಿರಮುಡಿ ಉತ್ಸವ (ಪ್ರಸಂ)

– ಡಾ॥ ಎನ್ . ಕೆ. ರಾಮಶೇಷನ್
82771 46110

**ಈ** ಪ್ರಯತ್ನ ಆನೆಯನ್ನು ಕನ್ನಡಿಯಲ್ಲಿ ಇಡುಕಿದಂತೆ ಕರ್ನಾಟಕದ ಮೇಲುಕೋಟೆ-ತಿರುನಾರಾಯಣಪುರ- ವಿಶಿಷ್ಟತೆಗೆ ಹೆಸರಾದದ್ದು-ಒಂದು ಅಭಿಮಾನ ಕ್ಷೇತ್ರ, ಜ್ಞಾನ ಮಂಟಪ ಕ್ಷೇತ್ರ,ಯದುಶೈಲ,ಯಾದವಗಿರಿ, ವೇದಾದ್ರಿ, ನಾರಾಯಣಾದ್ರಿ- ಹೀಗೆ ಕೃತಯುಗದ ಹರಹಿನಿಂದಲೂ ಮೇಲುಕೋಟೆ ಒಂದಲ್ಲೊಂದು ವಿಧದಲ್ಲಿ ಪ್ರಖ್ಯಾತಿ ಪಡೆದಿರುವ ದಿವ್ಯ ಕ್ಷೇತ್ರ-ದಕ್ಷಿಣ ಬದರಿಕಾಶ್ರಮ ಎಂದೂ ಹೆಸರಾದದ್ದು, ಈ ಎಲ್ಲ ಪರಂಪರೆ ಸಂಪ್ರದಾಯ ಇಲ್ಲಿ ದಿನವೂ ನಡೆಯುವ ಉತ್ಸವ ವಿಶೇಷಗಳು, ಎಷ್ಟು ವರ್ಣಿಸಿದರೂ ಕಡಿಮೆಯೇ, ಬೆಟ್ಟದ (ಯಾದವಾದ್ರಿ) ಮೇಲೆಕೋಟೆ-ಮೇಲುಕೋಟೆ ಎಂದೇ ಪ್ರಖ್ಯಾತ, ಸುತ್ತಲಿನ ಬೆಟ್ಟಸಾಲು ಹಸಿರು ಊರಿಗೆ ಅಂಟಿ ಕೊಂಡಂತಿರುವ ಬೆಟ್ಟದ ಕೋಡಿನ ತಪ್ಪಲಲ್ಲಿ ನೆಲಸಿರುವ ಪ್ರಹ್ಲಾದ ವರದ ಯೋಗಾ ನರಸಿಂಹ ಬೇಸಿಗೆ ಝಳ ನಿವಾರಿಸಲು ಊರಿನ ಸುತ್ತ ಇರುವ **"ಅಷ್ಟತೀರ್ಥ"** ಹೆಸರಾದ ಕೊಳಗಳು, ಊರಿನಲ್ಲೆ ರಾರಾಜಿಸುತ್ತಿರುವ ವೇದಪುಷ್ಕರಿಣಿ-ದೊಡ್ಡ ಕಲ್ಯಾಣಿ - ಊರಿನಲ್ಲಿ ಆಚಾರ್ಯ ಶ್ರೀರಾಮಾನುಜರು ಪ್ರತಿಷ್ಠಾಪಿಸಿದ ಚೆಲುವೇ ಮೂರ್ತಿವೆತ್ತ ಚೆಲುವನಾರಾಯಣ ಶ್ರೀಯತಿರಾಜ ಮಠ, ವಾನಮಾಮಲೈ ಮಠ, ಪರಕಾಲಮಠ, ಆಚಾರ್ಯ ಶ್ರೀ ಮನವಾಳಮಾಮುನಿ/ವೇದಾಂತದೇಶಿಕರ ಸನ್ನಿಧಿ, ಎತ್ತರದ ಆಂಜನೇಯ ಸ್ವಾಮಿ, ಚೆಲುವನಾರಾಯಣ ದೇವಳ, ಸಾವಿರ ಕಾಲು ಕಂಬದ ಪ್ರಾಂಗಣ, ಅವರ್ಣನೀಯ, ಅನುಪಮ ಸೌಂದರ್ಯನಿಧಿ ಶ್ರೀಚೆಲುವನಾರಾಯಣ/ತಮಿಳಿನ ಶೆಲ್ವನಾರಾಯಣ-ಶೆಲ್ವಂ ಎಂದರೆ ಐಸಿರಿ, ಲಕ್ಷ್ಮಿಗೆ ಒಡೆಯನಲ್ಲವೇ ಅವನು ಮನದನ್ನೆ ಯದುಗಿರಿ ನಾಯಕಿ ಸನ್ನಿಧಿ ಭವ್ಯವಾಗಿ ತನ್ನದೆ ಆದ ಯೌಗಿಕ ತೇಜದಿಂದ ರಾರಾಜಿಸುತ್ತಿರುವ ಶ್ರೀರಾಮಾನುಜಾಚಾರ್ಯರು-ಇತರ ಆಚಾರ್ಯರ ಮೂರ್ತಿಗಳು, ಭಕ್ತರಿಗೆ ಮಾತಾಡುವ ರಾಮಾನುಜರೆಂದೇ ಖ್ಯಾತಿ ತಮಿಳುನಾಡಿನ ಶ್ರೀರಂಗ ಪರಿಸರದಲ್ಲಿ ಉಂಟಾದ ರಾಜಕೀಯ ಪ್ರಕ್ಷುಬ್ಧತೆ, ಆಚಾರ್ಯ ರಾಮಾನುಜರು (ಕ್ರಿ.ಶ.1017-1137 -120 ವರ್ಷ ಅವರಿದ್ದುದು ಅದರಲ್ಲಿ 1096 -97 ರಿಂದ 32 ವರ್ಷ ಕನ್ನಡಿನಾಡಿನಲ್ಲೆ-ಪಾಂಡವಪುರ ಸನಿಹದ ತೊಂಡನೂರು ಇನ್ನೂ ಬೇರೆಡೆ ಇದ್ದರು) ಕರ್ನಾಟಕವನ್ನು ಪ್ರವೇಶಿಸುವಂತೆ ಮಾಡಿದ್ದು ನಮ್ಮ ಭಾಗ್ಯ. ಭಕ್ತಿ-ಭಕ್ತಿ ಪ್ರಪತ್ತಿ-ಶರಣಾಗತಿ ಸರ್ವರನ್ನೂ ಸಮಾನತೆಯಿಂದ ಪ್ರೀತಿ ಪ್ರೇಮಗಳಿಂದ ಕಾಣುವ ಆಚಾರ್ಯರಿಂದ ಅವರು ಪ್ರಸಾರ ಮಾಡಿದ ಶ್ರೀತತ್ವ-ಅಂದರೆ ಸರಳವಾಗಿ ಹೇಳುವುದಾದರೆ-ಶ್ರೀಲಕ್ಷ್ಮೀದೇವಿ ತಾಯಿ ಮೂಲಕ ಶ್ರೀನಾರಾಯಣನನ್ನು ಕಾಣುವ, ಸನಿಹ ಮಾಡಿಕೊಳ್ಳುವ ಸುಲಭ ಭಕ್ತಿ ಮಾರ್ಗ-"ಭಕ್ತಿ ಸುಲಭವೆಂದೇ ಪ್ರಸಿದ್ಧ-ರಾಮಾನುಜರ ಪ್ರಭಾವದಿಂದಾಗಿ, ಮೇಲುಕೋಟೆಯ ದಿವ್ಯ ಭವ್ಯ **"ವಯಿರ ಮುಡಿ"** ಉತ್ಸವ ಸಾವಿರಾರು ವರ್ಷದಿಂದ ಸಂಭ್ರಮ ದೊಡಗೂಡಿ ನಡೆದು ಬರುತ್ತಿದೆ.

**"ವಯಿರಮುಡಿ"** ಎಂದರೆ ತಮಿಳಿನಲ್ಲಿ **"ವಯಿರಂ"** ಪದಕ್ಕೆ ವಜ್ರವೆಂದು ಆ ಅಮೂಲ್ಯ ವಜ್ರಗಳಿಂದ ಹುದುಗಿಸಿ ಉಪಮೆಗೆ ನಿಲುಕದಂತೆ ಭವ್ಯವಾಗಿ ನಿರ್ಮಿಸಿದ **"ಮುಡಿ"**







ಕಿರೀಟ - ಆ ವಯಿರಮುಡಿಯನ್ನು ಧರಿಸಿ, ಪೂಜೆ, ಜಾತ್ರೆ, ಉತ್ಸವಗಳಲ್ಲಿ ಸಂಭ್ರಮಿಸುವ ದಿನ-ವಯಿರಮುಡಿ ಉತ್ಸವವೇ ವಿನಃ, **"ವೈರಮುಡಿ"** ಎಂದು ಅಲ್ಲ. ವೈರ ಎಂಬ ಪದಕ್ಕೆ ಅರ್ಥ ಬೇರೆ, **"ವಯಿರಂ"** ಪದದ ಶ್ರೇಷ್ಠ ಅರ್ಥವೇ ಬೇರೆ, ಆದರೆ ಅದೇನೂ ಜಾನಪದ-ಜಾನಪದದಲ್ಲಿ **"ವೈರಮುಡಿ"** ಎಂದು ಬಳಕೆಗೆ ಬಂದು ಬಿಟ್ಟಿದೆಯಲ್ಲ, ಅದು ತಪ್ಪು,ಅರ್ಥದಿಂದ **"ವಯಿರ ಮುಡಿ"** ಎನ್ನುವುದೇ ಅರ್ಥವತ್ತಾದದ್ದು ಎನ್ನಿಸುತ್ತದೆ.

## ವಯಿರಮುಡಿ ಜಾತ್ರೆ /ಉತ್ಸವ ಎಂದರೇನು?

ಅಷ್ಟ ತೀರ್ಥ-ಹಾಗೂ 13 ದಿನಗಳ ಉತ್ಸವ-ವಯಿರಮುಡಿ ಬ್ರಹ್ಮೋತ್ಸವವೇ ವಯಿರಮುಡಿ ಉತ್ಸವ-13 ದಿನ ಜರುಗುವ ಸಂಭ್ರಮ, ಈ ಉತ್ಸವ 07-04-2025 ರಂದು ಸೋಮವಾರ ಪುಷ್ಯನಕ್ಷತ್ರ, ದಶಮಿಯಂದು ಈ ಉತ್ಸವ ನಡೆಯುತ್ತದೆ.

ದೊಡ್ಡಜಾತ್ರೆ, ಸಾಂಸ್ಕೃತಿಕ ಹಬ್ಬ (ತುಣಿತೇಂಗೊಳಲು, ಮನವಾರದ ಉಂಡೆ, ಸಕ್ಕರೆ ಪೊಂಗಲ್, ವೆಳ್ ಪೊಂಗಲ್, ಸೊಗಸಾದ ಪುಳಿಯೋಗರೆ, ತಿಂಡಿಗಳ ವೈವಿಧ್ಯವೂ ಇದೆ.) ವಜ್ರದ ಕಿರೀಟ-ಎಷ್ಟು ಪ್ರಾಚೀನವಾದದ್ದು ಎಂದರೆ ಸಾಂಪ್ರದಾಯಿಕವಾಗಿ, ಕೃತಯುಗದ ಪ್ರಹ್ಲಾದ ಆತನ ಮಗ ವಿರೋಚನ ನೆಂಬಾತ-ಕಿರೀಟವನ್ನು ಒಯ್ದು,ಅದನ್ನು ಗರುಡ/ ವೈನತೇಯ ತಂದು ಶ್ರೀಮನ್ನಾರಾಯಣನಿಗೆ ಧಾರಣೆ ಮಾಡಿಸಿದ.ಹಾಗೆಯೇ ಮೇಲುಕೋಟೆ ಪರಿಸರದಲ್ಲಿ ತ್ರೇತಾಯುಗದ ಶ್ರೀರಾಮಸೀತೆ ಲಕ್ಷ್ಮಣಸ್ವಾಮಿ ಆಂಜನೇಯರು ಬಂದಿದ್ದು **"ರಾಮಪ್ರಿಯ"** ನೆಂದೂ ಚೆಲುವನಾರಾಯಣನಿಗೆ ಹೆಸರು, ಶ್ರೀಕೃಷ್ಣ ಆರಾಧಿಸಿದ್ದರಿಂದ ಯದುವಂಶದ ಯದುಶೇಖರ-ಆರಾಧ್ಯ ದೈವನಾದ, ಸೀತಾರಾಮನ ಸಂಪರ್ಕ **"ಸೀತಾರಣ್ಯ" "ಧನುಷ್ಕೋಟಿ"** ಎಲ್ಲವೂ ಈ ಹೊತ್ತೂ ದರ್ಶನೀಯ. ರಾಜಕೀಯ ಪ್ರಕ್ಷುಬ್ಧತೆ, ಮೇಲುಕೋಟೆ ಕೆಲವು ಸಮಯ ವೈಭವ ಕಳೆದುಕೊಂಡಿದ್ದದ್ದು ಕ್ರಿ.ಶ 1096/97 ರ ಶ್ರೀರಾಮಾನುಜಾಚಾರ್ಯರ ಪ್ರಭಾವದಿಂದ ಮತ್ತೆ ಹುತ್ತದಲ್ಲಿ ಅಡಗಿದ್ದ ಚೆಲುವನಾರಾಯಣನನ್ನು ಅವರು ಯೌಗಿಕದೃಷ್ಟಿಯಿಂದ ಮನಗಂಡು, ದರ್ಶಿಸಿ, ಕ್ಷೀರಾಭಿಷೇಕಗೈದು ಪ್ರತಿಷ್ಠಾಪಿಸಿ ಸೊಗಸಾದ ಭವ್ಯ ದೇವಳ ನಿರ್ಮಿಸಿದರು. 1020 ಕ್ರಿ.ಶ.ಬಹುಧಾನ್ಯ ಸಂವತ್ಸರ 1097/98 ರಲ್ಲಿ ಜೀರ್ಣೋದ್ಧಾರಗೈದರು. ಅಲ್ಲಿಂದ ಅನೂಚಾನವಾಗಿ, ಕ್ಷೇತ್ರ ಅಭಿವೃದ್ಧಿ ಹೊಂದಿದೆ.

ಇದಕ್ಕೆ ಶಾಸನಗಳ ಆಧಾರವು ಲಭ್ಯವಿದೆ. ಮೂಲ ಚೆಲುವರಾಯ ದೇವಳ ಉತ್ಸವಮೂರ್ತಿ? ಆಚಾರ್ಯರಿಗೆ ಸ್ವಪ್ನ ಮುಖೇನ ಚೆಲುವ ಹೇಳಿದ ನಾನು ದೆಹಲಿ ಬಾದಷಹನ ಅಂತಃಪುರದಲ್ಲಿ ಇದ್ದೇನೆ. ಬಂದು ಕರೆದೊಯ್ಯಿ ಆಚಾರ್ಯರ ಇಳಿ ವಯಸ್ಸಿನಲ್ಲಿ ಪ್ರಯಾಣ ಬಂದದ್ದು ಅಂತಃಪುರದಿಂದ ಸಂಪತ್ತುಮಾರ/ಶೆಲ್ವಪಿಳ್ಳೆ ಎಂದು ಹೆಸರಾದ ಮುದ್ದುಗಾರನನ್ನು ಕರೆತಂದರು-ಸುಲ್ತಾನನ ಮಗಳು ಬೀಬಿ ನಾಚ್ಚಿಯಾರ್ ಎಂದು ಹೆಸರಾದ ಆಕೆಯೂ ಜೊತೆಗೆ ಬಂದು-ಸ್ವಾಮಿಯ ಪಾದದಲ್ಲಿ ಲೀನಳಾದದ್ದು ಇತಿಹಾಸ-ಇಂದೂ ದರ್ಶನ ಲಭ್ಯ. **"ಡೆಲ್ಲಿ ಉತ್ಸವ"** ಎಂದೂ ಈಗಲೂ ನಡೆಯುತ್ತದೆ. ಜೊತೆಗೆ **"ಶೇರ್ತಿ ಸೇವೆ"** ದಂಪತಿಗಳು ಒಂದಾದ-ಮಧುರ ಕ್ಷಣ ಈ ಉತ್ಸವವೂ ಜರುಗುತ್ತದೆ.






ವರಾಹಸ್ವಾಮಿ ಹಿರಣ್ಯಾಕ್ಷನನ್ನು ಭೂದೇವಿಯನ್ನು ಎತ್ತಿ ತಂದದ್ದು ಶುಕ, ಅಂಬರೀಷ, ರುಕ್ಮಾಂಭ ಮೊದಲಾದ ಐವರು ಭಾಗವತರು ಇದ್ದದ್ದರಿಂದ **"ಪಂಚಭಾಗವತ ಕ್ಷೇತ್ರ"** ಮೇಲು ಕೋಟೆ ಎಂಬ ಕೊಳಗಳನ್ನು ಆಚಾರ್ಯರು ನಿರ್ಮಿಸಿದ್ದು ಅವರಿಗೆ ದಿನನಿತ್ಯ ಬಳಸುವ ಶ್ವೇತಮೃತ್ತಿಕೆ ತಿರುಮಣ್ ದೊರೆ ತದ್ದು ದೇವಳದೆದುರು ಬದರಿವೃಕ್ಷ ಹೀಗೆ ವೈರಮುಡಿ ಅಲ್ಲ ವಯಿರಮುಡಿ ಉತ್ಸವ ಜಾತ್ರೆ-ಐತಿಹಾಸಿಕ,

ಸಾಂಸ್ಕೃತಿಕ ಪರಂಪರೆಯೊಡಗೂಡಿ ಜರುಗುವ ಸಂಭ್ರಮದ ಉತ್ಸವ. ಇದನ್ನು ಬರವಣಿಗೆಯಲ್ಲಿ ಹಿಡಿದಿಡು ವುದೇ ಬಹು ಕಷ್ಟ. **"ಯತೋ ವಾಚೋ ನಿವರ್ತಂತೇ"** ಮಾತಲ್ಲಿ ಬಣ್ಣಿಸುವುದು ದುಸ್ತರವೇ.

ನಿರ್ದಿಷ್ಟ ಮುಹೂರ್ತದಲ್ಲಿ ವಯಿರ ಮುಡಿ-ವಜ್ರಕಿರೀಟ ವನ್ನು ಧರಿಸುವ (ಕಿರೀಟವನ್ನು ಮಂಡ್ಯ ಜಿಲ್ಲಾ ತಿಜೋರಿ ಯಿಂದ ಪೊಲೀಸು ಭದ್ರತೆಯಲ್ಲಿ ತರುತ್ತಾರೆ.

ಅದೇ ಒಂದು ಯಾತ್ರೆ) ಕ್ಷಣ, ಇಡೀ ರಾತ್ರಿ ಊರು ಉತ್ಸವದಲ್ಲಿ ಸಂಭ್ರಮಿಸುತ್ತದೆ. ಲಕ್ಷಾಂತರ ಭಕ್ತರ ಸಂಗಮ, ಈ ಕ್ಷಣದಲ್ಲಿ ಎಲ್ಲರೂ ಹಾಡುವುದು.

ಶ್ರೀ ರಂಗಮಂಗಳ ಮಣಿಂ ಕರುಣಾನಿವಾಸಮ್
ಶ್ರೀ ವೇಂಕಟಾದ್ರಿ ಶಿಖರಾಲಯ ಕಾಳಮೇಘಂ
ಶ್ರೀ ಹಸ್ತಿಶೈಲ ಶಿಖರೋಜ್ವಲ ಪಾರಿಜಾತಂ
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಮ್"

(ಇದಲ್ಲದೆ ಅದೆಷ್ಟೋ ಜನಪದಗೀತೆ ಲಾವಣಿ ಇದೆ) ಇಲ್ಲಿ ನಾಲ್ಕು ಶ್ರೀವೈಷ್ಣವ ಕ್ಷೇತ್ರಗಳ ಸ್ಮರಣೆ ಶ್ರೀರಂಗ, ತಿರುಪತಿ (ವೇಂಕಟಾದ್ರಿ),ಕಾಂಚೀಪುರ(ಹಸ್ತಿಶೈಲ)ಹಾಗೂ ಕನ್ನಡ ನಾಡಿನ ಯದುಶೈಲ ಅಂದರೆ ಮೇಲುಕೋಟೆ,ದಿಟಕ್ಕೂ ಚೆಲುವನಾರಾಯಣನು ಯದುಶೈಲದೇವನೇ ಆಗಿದ್ದಾನೆ.

ಇಲ್ಲಿದ್ದು ಶ್ರೀರಂಗಕ್ಕೆ ಮರಳಿದ ರಾಮಾನುಜರು **"ಯತಿ ಶೈಲದೀಪ"**ಆಗಿರೂ ಉಳಿದಿದ್ದಾರೆ. ಇದರಿಂದ ಭಕ್ತಿ-ಭಾಗವತ -ಭಕ್ತಿ ಸುಲಭನಾದ ಶ್ರೀಮನ್ನಾರಾಯಣ ಇಡೀ ವಿಶ್ವವನ್ನು ಸದಾ ಶುಭ, ಭದ್ರ-ಮಂಗಲಕರವಾಗಿ ಇರಿಸಲೆಂದು ಪ್ರಾರ್ಥನೆ.

ಇದಲ್ಲದೆ ದತ್ತಾತ್ರೇಯರು ಕಲ್ಯಾಣಿ ಪರಿಸರದಲ್ಲಿ ಚತು ರ್ವೇದ ಪಾರಾಯಣ ಮಾಡಿದ್ದು-ಪರಿಧಾನಶಿಲೆ-ಎಂದು ಕಲ್ಯಾಣಿಯ ಪರಿಸರದಲ್ಲಿ ತೋರುತ್ತಾರೆ. ಜ್ಞಾನಾಶ್ವತ್ಥ ಕಲ್ಯಾಣಿಗೆ ಪಶ್ಚಿಮದಲ್ಲಿದೆ, ಗರುಡ ಶ್ವೇತಮೃತ್ತಿಕೆ ಹೊಂದದ್ದ ರಿಂದ **"ತಾರ್ಕ್ಷ್ಯ"** ಕ್ಷೇತ್ರ ಎಂದು ಕರೆದಿದ್ದಾರೆ.



**ವೃಕ್ಷೋ ರಕ್ಷತಿ ರಕ್ಷಿತಃ**
**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

ಧಾರಾವಾಹಿ

# ಶ್ರೀ ವೇಂಕಟಾಚಲ ಮಹಾತ್ಮ್ಯ

**ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್**

**ಅನುವಾದ – ಶ್ರೀಮತಿ. ಎನ್. ಪಾರ್ವತಿ**


**ಕಳೆದ ಸಂಚಿಕೆಯಿಂದ**

ಆ ಪ್ರದೇಶದ ಜನರು ಸಂತೋಷದಿಂದ ರಾಜ ಸುದರ್ಶನನ ಬಳಿಗೆ ಬಂದರು.

ಚಕ್ರರಾಜ! ಪಾಪಿಗಳು ಮತ್ತು ಕಳ್ಳರು ನಿರ್ನಾಮ ಮಾಡಿದ್ದೀರಿ. ಸಂತರನ್ನು ಸಂರಕ್ಷಿಸಿದ್ದೀರಿ. ನಿಮ್ಮ ಶೌರ್ಯವನ್ನು ಹತ್ತು ಸಾವಿರ ನಾಲಿಗೆಯೂ ವರ್ಣಿಸಲಾಗದು. ಆದರೆ ನಮ್ಮದೊಂದು ವಿನಂತಿ. ಶೇಷಾದ್ರಿಯ ಪಶ್ಚಿಮೋತ್ತರ ದಿಕ್ಕಿನಲ್ಲಿರುವ ಕ್ರೂರ ಕಳ್ಳರನ್ನೂ ದಯಮಾಡಿ ಸಂಹರಿಸಿ. ಆಗ ಮಾತ್ರ ಅರಣ್ಯವಾಸಿಗಳ ಸಂಕಷ್ಟಕ್ಕೆ ಮುಕ್ತಿ ಸಿಗುತ್ತದೆ ಎಂದರು.

ವಿಮಲಾತ್ಮ! ಈ ಭೂಭಾಗಕ್ಕೆ ಪಾಲಕನಿಲ್ಲ. ಅದಕ್ಕೇ ಕಳ್ಳರು ಅಟ್ಟಹಾಸ ಮೆರೆಯುತ್ತಿದ್ದಾರೆ. ಆ ಕಾರಣದಿಂದ ಸಾಧುಗಳಿಗೆ ತುಂಬಾ ಸಂಕಷ್ಟಗಳು ಒದಗಿವೆ.

ನಾವು ಬ್ರಾಹ್ಮಣರು, ನಮ್ಮ ಪಾಲಿಗೆ ನೀವೇ ದೇವರು. ಪಾಪಿಗಳೆಲ್ಲರನ್ನೂ ಕೊಂದು ನಮ್ಮೆಲ್ಲರನ್ನೂ ರಕ್ಷಿಸಬಲ್ಲ ಸಮರ್ಥ ಆಡಳಿತಗಾರನನ್ನು ನೇಮಿಸಿ ಎಂದರು.



ಅವರ ಪ್ರಾರ್ಥನೆಯನ್ನು ಆಲಿಸಿದ ರಾಜ ಸುದರ್ಶನ ಮಹಾರಾಜನು ಒಬ್ಬನನ್ನು ಆ ಪ್ರದೇಶದ ಅಧಿಪತಿಯಾಗಿ ಆಯ್ಕೆ ಮಾಡಿ ನೇಮಿಸಿ ಕರ್ತವ್ಯಗಳನ್ನು ಬೋಧಿಸಿದನು. ಧರ್ಮದಿಂದ ಆಡಳಿತ ನಡೆಸುವಂತೆ ಸಲಹೆ ನೀಡಿದನು. ನಂತರ ವಿಪ್ರರೊಂದಿಗೆ ಸರ್ವಜನ ಕಲ್ಯಾಣ ಚಿಂತಕರೇ! ನೀವು ಎಂದಿನಂತೆ ಯಜ್ಞಗಳನ್ನು ಮುಂದುವರಿಸಿ ನಿರ್ಭಯವಾಗಿ **"ಬಾಳಿ"** ಎಂದು ಸುದರ್ಶನನ್ನು ಬೀಳ್ಕೊಟ್ಟರು.

ಸುದರ್ಶನರಾಜನು ಚೋರರರನ್ನು ಸಂಹರಿಸಲು ಗಂಧರ್ವ ಬಲದೊಂದಿಗೆ ಪಶ್ಚಿಮಕ್ಕೆ ತೆರಳಿದನು. ಯುದ್ಧಭೇರಿ ಮೊಳಗಿಸುತ್ತಾ ಕಾಡಿನಲ್ಲಿ ಅಡಗಿರುವ ಕಳ್ಳರನ್ನು ವಧಿಸುತ್ತಾ ಸಾಗಿದರು. ಆಗ ಕಳ್ಳರು ತಮ್ಮ ಸ್ವಾಮಿಯಾದ ವನಕರ್ತನ ಬಳಿ ಓಡಿದರು. ಅಧಿಪಾ! ನಮ್ಮ ಮನವಿ. ನಮ್ಮ ಪ್ರಾಂತಕ್ಕೆ ಯಾರೋ ತಮ್ಮ ಸೈನ್ಯದೊಂದಿಗೆ ಬಂದಿದ್ದಾರೆ. ಅವರು ಯಾರೆಂದು ನಮಗೆ ತಿಳಿದಿಲ್ಲ. ಆದರೆ ಅವರು ಪರಾಕ್ರಮಿಗಳಂತೆ ಕಾಣುತ್ತಾರೆ. ಮೇಲಾಗಿ ಯುದ್ಧ ರಹಸ್ಯಗಳನ್ನು ಚೆನ್ನಾಗಿ ತಿಳಿದಿದ್ದಾರೆ. ಆ ಸೈನ್ಯವು ಕಾಡಿನಲ್ಲಿ ಅಡಗಿರುವ ನಮ್ಮ ಸೈನ್ಯಕ್ಕೆ ಮಣ್ಣು ಮುಕ್ಕಿಸಿದೆ. ಅವರ ಆಕ್ರಮಣವನ್ನು ನಮ್ಮ ಚೋರವೀರರು ಎದುರಿಸಲು ಸಾಧ್ಯವಾಗುತ್ತಿಲ್ಲ.

ರಾಜ! ನೀವೇ ಅವರನ್ನು ಎದುರಿಸಲು ಸಮರ್ಥರು. ನಿಮ್ಮ ತಂದೆಯು ಶಿವನನ್ನು ಮೆಚ್ಚಿಸಿ ಅಮರತ್ವವನ್ನು ಪಡೆದಿದ್ದಾರೆ. ತನ್ನ ಸೈನ್ಯದೊಂದಿಗೆ ಬೆಟ್ಟದ ಕೆಳಗಿನ ಸಂತರನ್ನು ಹಿಂಸಿಸಿದವರು. ಅಷ್ಟೇ ಅಲ್ಲದೇ ದಾರಿಹೋಕರ ವಿರುದ್ಧ ತಮ್ಮ ಕೈಚಳಕ ತೋರಿಸಿ, ಅವರ ಬಳಿ ಹಣ ದೋಚಿರುವವರು. ಅವರ ಶಕ್ತಿಯು ಸಾಮಾನ್ಯವಲ್ಲ. ಕಾಲ ಕಿಂಕರರಂತೆ ಕಿರಾತಕ ಬಲವುಳ್ಳವರು. ನೀವು ರಿಪುಘ್ನನಂತೆ ಎಂದು ಬಿನ್ನವಿಸಿದರು. ದರೋಡೆಕೋರರ ಮಾತನ್ನು ಆಲಿಸಿದ ವನ ಕರ್ತನು ತಮ್ಮ ಕೋಟೆಯೆಡೆಗೆ ಬರುತ್ತಿರುವ ಸುದರ್ಶನನ ಸೈನ್ಯವನ್ನು



ಸಂಪೂರ್ಣವಾಗಿ ನಾಶಮಾಡಲೆಂದು ಯುದ್ಧಕ್ಕೆ ಅಗತ್ಯವಾದ ಅನೇಕ ಆಯುಧಗಳೊಂದಿಗೆ ತಕ್ಷಣವೇ ತೆರಳಿದನು. ಸುದರ್ಶನ ರಾಜನ ಸೈನ್ಯವನ್ನು ಸರ್ವನಾಶ ಮಾಡಲೆಂದು ಶಕ್ತಿಯುಕ್ತಿಗಳೊಂದಿಗೆ ಹೋರಾಡಿದನು.

ಆದಾಗ್ಯೂ, ಚಕ್ರರಾಜಯೋಧರು ವನಕರ್ತನ ಸೈನ್ಯ ವನ್ನು ಸುನಾಯಾಸವಾಗಿ ಸೋಲಿಸಿದರು. ಆ ಸೈನ್ಯದ ಬಹು ಪಾಲು ನಾಶವಾಯಿತು. ಸಮರಭೂಮಿಯಲ್ಲಿ ರಕ್ತದ ಕೋಡಿ ಹರಿಯಿತು. ಈ ದೃಶ್ಯವನ್ನು ನೋಡಿದ ವನಕರ್ತನು. ಬಾಲ ಮೆಟ್ಟಿದ ಜಿಂಕೆಯಂತೆ ಕ್ರೋಧದಿಂದ ತನ್ನ ಸೇನಾಪತಿ ಜ್ವಾಲಾ ಪಾತನನ್ನು ನೋಡುತ್ತಾ-

“ಸೈನ್ಯಾಧ್ಯಕ್ಷ! ನೀನು ನೋಡಿದೆಯಾ! ಎಲ್ಲಿಂದಲೋ ಬಂದವನೊಬ್ಬ ನಮ್ಮ ಅಸಹಾಯಕ ಶೂರಸೇನೆಯನ್ನು ನಾಶ ಪಡಿಸಿದ್ದಾನೆ. ಅವರನ್ನು ನಿರ್ಲಕ್ಷಿಸುವುದು ಸರಿಯಲ್ಲ. ಸಕಲಾ ಯುಧಗಳಿಂದ ನಿನ್ನ ಸರ್ವಶಕ್ತಿಯಿಂದ ಹೋರಾಡಿ ಶತ್ರುಸೈನ್ಯ ವನ್ನು ನಾಶಮಾಡು. ಇದು ನನ್ನ ಆಜ್ಞೆ ” ಎಂದನು.

ರಾಜನ ಆಜ್ಞೆಯಂತೆ ಜ್ವಾಲಾಪತನು ಸಮರಕ್ಕೆ ಹೊರ ಟನು. ವಿಚಿತ್ರ ಆಯುಧಗಳನ್ನು ಸಿದ್ಧಪಡಿಸಿಕೊಂಡನು. ಒಂಟೆ ಗಳಿಂದ ಎಳೆಯಲ್ಪಟ್ಟ ರಥವನ್ನು ಹತ್ತಿ ಕೋಪದಿಂದ ಹೊರ ಟನು. ಚಕ್ರರಾಜನ ಸೈನ್ಯವನ್ನು ಸೋಲಿಸಿದನು. ಈ ದೃಶ್ಯ ವನ್ನು ನೋಡುತ್ತಿದ್ದ ಚಕ್ರರಾಜನು. “ಬಾಡಬಾಮುಖಿ, ಜ್ವಾಲಾ ಪತನ ವೀರವೇಶವನ್ನು ನೋಡುತ್ತಿರುವೆ ಅಲ್ಲವಾ, ನೀನು ವೀರ ಯೋಧನು ತಕ್ಷಣವೇ ಹೊರಡು. ಕಿರಾತವಿಭುವಿನ ಮೇಲೆ ದಂಡೆತ್ತು, ಆತನನ್ನು ಸೆರೆಹಿಡಿ. ಇನ್ನೊಂದು ವಿಷಯ- ನನ್ನಂತ ಹವನು ಕಿರಾತ ಸೇನೆಯೊಂದಿಗೆ ಹೋರಾಡಬೇಕೆಂದು ಹಿಂಜರಿಯಬೇಡ. ಅವರು ನಮಗೆ ಸಮಾನರಾದ ವೀರರಲ್ಲ” ಎಂದು ನನಗೆ ತಿಳಿದಿದೆ. ಆದರೆ ಅವರು ಸಾಮಾನ್ಯರಲ್ಲ, ಪಾಪಾತ್ಮರು, ಅವರನ್ನು ಕೊಲ್ಲುವುದೇನೂ ತಪ್ಪಲ್ಲ ಎಂದು ಕರ್ತವ್ಯ ಬೋಧನೆ ಮಾಡಿದನು.

ಚಕ್ರವರ್ತಿಯ ಅನುಮತಿ ಪಡೆದು ಬಡಬಾಮುಖನು ಕಿರಾತನ ಸೈನ್ಯದ ಸಂಹಾರಕ್ಕೆ ವ್ಯೂಹವನ್ನು ರಚಿಸಿಕೊಂಡು ಜ್ವಾಲಾಪತನ ವಿರುದ್ಧ ಸಾಹಸದಿಂದ ಹೋರಾಡಿದನು. ಮೊದಲು ಜ್ವಾಲಾಪತನ ರಥವನ್ನು ತುಂಡರಿಸಿದನು. ವಿಷ್ಣು ಚಕ್ರವೆಂಬ ಚಕ್ರಾಯುಧವನ್ನು ಬಳಸಿ ಜ್ವಾಲಾಪತನ ಶಿರವನ್ನು ನಾಶಪಡಿಸಿದನು. ಜ್ವಾಲಾಪತನ ದೇಹವು ನೆಲಕ್ಕೆ ಬಿದ್ದಿತು.

### ಸುದರ್ಶನರಾಜನು ಸೇನಾಧಿಪತಿಯನ್ನು ಶ್ಲಾಘಿಸಿದನು

ಚೋರರನ್ನು, ಚೋರರಾಜನನ್ನು ಧ್ವಂಸ ಮಾಡುವುದ ರೊಂದಿಗೆ ತನ್ನ ಕೆಲಸವಾಯಿತು ಎಂದು ಚಕ್ರರಾಜ ಹಿಂದಿ ರುಗಲಿಲ್ಲ. ಶೇಷಾಚಲಕ್ಕೆ ಬರುವ ಯಾತ್ರಾರ್ಥಿಗಳು ಯಾವುದೇ ಶ್ರಮವಿಲ್ಲದೆ ಗುಂಪು ಗುಂಪಾಗಿ ಬಂದು ನಿಸರ್ಗದ ಸೊಬಗನ್ನು ಸವಿಯುವಂತೆ ಅರಣ್ಯದಲ್ಲಿ ಉತ್ತಮ ಮಾರ್ಗವನ್ನು ನಿರ್ಮಿಸಿ ದನು. ಅಲ್ಲದೇ, ಯಾತ್ರಾರ್ಥಿಗಳ ಪ್ರಯಾಣಕ್ಕೆ ಅನುಕೂಲ ವಾಗುವಂತೆ ಯಾತ್ರಿಕರಿಗೆ ಆಶ್ರಯತಾಣಗಳನ್ನು ಒದಗಿಸಿ ದನು. ಈ ವ್ಯವಸ್ಥೆಯನ್ನು ಸಮರ್ಪಕವಾಗಿ ಮುಂದುವರೆಸಿ ಕೊಂಡು ಹೋಗಲು ಒಬ್ಬ ರಾಜನನ್ನು ಸಹ ನೇಮಿಸಿದನು. ಧರ್ಮಪರಿಪಾಲನೆಯೇ ನಿನ್ನ ಕರ್ತವ್ಯ ಎಂದು ಅರಸನಿಗೆ ಹಿತೋಪದೇಶ ಮಾಡಿದನು.

ಅಷ್ಟಕ್ಕೇ ಸುದರ್ಶನರಾಜನ ಕರ್ತವ್ಯ ಮುಗಿಯಲಿಲ್ಲ. ವಾಯುವ್ಯ ದಿಕ್ಕಿನೆಡೆಗೆ ಹೆಜ್ಜೆ ಹಾಕಿದನು. ಅಲ್ಲಿನ ಕಳ್ಳರನ್ನು ನಿರ್ಮೂಲನೆ ಮಾಡಿದನು. ನಂತರ ಸೈನ್ಯದೊಂದಿಗೆ ಉತ್ತ ರಕ್ಕೆ ತೆರಳಿದನು. ಇದುವರೆಗೆ ವಶಪಡಿಸಿಕೊಂಡ ದಿಕ್ಕುಗಳಲ್ಲಿ ರುವಂತೆ ಉತ್ತರದಲ್ಲಿರಲಿಲ್ಲ. ಕಾಗೆಗಳು ಸಹ ನುಗ್ಗದ ಕಾಡ ಡವಿ. ಇರುವೆಗಳು ಸಹ ಬಾರದ ದಟ್ಟಡವಿ. ಅಂತಹ ಸ್ಥಳಗಳಲ್ಲಿ ಚಕ್ರರಾಜನು ಧೈರ್ಯದಿಂದ ಎರಡನೇ ಮಾರ್ತಾಂಡನಾಗಿ ಪ್ರವೇಶಿಸಿದನು.

ತಮ್ಮ ಪ್ರದೇಶವನ್ನು ಪ್ರವೇಶಿಸಿದ ಸೈನ್ಯವನ್ನು, ಸೂರ್ಯನ ತೇಜಸ್ಸುಳ್ಳ ಸುದರ್ಶನ ರಾಜನನ್ನು ನೋಡಿದ ರಾಕ್ಷಸರು ಭಯಭೀತರಾದರು. ಅವರು ತಮಗೆ,ತಮ್ಮ ಪ್ರದೇ ಶಕ್ಕೆ(ನಾಗರಿಕರಿಗೆ, ತಮ್ಮ ರಾಜರಿಗೆ) ಏನೋ ಅಪಾಯ ಬರ ಹುದೆಂದು ತಿಳಿದ ತಕ್ಷಣ ತಮ್ಮ ಭೇರುಂಡ ರಾಜನ ಬಳಿಗೆ ಹೋಗಿ,

ಚಂಡಪ್ರತಾಪ! ಭೇರುಂಡಪ್ರಭುಸ್ವಾಮಿ! ಒಬ್ಬ ಪರಾ ಕ್ರಮಿ ಸೈನ್ಯದೊಂದಿಗೆ ನಮ್ಮ ಪ್ರದೇಶದಲ್ಲಿ ಪ್ರವೇಶಿಸಿದ್ದಾನೆ. ಅವನು ಸಾಮಾನ್ಯನಂತೆ ಕಾಣುತ್ತಿಲ್ಲ. ಕಾಲಾಗ್ನಿ ರುದ್ರನಂತೆ ಕಾಣಿಸುತ್ತಿದ್ದಾನೆ. ಅಲ್ಲದೇ ಸಹಸ್ರ ಬಾಹುಗಳುಳ್ಳ ಕೆಂಪು ವಸ್ತ್ರ ಧಾರಿಯಾಗಿ ಹಾರ ಕಿರೀಟಕೇಯೂರಾದಿಗಳನ್ನು ಧರಿಸಿರು ವವನು, ಭವ್ಯವಾದ ರಥವನ್ನು ಅಲಂಕರಿಸಿದವನು ನೋಡಿ ನಮಗೆ ಭಯವಾಗುತ್ತಿದೆ. ನಿಮ್ಮನ್ನು ಬಿನ್ನವಿಸಲು ಬಂದಿದ್ದೇವೆ ಎಂದರು.

**- ಮುಂದುವರೆಯುತ್ತದೆ.**





# ನೈಷದ ಸಾಮ್ರಾಜ್ಞಿ

-ಡಾ॥ ವಾಣಿಶ್ರೀ ಬಿ. ಎಂ
94803 22475

ವಿದರ್ಭ ದೇಶದಲ್ಲಿ ಭೀಮನೆಂಬ ರಾಜನು ರಾಜ್ಯ ವಾಳುತ್ತಿದ್ದನು. ಮಹಾ ಪರಾಕ್ರಮಿಯಾಗಿ ಸರ್ವಗುಣ ಸಂಪನ್ನ ನಾಗಿ,ಪ್ರಜೆಗಳ ಪ್ರೀತಿಪಾತ್ರನಾಗಿದ್ದನು. ಆದರೆ ಅವನಿಗೆ ಮಕ್ಕಳಿ ರಲಿಲ್ಲ. ಅವನ ತಪಃಪ್ರಭಾವದಿಂದ ಎಂಬಂತೆ ದಮನ ಮಹರ್ಷಿಗಳು ಭೀಮರಾಜನ ಅರಮನೆಗೆ ಬಂದರು. ಪತ್ನೀ ಸಹಿತನಾಗಿ ರಾಜನು ಬಂದ ಮಹರ್ಷಿಗಳಿಗೆ ಅರ್ಘ್ಯ ಪಾದ್ಯಾ ದಿಗಳಿಂದ ಸತ್ಕರಿಸಿ, ಆದರ ಪೂರ್ವಕವಾಗಿ ಗೌರವಿಸಿದನು. ಸುಪ್ರೀತರಾದ ಮಹರ್ಷಿಗಳು ತ್ರಿಲೋಕ ಸುಂದರಿಯಾದ ಕನ್ಯಾರತ್ನವನ್ನು ಮತ್ತು ಮೂರು ಗಂಡು ಮಕ್ಕಳನ್ನು ಪಡೆಯು ವಂತೆ ಅನುಗ್ರಹಿಸಿದರು.

ಮಹಾತ್ಮರ ಕೃಪಾಶೀರ್ವಾದದಂತೆ ಅನುಪಮ ಸೌಂದರ್ಯವುಳ್ಳ ಒಂದು ಹೆಣ್ಣು ಮಗು,ತೇಜಸ್ವಿಗಳಾದ, ರಾಜ ಲಕ್ಷಣ ಸಂಪನ್ನರಾದ ಮೂರು ಗಂಡು ಮಕ್ಕಳು ಅನುಕ್ರಮ ವಾಗಿ ಜನಿಸಿದರು. ಮಹರ್ಷಿ ದಮನರಿಗೆ ಕೃತಜ್ಞತೆ ವ್ಯಕ್ತ ಪಡಿಸಲು ಅರಸನು ಮಕ್ಕಳಿಗೆ ದಮಯಂತಿ, ದಮ, ದಾಂತ, ದಮನ ಎಂದು ನಾಮಕರಣ ಮಾಡಿದನು.

ದಮಯಂತಿಯು ರೂಪದಲ್ಲಿ, ತೇಜಸ್ಸಿನಲ್ಲಿ, ಯಶಸ್ಸಿ ನಲ್ಲಿ,ಕಾಂತಿಯಲ್ಲಿ,ಸೌಭಾಗ್ಯದಲ್ಲಿ ಅನನ್ಯ ಸಾಧಾರಣೀ ಎಂಬ ಕೀರ್ತಿಯನ್ನು ಪಡೆದಳು. ನೂರಾರು ಮಂದಿ ಅಲಂಕೃತರಾದ ದಾಸಿಯರು ಸ್ವರ್ಗದಲ್ಲಿ ಶಚೀದೇವಿಯನ್ನು ಸೇವಿಸುವಂತೆ ದಮಯಂತಿಯನ್ನು ಸೇವಿಸುತ್ತಿದ್ದರು. ರಾಜ ಯೋಗ್ಯವಾದ ಅಲಂಕಾರದಲ್ಲಿ ಮಿಂಚಿನಂತೆ ಪ್ರಕಾಶಿಸುತ್ತಿದ್ದಳು. ಅವಳ ರೂಪವು ಲಕ್ಷ್ಮಿಗೆ ಅನುರೂಪವಾಗಿದ್ದಿತು. ವಿಶಾಲಾಕ್ಷಿಯಾದ ದಮಯಂತಿಯ ದರ್ಶನ ಮಾತ್ರದಿಂದ ದೇವತೆಗಳೂ ಪರವಶ ರಾಗುತ್ತಿದ್ದರು.

ಅದೇ ಕಾಲದಲ್ಲಿ ನಿಷಧ ದೇಶದಲ್ಲಿ ವೀರಸೇನ ಮಹಾ ರಾಜನ ಮಗ ನಲ ಪರಾಕ್ರಮಿಯೂ, ಜಿತೇಂದ್ರಿಯನೂ, ಸಕಲಗುಣ ಸಂಪನ್ನನೂ, ಇಂದ್ರನಂತೆ, ಅನೇಕ ರಾಜರಿಗೆ ರಾಜನಾಗಿದ್ದನು. ಬ್ರಹ್ಮನಿಷ್ಠನಾಗಿ ವೇದಾಧ್ಯಯನ ಸಂಪನ್ನ ನಾಗಿದ್ದನು. ಅತ್ಯಂತ ಸುಂದರನಾಗಿ ಧನುರ್ಧಾರಿಗಳಲ್ಲಿ ಶ್ರೇಷ್ಠ ನಾಗಿದ್ದನು. ಸೂರ್ಯನ ತೇಜಸ್ಸಿಗೆ ಸಮಾನವಾದ ಈತ ಅಶ್ವ ಹೃದಯ ವಿದ್ಯೆಯಲ್ಲಿ ನಿಷ್ಣಾತನಾಗಿದ್ದನು. ಪಗಡೆಯಾಟ ಹೆಚ್ಚು ಪ್ರಿಯವಾಗಿತ್ತು. ಪ್ರಜೆಗಳನ್ನು ಮಕ್ಕಳಂತೆ ಪಾಲಿಸು ತ್ತಿದ್ದನು.


ನಲ ದಮಯಂತಿಯರ ಅನುಪಮ ಸೌಂದರ್ಯ ಲೋಕ ವಿಖ್ಯಾತವಾಯಿತು. ರಾಜಹಂಸಗಳ ದೌತ್ಯದಿಂದ ಅವ ರಿಬ್ಬರಿಗೂ ಪರಸ್ಪರ ಪ್ರೇಮ ಉಂಟಾಯಿತು. ರಾಜ ಹಂಸವು ಅವರಿಬ್ಬರ ನಡುವೆ ಪರಸ್ಪರರ ಗುಣಗಾನ ಮಾಡಿತು. ನಲನಿಗೆ ದಮಯಂತಿಯ ಹಾಗೂ ದಮಯಂತಿಗೆ ನಲನ ಚಿಂತೆ ಆರಂಭವಾಯಿತು. ನಲನ ಚಿಂತೆಯಲ್ಲಿ ದಮಯಂತಿ ಅನ್ನಾಹಾರಗಳ ಪರಿವೆಯಿಲ್ಲದೆ ಕೃಶಳಾದಳು. ಸಖಿಯರಿಂದ ಈ ವಿಚಾರ ತಿಳಿದ ಭೀಮರಾಜನು ಮಗಳ ಮನಸ್ಸನ್ನರಿತು ರಾಜಪದ್ಧತಿಯಂತೆ ಸ್ವಯಂವರವನ್ನು ಏರ್ಪಡಿಸಿದನು. ಈ ವಾರ್ತೆ ಕೇಳಿದೊಡನೆ ನೂರಾರು ರಾಜರು ವಿದರ್ಭಕ್ಕೆ ಬಂದು ಸೇರಿ,ಭೀಮರಾಜನಿಂದ ಸತ್ಕೃತರಾಗಿ ರಾಜಭವನದಲ್ಲಿ ತಂಗಿ ದರು. ಅದೇ ಸಮಯಕ್ಕೆ ನಲನು ವಿದರ್ಭಕ್ಕೆ ಹೊರಟನು. ನಾರದರಿಂದ ದಮಯಂತಿಯ ಸ್ವಯಂವರದ ವಿಚಾರ ತಿಳಿದ ಅಗ್ನಿ, ವರುಣ, ವಾಯು, ಹಾಗೂ ಇಂದ್ರನು ಅವಳನ್ನು ವರಿ ಸುವ ದೃಷ್ಟಿಯಿಂದ ಭೂಲೋಕಕ್ಕೆ ಹೊರಟರು. ಮಾರ್ಗ ಮಧ್ಯೆ ಮನ್ಮಥಾಕಾರನಾದ ನಲನನ್ನು ಸಂಧಿಸಿದರು. ನಲ ನನ್ನು ದೂತನಾಗಿ ದಮಯಂತಿಯ ಬಳಿಗೆ ಕಳುಹಿಸಿದರು. ನಲನು ದಮಯಂತಿಗೆ ದೇವತೆಗಳ ಮನೋಭಿಲಾಷೆ ತಿಳಿಸಿ ದಾಗ ದಮಯಂತಿ ಅದನ್ನು ಒಪ್ಪದೆ ನಲನನ್ನೇ ತಾನು ವರಿಸು ವುದಾಗಿ ಹೇಳಿದಳು.

ಮಾರನೆಯ ದಿನ ಸ್ವಯಂವರ ಮಂಟಪದಲ್ಲಿ ನಲನ ರೂಪದಲ್ಲಿ ನಿಂತ ದೇವತೆಗಳನ್ನು ಕಂಡು ದಮಯಂತಿ

ಭ್ರಾಂತಳಾದಳು. ಐದು ಮಂದಿ ನಲರಲ್ಲಿ ನಿಜವಾದ ನಿಷಧಾಧಿಪ ಯಾರೆಂದು ತಿಳಿಯದೆ ಕಂಗಾಲಾದಳು. ನಂತರ ದೇವತೆಗಳನ್ನು ಪ್ರಾರ್ಥಿಸಿದಳು. ಅವಳ ಪ್ರಾರ್ಥನೆಗೆ ಒಲಿದ ದೇವತೆಗಳು ತಮ್ಮ ನಿಜರೂಪದಿಂದ ಕಾಣಿಸಿಕೊಂಡರು. ಆಗ ದಮಯಂತಿ ನಿಜವಾದ ನಲನನ್ನೇವರಿಸಿದಳು. ನಲನಿಗೆ ಉಂಟಾದ ಆನಂದಕ್ಕೆ ಪಾರವಿಲ್ಲದಾಯಿತು. ದೇವೆತಗಳು ಈ ದಂಪತಿಗಳನ್ನು ಹರಸಿ ನಲನಿಗೆ ವರಗಳನ್ನಿತ್ತು ಮರಳಿದರು. ಅವರಿಗೆ ಇಂದ್ರಸೇನ, ಇಂದ್ರಸೇನ ಎಂಬ ಇಬ್ಬರು ಮಕ್ಕಳು ಜನಿಸಿದರು. ಮಹಾತ್ಮನಾದ ನಲ ಚಕ್ರವರ್ತಿಯು ಕಲಿ ಪ್ರಭಾವದಿಂದ ತನ್ನ ದಾಯಾದಿ ಪುಷ್ಕರನೊಡನೆ ಜೂಜಾಡಿ ಸಕಲ ರಾಜ್ಯ. ಕೋಶಾದಿಗಳನ್ನು ಸರ್ವಸ್ವವನ್ನೂ ಕಳೆದುಕೊಂಡನು. ಧರ್ಮಿಷ್ಠನಾದ ನಲನ ಅರಸಿಯಾದ ದಮಯಂತಿಯು ಆಗಲೂ ಪತಿಯ ಅನುವರ್ತಿನಿಯಾಗಿದ್ದಳು. ನಲನು ನಿನ್ನ ತವರಿಗೆ ಹೋಗು ಎಂದಾಗ,

ನ ಚ ಭಾರ್ಯಾಸಮಂ ಕಿಸಿದ್ವಿದ್ಯತೇ ಭಿಷಜಾಂ ಮತಮ್।
ಔಷಧಂ ಸರ್ವದುಃಖೇಷು ಸ್ತಯಮೇತದ್ಬ್ರವೀಮಿ ತೇ ॥

ಪತಿಯಾದವನಿಗೆ ಪತ್ನಿಗೆ ಸಮನಾದ ಸ್ನೇಹಿತರಿಲ್ಲ. ಸುಖ ದುಃಖಗಳಲ್ಲಿ ನಲನ ಸಮಭಾಗಿನಿ ತಾನು ಎಂದು ಹೇಳಿ. ತನ್ನನ್ನು ದೂರ ಕಳಿಸುವ ಯೋಚನೆಯನ್ನು ಮಾಡಬೇಡವೆನ್ನುತ್ತಾಳೆ. ನಲನು ಕಾಡಿನಲ್ಲಿ ಅವಳನ್ನು ಏಕಾಂಗಿಯಾಗಿ ಬಿಟ್ಟು ಹೊರಟು ಹೋದಾಗ ಹೆಬ್ಬಾವು ಅವಳನ್ನು ಸುತ್ತಿಕೊಂಡು ಪ್ರಾಣ ಸಂಕಟ ಉಂಟಾದಾಗಲೂ ದಮಯಂತಿ ನಲನನ್ನು ಕುರಿತೇ ಚಿಂತಿಸಿದಳು. ಘೋರಾರಣ್ಯದಲ್ಲಿ ನಾನಾ ರೀತಿಯ ಕಷ್ಟಗಳನ್ನು ಸಹಿಸಿ, ಚೇದಿ ರಾಜ್ಯಕ್ಕೆ ಬಂದು, ನಂತರ ಅಲ್ಲಿಂದ ಕುಂಡಿನಪುರಕ್ಕೆ ಬರುತ್ತಾಳೆ. ದಮಯಂತಿ ನಲನ ಬರುವಿಕೆಗಾಗಿ ಕಾದು, ತಂದೆಯ ಸಹಾಯದಿಂದ ನಲನನ್ನು ಹುಡುಕಿಸಲು ಯತ್ನಿಸಿದಳು. ನಲನ ಇರುವಿಕೆಯ ಬಗ್ಗೆ ಏನೂ ತಿಳಿಯಲಿಲ್ಲ. ಆಗ ದಮಯಂತಿಯು ಉಪಾಯದಿಂದ ಮರು ಸ್ವಯಂವರದ ನಾಟಕವಾಡಿ ನಲನನ್ನು ಬರುವಂತೆ ಮಾಡಿದಳು. ಋತುಪರ್ಣ ರಾಜನ ಆಶ್ರಯದಲ್ಲಿದ್ದು ಸ್ವಯಂವರಕ್ಕೆ ಅವನನ್ನು ಕರೆತಂದ ನಲನನ್ನು ವಿವಿಧೋಪಾಯಗಳಿಂದ ಕಂಡು ಹಿಡಿದು ಅವನನ್ನು ಮತ್ತೆ ಸೇರಿಕೊಂಡಳು. ಧರ್ಮನಿಷ್ಠನೂ, ಪರಾಕ್ರಮಿಯೂ, ಸುಂದರನೂ, ಧೀರನೂ ಆದ ನಲನು ಪಗಡೆಯಾಟದಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ಕಾಡುಪಾಲಾದರೂ ಅವನನ್ನು ತ್ಯಜಿಸಲಿಲ್ಲ. ನಿಂದಿಸಲಿಲ್ಲ, ಅವಳಲ್ಲಿ ಅವನೆಡೆಗಿನ ಪ್ರೀತಿ, ಗೌರವಾದರಗಳು ಕಡಿಮೆಯಾಗಲಿಲ್ಲ. ಪತಿಯು ಐಶ್ವರ್ಯವಂತನಾಗಿರಲಿ, ಸಂಪತ್ತು ಕಳೆದುಕೊಂಡು ನಿರ್ಗತಿಕನಾಗಿರಲಿ ಅವನನ್ನು ಆದರಿಸಿ ಗೌರವಿಸುವುದು ಪತ್ನಿಯ ಕರ್ತವ್ಯ. ಆಪತ್ತಿನಲ್ಲಿ ಎದೆಗೆಡದೆ ತಾಳ್ಮೆ, ಸಹನೆಯಿಂದ ಪತಿಯ ಹಿತವನ್ನೇ ಚಿಂತಿಸುವ ದಮಯಂತಿಯ ಗುಣ ಇಂದಿನ ಹೆಣ್ಣು ಮಕ್ಕಳಿಗೆ ಮಾದರಿಯಾಗಬೇಕು.




| ದಿನಾಂಕ | ವಾರ | ಉತ್ಸವಗಳು |
|---|---|---|
| 10-04-2025 | ಗುರುವಾರ | ಶ್ರೀ ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಸ್ವಾಮಿಯವರಿಗೆ |
| 11-04-2025 | ಶುಕ್ರವಾರ | ಶ್ರೀ ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಸ್ವಾಮಿಯವರಿಗೆ |
| 12-04-2025 | ಶನಿವಾರ | ಶ್ರೀ ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಸ್ವಾಮಿಯವರಿಗೆ |



# ರಾಮಾಶ್ವಮೇಧದ ಪುಣ್ಯಭೂಮಿ ನೈಮಿಷಾರಣ್ಯ


**ಲೇಖಕರು : ಎಸ್. ಆರ್. ಪೂಜಾರ್**

ಭಾರತದ ಅತ್ಯಂತ ಪುಣ್ಯಭೂಮಿ **"ನೈಮಿಷಾರಣ್ಯ"** ಪುರಾಣಗಳಲ್ಲಿ ಇದನ್ನು ಅಷ್ಟಮ ವೈಕುಂಠವೆಂದು ಕರೆಯಲಾಗಿದೆ. ಪೌರಾಣಿಕ ಕಾಲದಿಂದಲೂ ಈ ಪುಣ್ಯ ಕ್ಷೇತ್ರದ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಹಾಗೂ ಪುರಾತತ್ವದ ದೃಷ್ಟಿಯಿಂದ ಈ ಸ್ಥಳವು ಪವಿತ್ರತೆಯನ್ನು ಪಡೆದಿದೆ ಹಾಗೂ ಮಹತ್ವದ್ ಆಗಿದೆ. ಸಂಶೋಧಕರ ದೃಷ್ಟಿಯಲ್ಲಿ ಈ ಕ್ಷೇತ್ರವನ್ನು ಸುಮಾರು ಐದು ಸಾವಿರ ವರ್ಷದ ಹಿಂದಿನದೆಂದು ದೃಢಪಡಿಸಿದ್ದಾರೆ. ಕೂರ್ಮಪುರಾಣದನುಸಾರ ನೈಮಿಷಾರಣ್ಯವನ್ನು ಸತ್‌ಯುಗ ಎಂದು ಉಲ್ಲೇಖಿಸಲಾಗಿದೆ. ಈ ತತ್ವದ ಪುಷ್ಟಿ ವಿಭಿನ್ನ ಪುರಾಣಗಳು, ಮಹಾಭಾರತ ಹಾಗೂ ಶ್ರೀಸತ್ಯನಾರಾಯಣ ವ್ರತಕಥಾ, ವಾಲ್ಮೀಕಿ ರಾಮಾಯಣ, ಮುಂತಾದ ಅನೇಕ ಸದ್ಗ್ರಂಥಗಳಲ್ಲಿ ವರ್ಣಿಸಲಾಗಿದೆ. ಕ್ಷೇತ್ರದ ಪ್ರಾಚೀನತೆ ಮತ್ತು ಪಾವನತೆಯನ್ನು ವ್ಯಕ್ತಪಡಿಸಿದ ಒಂದು ಆಖ್ಯಾನವು ಶ್ರೀ ಶಿವಪುರಾಣದ ಮೂರನೇಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ. ಈ ಅಧ್ಯಾಯದಲ್ಲಿ ಮೋಕ್ಷಪ್ರಾಪ್ತಿ ವಿಷಯದ ಬಗ್ಗೆ ವಿಶದವಾಗಿ ವಿವರಿಸಲಾಗಿದೆ. ಈ ವರ್ಣನೆಯಲ್ಲಿ ಋಷಿಮುನಿಗಳಿಗೆ ಉಪದೇಶದಿಂದ ಶ್ರೀಬ್ರಹ್ಮ ದೇವರು ಹೇಳಿದ್ದೇನೆಂದರೇ ನಾನು ನಿಮಗೆ ಒಂದು ಉಪಾಯವನ್ನು ಹೇಳುತ್ತೇನೆ-ಅದೇನೆಂದರೆ ನಾನು ಹೇಳುವ ಉಪಾಯದಿಂದ ನಿಮಗೆ ಒಂದೇ ಜನ್ಮದಲ್ಲಿ ನಿಮ್ಮ ಅಂಗೈಯಲ್ಲಿ ಮುಕ್ತಿಯು ಲಭ್ಯವಾಗುವುದು.

ಅದು ಹೇಗೆಂದರೆ ಯಾರು ಅನೇಕ ಜನ್ಮಗಳನ್ನು ಸಂಸಾರದ ಬಂಧನದಲ್ಲಿ ಬಳಲಿ ಬೆಂಡಾಗಿರುವರೋ ಇದನ್ನು ನಾನು ಇಲ್ಲಿಂದಲೇ **"ಮನೋಮಯಚಕ್ರ"**ವನ್ನು ನಿರ್ಮಿಸಿದ ಬಗ್ಗೆ ಹೇಳುತ್ತೇನೆ. ಇದು ಎಲ್ಲಿ ಹೋಗಿ ವಿರ್ಣವಾಗಲಿದೆಯೋ ಅದೇ ಸ್ಥಳವು ತಪಸ್ಸಿಗಾಗಿ ಶುಭ ದೇಶವಾಗುವುದು ಹೀಗೆ ಹೇಳಿದ ಪಿತಾಮಹರಾದ ಶ್ರೀಬ್ರಹ್ಮದೇವರು ಆ ತೋಬಶ್ರಿ ಮನೋಮಯಚಕ್ರವನ್ನು ಬಿಟ್ಟರು. ಬ್ರಹ್ಮದೇವರು ಬಿಟ್ಟ ಆ ಚಕ್ರವು ಮನೋಹರ ಶಿಲಾಖಂಡಯುಕ್ತ ಮತ್ತು ನೇಮಿಶೀರ್ಣವಾಗಿದ್ದರಿಂದ ಆ ವನವನ್ನು **"ನೈಮಿಷಾರಣ್ಯ ಕ್ಷೇತ್ರ"** ವೆಂದು ಕರೆಯುವರು. ಈ ಸ್ಥಳವು ಮುನಿ ಪೂಜಿತ ಸ್ಥಳವಾಗಿದೆ. ಈ ವನವು ಶ್ರೀ ಬ್ರಹ್ಮದೇವರ ದಯೆಯಿಂದ ಅನೇಕಾನೇಕ ಫಲವೃಕ್ಷಗಳು ಪುಷ್ಪಗಳಿಂದ, ಕೂಡಿ ಕಣ್ಣಿಗೆ ಹಬ್ಬವನ್ನು ನೀಡಿತು. ಈ ವನಕ್ಕೆ ವಿದ್ಯಾಧರವೆಂಬುವವರು ಬಂದು ವಾಸವಾದರು. ಪೂರ್ವಕಾಲದಲ್ಲಿ ಈ ಜಗತ್ತಿನ ಸ್ಪಷ್ಟವಾಗಿ ಇಚ್ಛಿಸಿದ ವಿಶ್ವಸೃಷ್ಟಿ ಹಾಗೂ ಮಾಯಿಪೆತ್ಯ ಅಗ್ನಿಯೆ ಉಪಾಸಕರಾದ ಬ್ರಹ್ಮಜ್ಞ ಪ್ರಜಾಪತಿಯು ಇಲ್ಲಿಯೇ ದಿವ್ಯಯಜ್ಞವನ್ನು ಪ್ರಾರಂಭಿಸಿದರು. ಇಲ್ಲಿಯೇ ಶಬ್ದಶಾಸ್ತ್ರ, ಅರ್ಥಶಾಸ್ತ್ರ ಹಾಗೂ ನ್ಯಾಯ ಶಾಸ್ತ್ರಗಳ ವಿದ್ವಾನ್ ಋಷಿಗಳು ಶಕ್ತಿ, ಪ್ರಜ್ಞ ಮತ್ತು ಕ್ರಿಯೆಗಳ ಮಾಧ್ಯದಿಂದ ಶಾಸ್ತ್ರೀಯ ವಿಧಿಗಳ ಅನುಷ್ಠಾನವನ್ನು ಗೈದರು.

ಕೂರ್ಮಪುರಾಣದಲ್ಲಿ ನೈಮಿಷಾರಣ್ಯವನ್ನು ಮೂರು ಲೋಕಗಳಲ್ಲಿ ಸರ್ವಶ್ರೇಷ್ಠ ಹಾಗೂ ನಾಲ್ಕುಧಾಮಗಳ ಪೂರಕ ಎಂದು ವಿವರಿಸಲಾಗಿದೆ. ಈ ಸ್ಥಳವನ್ನು ವಾಯುಪುರಾಣದಲ್ಲಿ ಮಾನ್ಯತೆ ನೀಡಲಾಗಿದೆ. ಈ ಸ್ಥಳಕ್ಕೆ ವಾಯುಪುರಾಣದ ಮಾನ್ಯತೆ ಇದೆ. ಈ ಪುಣ್ಯಕ್ಷೇತ್ರ ನೈಮಿಷದಲ್ಲಿ ಮೂವತ್ತು ಸಾವಿರ ಜ್ಞಾತಾ-ಅಜ್ಞಾತಾ ಪಾಪವಿನಾಶಕ ಪುಣ್ಯ ತೀರ್ಥ ಸ್ಥಳಗಳ ಬಗ್ಗೆ ಪ್ರಶಂಸಿಸಲಾಗಿದೆ.

ವರಾಹ ಪುರಾಣದಲ್ಲಿ ನೈಮಿಷಾರಣ್ಯದ ನಾಮಕರಣದ ವಿಷಯದ ಬಗ್ಗೆ ಉಲ್ಲೇಖದ ಬಗ್ಗೆ ತಿಳಿದು ಬರುವುದೆನೆಂದರೆ -ಭಗವಾನ್ ಶ್ರೀಹರಿಯು ನಿಮಿಷ ಮಾತ್ರದಲ್ಲಿ (ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ) ನಾನು ಇದೇ ಕ್ಷೇತ್ರದಲ್ಲಿ ದಾನವರನ್ನು ಧ್ವಂಸಗೊಳಿಸಿದ್ದೆ,




ಆದ್ದರಿಂದ ಈ ತಪೋವನಕ್ಕೆ **"ನೈಮಿಷಾರಣ್ಯೆ"** ಎಂಬ ಹೆಸರು ಬಂದಿದೆ ಎಂದು ಉಲ್ಲೇಖಿಸಲಾಗಿದೆ. ಆದರೆ ಸರ್ವ ಗ್ರಹವೆನೆಂದರೇ ಸೃಷ್ಟಿಕರ್ತ ಶ್ರೀಬ್ರಹ್ಮದೇವರು ಪ್ರಯೋಗಿಸಿದ ಮನೋಮಯ ಚಕ್ರವು ನೇಮಿ ವಿಶೇಷಣ ವಾಗಿದ್ದರಿಂದ ಈ ಕ್ಷೇತ್ರದ ಹೆಸರು **"ನೈಮಿಷಾರಣ್ಯ"** ಎಂದು ಕರೆಯಲಾಗಿದೆ. ಈ ಘಟನೆಯು ಸೃಷ್ಟಿಯ ಪ್ರಾರಂಭ (ಸತ್‌ಯುಗ) ದಲ್ಲಿ ಘಟಿಸಿದೆ. ಹಾಗೂ ಪುರಾತನವಾಗಿದೆ ಎಂಬ ಅಭಿಪ್ರಾಯವು ಮೂಡಿಬಂದಿದೆ.

ಈ ಪುಣ್ಯ ಕ್ಷೇತ್ರದ ಬಗ್ಗೆ ವಾಯುಪುರಾಣ ದಲ್ಲಿ ಹೀಗೆ ವರ್ಣಿಸಲಾಗಿದೆ. ದಾನವರ ವಿನಾಶವು ದ್ವಾಪರಯುಗದ ಘಟನೆಯಾಗಿದೆ. ಆ ಯುಗದಲ್ಲಿ ನೈಮಿಷದ ಉತ್ತರ ವನದಲ್ಲಿ ಒಬ್ಬ ದಾನವನಾದ ಬಿಲ್ಲುಗಾರ ಬಿಲಾಲ ಎಂಬ ಹೆಸರಿನ ವನು ವಾಸ ವಾಗಿದ್ದನು. ಆತನು ಶ್ರೀಶಂಕರನ ಉಪಾಸಕನಾಗಿದ್ದನು. ಆತನ ಅತ್ಯಾಚಾರದಿಂದ ತ್ರಸ್ಥರಾದ ಅಲ್ಲಿಯ ಕ್ಷತ್ರಿಯರು ಯೋಗಿರಾಜ ಕೃಷ್ಣನ ಅಗ್ರಜಬಲ ದಾವುನನ್ನು ಪ್ರಾರ್ಥಿಸಿ ಬಿಲ್ಲುಗಾರನನ್ನು ಸಂಹಾರ ಮಾಡಿಸಿದರು. ಇದಕ್ಕೂ ಪೂರ್ವದಲ್ಲಿ ತ್ರೇತಾಯುಗ ಮತ್ತು ಸತ್‌ಯುಗದಲ್ಲಿ ನೈಮಿಷತಪೋ ಭೂಮಿಯಲ್ಲಿ ವಿಭಿನ್ನ ಪ್ರಕಾರದ ಯಜ್ಞಯಾಗಾದಿಗಳು ಜರುಗಿದ್ದವು ಎಂಬ ಪ್ರಮಾಣ ಕೂಡಾ ಇದೆ. ಈ ಪವಿತ್ರಕ್ಷೇತ್ರದ ಮಹಾತ್ಮೆಯ ವರ್ಣನೆಯು ಪದ್ಮ ಪುರಾಣ. ವಾಯುಪುರಾಣದಲ್ಲಿ ವರ್ಣಿಸಲಾಗಿದೆ.

ಶ್ರೀಮದ್ ಭಾಗವತದ ಅನುಸಾರ ಬ್ರಹ್ಮಜ್ಞ ಪ್ರಜಾಪತಿಗಳು (ಮಹರ್ಷಿಗಳು) ಮುಖಾಂತರ ಈ ಕ್ಷೇತ್ರ ನೈಮಿಷಾರಣ್ಯದಲ್ಲಿ ಆಗಾಗ್ಗೆ ದಿವ್ಯಯಜ್ಞಗಳ ಅನುಷ್ಠಾನ ಜರಗುತ್ತಿದ್ದವು. ಇದೇ ಪ್ರಕಾರ ದಿವ್ಯಯಜ್ಞಗಳ ಬಗ್ಗೆ ಶ್ರೀಮದ್ ಭಾಗವತದಲ್ಲಿ ವರ್ಣಿಸಲಾಗಿದೆ.

ನೈಮಿಷಾರಣ್ಯದಲ್ಲಿ ಶೌನಕಾದಿ ಮುನಿಗಳು ಭಗವತ್ಪ್ರಾಪ್ತಿಗಾಗಿ ಇಚ್ಛೆಯಿಂದ ಸಹಸ್ರ ವರ್ಷಗಳು ಪೂರ್ಣಬಾಗಲಿರುವ ದ್ಯೋತಕವಾಗಿ ಒಂದು ಮಹಾಯಜ್ಞವನ್ನು ಅನುಷ್ಠಾನ ಗೊಳಿಸಿದರು. ನೈಮಿಷಾರಣ್ಯದ ಪುರಾತನತೆ, ಪಾವನತೆ ಹಾಗೂ ಆಧ್ಯಾತ್ಮಿಕ ಋಷಿಗಳಿಂದ ಪರಿ ಪೂರ್ಣಕ್ಷೇತ್ರದಲ್ಲಿ ಧಾರ್ಮಿಕ ಅನುಷ್ಠಾನಗಳು ನಿರಂತರತೆಯ ಪ್ರಾಮಾಣಿಕವಾಗುತ್ತದೆ. ತ್ರೇತಾಯುಗದಲ್ಲಿ ಕೂಡಾ ಸುಪ್ರಸಿದ್ಧವಾದ ಐತಿಹಾಸಿಕವುಳ್ಳ ರಾಮಾಶ್ವಮೇಧಯಾಗವು ಇಲ್ಲಿ ಜರುಗಿತು. ಆ ಸಂದರ್ಭದಲ್ಲಿ ಪ್ರಥಮ ಬಾರಿಗೆ ಶ್ರೀರಾಮ ಕಥೆಯು ಮಂದಾಕಿನಿಯ ಸುಸ್ವರಕಂಠದಿಂದ ಪ್ರವಹಿತವಾಯಿತು ಹಾಗೂ ಭೂಮಿಕಾ (ಸೀತಾದೇವಿ) ಭೂಗರ್ಭದಲ್ಲಿ ಭರಾಮಿಸ್ಥಳಾದ ಘಟನೆಯು ಕೂಡಾ ಜರುಗಿತು.

ನೈಮಿಷಾರಣ್ಯದಲ್ಲಿ ಗೋಮತಿಯ ತಟದ ಮೇಲೆ ವಿಶಾಲವಾದ ಯಜ್ಞಮಂಟಪ ನಿರ್ಮಿಸಿ ನಿರ್ಧರಿಸಲಾಯಿತು. ಏಕೆಂದರೆ ಆ ಸುಂದರ ವನವು ಉತ್ತಮ ಮತ್ತು ಪವಿತ್ರವಾದ ಸ್ಥಾನವಾಗಿತ್ತು ಹಾಗೂ ಶ್ರೀರಾಮನು ಮಹಾಬಾಹು ರಘುನಂದನ (ಲಕ್ಷ್ಮಣ)ನಿಗೆ ಆ ಸ್ಥಳದಲ್ಲಿ ಜರುಗಲಿರುವ ಮಹಾಯಜ್ಞವು ಸುರಕ್ಷಿತವಾಗಿ ನೇರವೇರಲು ಸರ್ವತ್ರ ಶಾಂತಿವಿಧಾನದ ವ್ಯವಸ್ಥೆಗೈಯಲು ಲಕ್ಷ್ಮಣನಿಗೆ ಕ್ರಮಕೈಕೊಳ್ಳಲು ಸೂಚಿಸಲಾಯಿತು. ಇದರೊಂದಿಗೆ ಈ ಯಜ್ಞವು ನಡೆಯುವ ನೈಮಿಷಾರಣ್ಯದಲ್ಲಿ ಸಾವಿರಾರು ಧರ್ಮ ಪುರುಷರು ಶಾಂತಿಯಿಂದ ಯಜ್ಞವನ್ನು ಮುಕ್ತಾಯಗೊಳಿಸಲು ನೀನು ಪ್ರಾರ್ಥಿಸಿ ಯಜ್ಞವು ಸಾಂಗೋಪಾಂಗವಾಗಿ ನಡೆಯುವಂತೆ ನೀನು ನೋಡಿಕೋ ಎಂದು ಸಹೋದರ ಲಕ್ಷ್ಮಣನಿಗೆ ಶ್ರೀರಾಮನು ಆದೇಶಿಸಿದನು. ಇದಲ್ಲದೆ ನೀನು ಈ ಮಹಾಯಜ್ಞವನ್ನು ನೋಡಿ ಕೃತಾರ್ಥನಾಗು ಎಂದನು ಶ್ರೀರಾಮ.

ಅಯೋಧ್ಯಾ ನರೇಶನಾದ ಶ್ರೀರಾಮನು ಲಕ್ಷ್ಮಣನಿಗೆ ಯಜ್ಞದ ವ್ಯವಸ್ಥೆಯೊಂದಿಗೆ ಯಜ್ಞಾಶ್ವದ ಸುರಕ್ಷತೆಯ ಬಗ್ಗೆಯೂ ಜವಾಬ್ದಾರಿ ವಹಿಸಲು ಆದೇಶಿಸಿದನು. ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿ 11 ಮತ್ತು 12 ನೇ ಸರ್ಗದ ಕಥೆಯಲ್ಲಿ ವರ್ಣಿಸಲಾಗಿದೆ. ತದನಂತರ ಶ್ರೀರಾಮನು ಸಕಲ ಸಾಧನ ಸಾಮಾಗ್ರಿಗಳನ್ನು ಕಳುಹಿಸಿ ಅದರೊಂದಿಗೆ ಕೃಷ್ಣ ಸಾರ ಮೃಗದಸಮಾನ ಕಪ್ಪುವರ್ಣದ ಹಾಗೂ ಸಕಲ ಲಕ್ಷಣಗಳುಳ್ಳ ಕುದುರೆಯನ್ನು ಕೂಡಾ ಕಳಿಸಿದನು. ಋತ್ವಿಕರೊಂದಿಗೆ ತನ್ನ ಸಹೋದರ ಲಕ್ಷ್ಮಣನನ್ನು ರಕ್ಷಿಸಲು ಕಳಿಸಿದನು. ಹೀಗೆ ಹೇಳಿದ ನಂತರ ಶ್ರೀರಘುನಾಥನು ಸೈನ್ಯದೊಂದಿಗೆ ನೈಮಿಷಾರಣ್ಯಕ್ಕೆ ಸಾಗಿದನು.

ನೈಮಿಷಾರಣ್ಯ ಯಜ್ಞದಲ್ಲಿ ಲವ-ಕುಶರ ದ್ವಾರ ಶ್ರೀರಾಮಾಯಣದ ಕಥೆಯ ಸುಮಧುರ ಕಾವ್ಯವಾಚನವು ನಡೆಯಿತು. ತುಂಬಿದ ರಾಜಸಭೆಯಲ್ಲಿ ತನ್ನ ಸುಪುತ್ರರ ಕಾವ್ಯ ವಾಚನವನ್ನು ಸೀತಾಮಾತೆಯು ಆ ಪುಣ್ಯ ಸ್ಥಳಕ್ಕೆ ಆಗಮಿಸಿದ್ದಳು ಮಕ್ಕಳ ಕಾವ್ಯ ವಾಚನ ಕೇಳಿ ಶ್ರೀರಾಮಚಂದ್ರನು ಹೃದಯ ತುಂಬಿ ಬಂದು ಆನಂದಾಶ್ರುಗಳಿನ್ನು ಸುರಿಸಿ ಮಕ್ಕಳನ್ನು ಬಿಗಿ ದಪ್ಪಿದರು. ಈ ಅಲೌಕಿಕ ಘಟನೆಯನ್ನು ಮಹರ್ಷಿ ವಾಲ್ಮೀಕಿಯವರು ರಾಮಾಯಣದ ಉತ್ತರಕಾಂಡದ ಮೂರು ಸರ್ಗದಲ್ಲಿ (15 ರಿಂದ 17) ರವರೆಗೆ ವರ್ಣಿಸಿದ್ದಾರೆ.

ಮಹಾಭಾರತದ ಕಥೆಯಲ್ಲಿಯೂ ಕೂಡಾ ನೈಮಿ ಷಾರಣ್ಯದ ಐತಿಹಾಸಿಕ ಘಟನೆಗಳ ಬಗ್ಗೆ ಉಲ್ಲೇಖಿಸಲಾಗಿದೆ. ಯುಧಿಷ್ಠರ ಸಹಿತ ಪಂಚಪಾಂಡವರು ನೈಮಿಷಾರಣ್ಯದ ಮಹಿಮೆಯ ಬಗ್ಗೆ ಕೇಳಿ ಪ್ರಭಾವಿತರಾಗಿ ಇಲ್ಲಿಗೆ ಆಗಮಿಸಿದ್ದರು. ಅರ್ಜುನನು ಈ ಪುಣ್ಯ ಸ್ಥಳದಲ್ಲಿ ಪೂಜಿಸಿ, ಅರ್ಚನ, ದಾನ ಮುಂತಾದ ಅನುಷ್ಠಾನ ವನ್ನು ಪೂರ್ಣಗೊಳಿಸಿದನು.

ಈ ಪವಿತ್ರಸ್ಥಳದ ಬಗ್ಗೆ ದೇವರ್ಷಿ ನಾರದರು ವರ್ಣಿಸಿದ ಭೀಷ್ಮಪುಲಸ್ತರ ಸಂವಾದದನುವಾದ ಯಾವ ಯಾತ್ರಿಕರು ನೈಮಿಷಾರಣ್ಯಕ್ಕೆ ಹೋಗುವರೋ ಅವರ ಅರ್ಧ ಪಾಪಗಳು ನಷ್ಟವಾಗುವವು ಅವಾದ ನಂತರ ಈ ಪವಿತ್ರ ಸ್ಥಳಕ್ಕೆ ಆಗಮಿಸುತ್ತಲೇ ಉಳಿದ ಪಾಪಗಳು ನಾಶವಾಗಿ ಮುಕ್ತರಾಗುವರು.

ಈ ಪೃಥ್ವಿಯ ಸಕಲ ತೀರ್ಥಗಳೆಲ್ಲವೂ ಈ ನೈಮಿಷಾರಣ್ಯ-ತೀರ್ಥ ಕ್ಷೇತ್ರದಲ್ಲಿ ಸ್ಥಿತವಾಗಿವೆ ಹಾಗೂ ಇದಕ್ಕೆ ಲೋಕಮಾನ್ಯತೆ ಕೂಡಾ ಇದೆ. **"ಚಾರಧಾಮ'**' ಅಂದರೆ ನಾಲ್ಕು ಯಾತ್ರೆಗಳು ಈ ನೈಮಿಷಾರಣ್ಯದಲ್ಲಿ ಒಂದುಗೂಡಿವೆ.

ಪ್ರಾಚೀನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ (ವಿಶೇಷವಾಗಿ ತಮಿಳುನಾಡು)ನಲ್ಲಿ ಎಷ್ಟೋ ಭಗವದ್ಭಕ್ತರ ಹಾಗೂ ಆಚಾರ್ಯರ ಅವತಾರ ಸ್ಥಳವಾಗಿ ಮಾರ್ಪಟ್ಟಿತು. ಈ ಪುಣ್ಯ ಭಕ್ತರಲ್ಲಿ ಹನ್ನೆರಡು ವೈಷ್ಣವ ಭಕ್ತರು (ಅಲವಾರ) **"ದಿವ್ಯಸೂರಿ"** ಎಂಬ ಹೆಸರಿನಿಂದ ವಿಖ್ಯಾತರಾಗಿದ್ದಾರೆ. ಅಲವಾರಿಗಳ ಮುಖಾಂತರ ಭಾರತದಲ್ಲಿ ಮಂಗಳಾಸಶಿತ ದಿವ್ಯಕ್ಷೇತ್ರ 108 ಇವೆ. ಇವುಗಳಲ್ಲಿ 9 ಉತ್ತರ ಭಾರತದಲ್ಲಿವೆ. ಈ 9 ಕ್ಷೇತ್ರಗಳಲ್ಲಿ ಒಂದು ನೈಮಿಷಾರಣ್ಯೆ ಆಗಿದೆ.

ವೈಷ್ಣವ ಭಕ್ತ ಹಲವಾರ ನೈಮಿಷಾರಣ್ಯದಲ್ಲಿ ಭಗವಂತನನ್ನು ಅರುಣರೂಪದಲ್ಲಿ ಒಪ್ಪಿ ಆತನ ಪೂಜೆ ಗೈಯ್ಯುತ್ತಾರೆ. ಅದರ ಅನುಸಾರವಾಗಿ ಅಲ್ಲಿಯ ದೇವರು **" ದೇವರಾಶಿನ್"** (ಆರಣ್ಯೆ) ಮತ್ತು ಮಾತಾಶ್ರೀ ಹರಿಲಕ್ಷ್ಮಿಯಾಗಿದ್ದಾರೆ. ಮಹಾಲಕ್ಷ್ಮಿಯೆ ಪುರುಷಕಾರತ್ವ (ಶಿಫಾರಿಶ್)ನ್ನು ಶರಣಾಗತಿಗೈಯ್ಯುವ ಸ್ವರೂಪ ಎಂದು ಕರೆಯಲಾಗುತ್ತಿದೆ. ಅದೇ ಪ್ರಕಾರವಾಗಿ ಹಲವಾರರು ಕೂಡಾ ಮಹಾ ಲಕ್ಷ್ಮಿಯನ್ನು ಪುರುಷಕಾರತ್ವದಲ್ಲಿ ಇಲ್ಲಿ ವಿರಾಟಮಾನರಾಗಿರುವ ಶ್ರೀಭಗವಾನನ ಚರಣಗಳಲ್ಲಿ ಶರಣಾಗತಿ ಗೈಯ್ಯುತ್ತಾರೆ. ಇದರ ಉದ್ದೇಶವೆನೆಂದರೆ ಆ ದೇಶ ದಿವ್ಯ ಪಾದಗಳಲ್ಲಿ ತಮ್ಮ ದೋಷಗಳನ್ನು ಪ್ರಕಟಿಸಿದ ತಮ್ಮನ್ನು ರಕ್ಷಿಸುವಂತೆ ಪ್ರಾರ್ಥಿಸುತ್ತಾರೆ.

ಐತಿಹಾಸಿಕ ದೃಷ್ಟಿಯಿಂದ ನೈಮಿಷಾರಣ್ಯದ ಪುಣ್ಯಭೂಮಿ ವೇದಗಳ ಮತ್ತು ಪುರಾಣಗಳ ರಚನಾಭರಾಮಿಯಾಗಿದೆ. ಪುರಾಣ ಸಂಸ್ಕೃತಿಯನ್ನು ಬಿಂಬಿಸುವ ತಪೋಭೂಮಿ ಎನಿಸಿವೆ. ಮಹರ್ಷಿ ದ್ವೈಪಾಯನರು ವೇದಗಳನ್ನು ಇಲ್ಲಿಯೇ ಸಂಪಾದನೆಗೈದು ಶ್ರೀವೇದವ್ಯಾಸರ ಉಪಾಧಿಯಿಂದ ಅಲಂಕೃತವಾಗಿದೆ. ಅವರು ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರು. ಅವುಗಳ ದ್ವಾರ ಅವರ ಸಾಧನಾಸ್ಥಳ (ವ್ಯಾಸಮಂದಿರ ವ್ಯಾಸಪೀಠ)ದಿಂದ 18 ಪುರಾಣಗಳ ರಚನೆಯಾಗಿ ನೈಮಿಷ ಕ್ಷೇತ್ರದ ಅಪೂರ್ವ ಘಟನೆಯಾಗಿದೆ.

ಪವಿತ್ರನದಿ ಗೋಮಾತಿ ತಟದಲ್ಲಿ ವ್ಯಾಸಮಂದಿರ (ವ್ಯಾಸರ ವೃಂದಾವನ) ವಿದೆ. ಇದರ ಸಮೀಪದಲ್ಲಿ ನೆರಳನ್ನು ನೀಡುವ ವಿಶಾಲ ಕಾಯ ವೃಕ್ಷವಿದೆ. ಇದರ ಕೆಳಗೆ ಪುರಾಣಗಳು ಮಹಾಭಾರತದ ದೃಶ್ಯ **"ಮಹಾಕಾವ್ಯ"** ವು ಜನ್ಮತಾಳಿದನು. ಮಹರ್ಷಿಗಳಾದ ಸೂತಜೀಯವರು ಕೌಶಿಕ ಮುನಿಗಳಿಗೆ ಇದೇ ಸ್ಥಳದಲ್ಲಿ 18 ಪುರಾಣಗಳ ಕಥೆಯನ್ನು ಪಠಿಸಿದರು. ಮಹರ್ಷಿ ಕೌಶಿಕಮುನಿಗಳ ಆಚಾರ್ಯತ್ವದಲ್ಲಿ ಲೋಕ ಕಲ್ಯಾಣಾರ್ಥವಾಗಿ ಸಾವಿರಾರು ಋಷಿಗಳ ಧರ್ಮ ಮಂತ್ರವು ಇಲ್ಲಿಯೇ ಜರುಗಿತು ಹಾಗೂ ಲಕ್ಷ ಲಕ್ಷ ಋಷಿಗಳು ಮಹರ್ಷಿ ಕೌಶಿಕಮುನಿಗಳ ಕುಲಪತಿತ್ವದಲ್ಲಿ ನೈಮಿಷ ಭೂಮಿಯ ಮೇಲೆ ಪ್ರಪ್ರಥಮ ವಿಶ್ವವಿದ್ಯಾಲಯದಿಂದ ಜ್ಞಾನ ದಾನ ಪಡೆದರು. ಪ್ರತಿ ಮನೆ ಮನೆಗಳಲ್ಲಿ ಪೂಜಿಸುವ ಶ್ರೀಸತ್ಯನಾರಾಯಣ ವ್ರತದ ಕಥೆಯು ಪ್ರಾರಂಭವಾಗಿದ್ದು ಇದೇ ಪವಿತ್ರ ಸ್ಥಳದಿಂದಲೇ,

ಪುಣ್ಯಭೂಮಿ ನೈಮಿಷದಲ್ಲಿ ಅಜಸ್ತಬಲವು ಪವಿತ್ರ ಚಕ್ರತೀರ್ಥ ಸ್ವರೂಪದಲ್ಲಿ ಉದ್ಭವವಾಗಿದೆ. ಇದರ ಪ್ರಖ್ಯಾತಿಯು ದೇಶ ವಿದೇಶಗಳಿಗೂ ಹಬ್ಬಿದೆ. ಭಾರತದ ಬಹು ದೂರದ ಭಕ್ತರು ಈ ಪವಿತ್ರ ತೀರ್ಥದಲ್ಲಿ ಪುಣ್ಯಸ್ನಾನವನ್ನು ಗೈಯ್ಯಲು ಪ್ರತಿನಿತ್ಯ ಬರುತ್ತಲೇ ಇರುತ್ತಾರೆ. ಪ್ರತಿ ಅಮಾವಾಸ್ಯೆಯಂದು ಇಲ್ಲಿ ದೊಡ್ಡ ಜಾತ್ರೆ ಜರಗುತ್ತದೆ. ಮೌನಿ ಅಮಾವಾಸ್ಯೆಯಂದು, ಸೋಮನ ಅಮಾವಾಸ್ಯೆಯಂದು ಸಮುದ್ರದ ಅಲೆಗಳಂತೆ ಜನರು ತಂಡೋಪತಂಡವಾಗಿ ಬರುತ್ತಾರೆ. ಪವಿತ್ರ ಚಕ್ರ ತೀರ್ಥದ ತಟದಲ್ಲಿ ಅನೇಕ ಮಂದಿರಗಳಿವೆ. ಮುಖ್ಯ ಮಂದಿರಲ್ಲಿ ಭಗವಾನ್ ಭೂತನಾಥ ಮಹಾದೇವ ಮಂದಿರ ಹಾಗೂ ಇಲ್ಲಿಂದ ಎರಡು ಫರ್ಲಾಂಗ ದೂರ ಉತ್ತರ ಪೂರ್ವದಲ್ಲಿ ಮಾತೆ ಲಲಿತಾ ಮಂದಿರವಿದೆ. ಈ ದೇವಿಯನ್ನು ಭಕ್ತರು ಶಕ್ತಿದೇವಿ ಎಂದು ಪೂಜಿಸುತ್ತಾರೆ. ಈ ತಾಯಿಯ ಮಹಿಮೆಯನ್ನು ಕೇಳಿದ ಶ್ರೀ ಅಗಸ್ತ್ಯ ಮುನಿಗಳು ದರ್ಶಿಸಿ ನಾನು ಧನ್ಯಾತಿಧನ್ಯನಾದೆ ಎಂದು ಸ್ಮರಿಸಿದ್ದಾರೆ.

ನೈಮಿಷದ ಪವಿತ್ರ ಭೂಮಿಯಲ್ಲಿ ಗೋವರ್ಧನ ಮಹಾದೇವ, ಜಾನಕಿಕುಂಡ, ದೇವದೇವೇಶ್ವರ ಮಹಾದೇವ, ಸಿದ್ಧದಾಮದ ರೂಪದಲ್ಲಿ ಸ್ಥಿತರಾಗಿದ್ದಾರೆ. ಅದೇ ಪ್ರಕಾರ ಶ್ರೀಹನುಮಾನ್, ನರಸಿಂಹ ಧರ್ಮರಾಜ, ಶುಕದೇವ, ಗಂಗೋತ್ರಿ, ಪುಷ್ಕರತೀರ್ಥ, ಗೋದಾವರಿ ಹಾಗೂ ಗಂಗಾ ಶ್ರೀ ರಾಮಜನ್ಮಸ್ಥಳ, ಬ್ರಹ್ಮಾವರ್ತತೀರ್ಥ, ಪುರಾಣ ಮಂದಿರ, ಪೌರಾಣಿಕ ಅನುಸಂಧಾನ ಸಂಸ್ಥಾನ ಹಾಗೂ ಅನೇಕಾನೇಕ ಸಂಸ್ಕೃತ ವಿದ್ಯಾಲಯಗಳು, ಮುಂತಾದ ಮಂದಿರಗಳು, ತೀರ್ಥ ಕ್ಷೇತ್ರಗಳು ವಿದ್ಯಾ ಸಂಸ್ಥೆಗಳಿವೆ. ಇಂಥಹ ಕ್ಷೇತ್ರಗಳನ್ನು ದರ್ಶಿಸಿದವರೇ ಪುಣ್ಯಶಾಲಿಗಳು ಹಾಗೂ ಭಾಗ್ಯವಂತರು.



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಕಳೆದ ಸಂಚಿಕೆಯಿಂದ

ಸೇವೆ ಮಾಡಿದಲ್ಲಿ ನಮ್ಮ ಮಹಾಪಾಪಗಳೆಲ್ಲವೂ ತೀರಿ ಹೋಗುವುವು) ಎಂದು ತಮ್ಮ ಸರ್ವಾರ್ಥಗಳಿಗೆಲ್ಲವೂ ಇವರೇ ಮಾಲಿಕುಲೀಯನೆಂದೂ, 'ತಿರುವೇಂಗಡಂ ನೆಜ್ಗಟ್ಕು ಶಮ ಜ್ಗಾಲ್ ವೀಡುತರುಂ ತಡೆಜ್ಞಾನಂದಂ' (ಶ್ರೀ ವೇಂಕಟನೆಲೆಯು ಪರಮ ಸಾಮ್ಯಪ್ರಾಪ್ತಿರೂಪವಾದ ಮೋಕ್ಷವನ್ನು ಪ್ರಸಾದಿಸುವ ಸುವಿಶಾಲ ಶೈಲವಾಗಿದೆ) ಎಂದು ತಾವೇ ಮನಸಾರೆ ಮೋಕ್ಷ ಪ್ರಾಪ್ತಿಗಿದು ಉಪಾಯಭೂತವಾದುದು, ಪರೋಪದೇಶ ಮಾಡುವಾಗ ಶೆನ್ನುವಣಜ್ಞಮಿನೋ ಶೇಣುಯರ್ ವೇಂಗಡೆತ್ತ್ (ಆಕಾಶಕ್ಕೆ ತಾಗುವಂತೆ ಎತ್ತರವಾದ ವೇಂಕಟಾಚಲಕ್ಕೆ ಭೇಟಿಮಾಡಿ ಪ್ರಮಾಣಿಸಿ ನೋಡುವುದು? ಎಂದು ತಾವೇ ಸಮಸ್ತ ಚೇತನಗಳಿಗೆ ಪರಮ ಪ್ರಾಪ್ತಲ್ಯವಾದುದು ವೇಂಗಡಮೇ ಎಂದು ತಾವೇ ಎಲ್ಲರಿಗೂ ಮಿಕಿದೆಲ್ಲವೂ ಸುಳ್ಳು ವೇಂಗಡಮೇಮನ್‌ಯ್ ವಿನ್ನೈ ನೋಯ್ ತೀರ್ಪುಮಪುಂ (ವೇಂಕಟಾದ್ರಿಯೇ ಆದಿ-ವ್ಯಾಧಿಗಳನ್ನು ಹೋಗಲಾಡಿಸಬಲ್ಲದೆಂದು ಪದಿಯದು ವೇತ್ತಿ ಎಳು ಪದುಪಯನ್' (ಆ ತಿರುಪತಿಯನ್ನು ಸ್ತುತಿಸಿ ಉದ್ದೀಪನಗೊಳ್ಳುವುದೇ ಸತ್ಫಲಿತವು) ಎಂದೂ, 'ಚಲಯದು ನಾಳುಮ್ ಮರುವುದರ್ ವಳಕ್ಕು (ಈ ತಿರುಪತಿಯನ್ನು ಪ್ರತಿದಿನ ಪ್ರದಕ್ಷಿಣೆ ನಮಸ್ಕಾರ ಮಾಡುತ್ತಿರುವುದು ಸಕಲ ಸಂಪತ್ಪ್ರದಾಯಕ) ಎಂದೂ, ತೋಳಕ್ಕರುದವೇ ತುಣಿವದು ಶೂದು' (ನಮಸ್ಕರಿಸಬೇಕೆಂಬ ಮೊದಲೇ ಹೇಳಿದಂತೆ ಈ ತಿರುಮಲದ ಸ್ತುತಿ ಪ್ರಣಾಮಗಳಿಂದ ಆರಾಧ್ಯದೇವತೆ ಒದಗಬಲ್ಲರೆಂದು ಉಪದೇಶಿಸಿ, ಹೀಗೆ ಭಗವಂತನಿಂದಲೇ ಸರ್ವಪ್ರಕಾರವಾದ ಚೇತನಗಳಿಗೆ ಪ್ರಾಪ್ತಿಯಾಗಿ, ಅಪ್ರಾಕೃತವಾದ ತಿರುಮಲೈ ಆಳ್ವಾರ್ ಎಂಬ ಹೆಸರಿನಿಂದ ವ್ಯವಹರಿಸಲ್ಪಡುವ ಈ ಪರ್ವತವನ್ನು ಪ್ರಾಕೃತವಾದ ಶರೀರದಿಂದ ಸ್ಪರ್ಶಿಸುವುದು ಎಂದು ತಿಳಿದು, ಈ ತ್ಯಾಗುವಿಕೆಯಿಂದಲೇ ತಿರುಮಲೆಯ ಮುಖ್ಯದ್ವಾರದಿಂದ ಶ್ರೀವೇಂಕಟೇಶ್ವರನ ಮಂಗಳಾಶಾಸನವನ್ನು ರಚಿಸಲ್ಪಟ್ಟಿರಬಹುದೆಂದು ಅವರ ದಿವ್ಯೋದ್ದೇಶವನ್ನು ಅನುಸರಿಸಿ ಶ್ರೀಭಾಷ್ಯಕಾರರು ಆಳ್ವಾರರನ್ನು ತಿರುಮಲೆ ಬೆಟ್ಟದ ಮೇಲೆ ಅರ್ಚಾರೂಪವಾಗಿ ಶ್ರೀ ಪ್ರತಿಷ್ಠೆ ಮಾಡಬೇಕೆಂದು, ಆ ಆಳ್ವಾರರು ಶ್ರೀದೇವಿಯಿಂದಲೇ ಆಕಾರತ್ರಯಾದ್ಯಷ್ಟಗುಣ ಸಂಪತ್ತನ್ನು ಹೊಂದಿರಲೆಂದು ಶ್ರೀಮನ್ನಾರಾಯಣನ ದಿವ್ಯ ಮಂಗಳ ವಿಗ್ರಹವನ್ನು ಅನುಭವಿಸಿದಾಗ ಸ್ವಸ್ವರೂಪದೊಂದಿಗೆ ಒಡನಾಡಲು ಒಂದು ದೇವಿ ದೇಹವನ್ನು ಹೊಂದಿರುವ ಬಹು ಭಗವಂತನನ್ನು ಅನುಭವಿಸಲು 'ನಪ್ಪಿನ್ನೈ



## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

ಕಾಲೇ ನಿಲಮಾ ಮಕಳ್ ಕಾಲ್ ತಿರುಮಕಳ್ ಕಾರ್ ಪಿರಿನಿಟ್ಟಾಳ್' (ನೀಲಾದೇವಿ, ಭೂದೇವಿ, ಲಕ್ಷ್ಮೀದೇವಿ ಅವತರಿಸಿದ್ದಾರೆ) ಎಂಬುದನ್ನು ಹೇಳಲು ಲಕ್ಷ್ಮೀಪ್ರಭೃತರಾದ ಪಟ್ಟ ಮಹಿಷಿಯರಲ್ಲಿ ಈ ನ್ವಾಲರು ಎಂದು ವಿಕಲ್ಪ ಮಾಡುತ್ತಿರಲು,

ಭೋಗ್ಯ ವಾಮಪಿ ನಾಂತರೀಯಕತಯಾ ಪುಷ್ಪಾಂಗ ರಾಗೈಸ್ಸಮಂ
ನಿವೃತ್ತ ಪ್ರಣಯಾತಿ ವಾಹನವಿಧೌ ನೀತಾಃ ಪರೀವಾಹತಾಂ
ದೇವಿತಾತ್ವಮನು ನಿಲಯಾ ಸಹಾ ಮಹಿ ದೇವ್ಯಾಸ್ಸಸ್ರಂ ತಥಾ
ಯಾಭಿಸ್ತ್ವಂ ಸ್ತನಬಾಹುದೃಷ್ಟಿಭಿ ರಿವ ಸ್ವಾಭಿಃಪ್ರಿಯಾಂ ಶಾಸ್ಲಸೇ

(ಓ ಲಕ್ಷ್ಮಿದೇವಿ ನಿನ್ನ ಯಜಮಾನನಿಗೆ (ಶ್ರೀಮನ್ನಾರಾಯಣನಿಗೆ) ತಪ್ಪದೇ ಇರತಕ್ಕಂಥ ಭೋಗ್ಯವಸ್ತುಗಳಾದ ಮಾಲಿಕಾ ಚಂದನಾದಿಗಳಿಂದ ಭೋಗ್ಯ ವಸ್ತುಗಳಿಂದ ಪ್ರೇಮ ಪರಿಪೂರ್ಣವಾದ ಪ್ರವಹಿಸಬಹುದಾದ ಆ ಪ್ರವಾಹವನ್ನು ಹೊಂದಿದ ನೀಲಾದೇವಿಯಿಂದ ಮೊದಲುಗೊಂಡು ಭೂದೇವಿಯನ್ನೊಳಗೊಂಡು ಹಾಗೆ ಮುಂದುವರೆದು ಇತರ ದೇವಿಯರು ನಿನ್ನನ್ನು ಅನುಸರಿಸಿರುವರು. ನೀಳವಾದ ಸ್ತನಗಳು, ಬಾಹುಗಳು, ಕಟಾಕ್ಷಗಳು ಈ ಭೂ ನೀಲಾದಿಗಳೊಡನೆ ನೀನು ನಿನ್ನ ಪ್ರಿಯನನ್ನು ಸಂತೋಷಪಡಿಸುತ್ತಿದ್ದೀಯೆ)

ಎಂದು ಹೇಳಿದ ರೀತಿಯಲ್ಲಿ ಲಕ್ಷ್ಮಿದೇವಿ ತನ್ನ ಕುಚೆಗಳಿಂದ ತಥೋಚಿತ ದಿವ್ಯಾಯವಯವಗಳಿಂದ ಹೂ ಶರೀರದಿಂದ ಇತರ ದಿವ್ಯ ಮಹಿಷಿಯರೊಡಗೂಡಿ ಭೇದವೇ ಇಲ್ಲದ ಭಗವಂತನನ್ನು ಆನಂದಭರಿತನನ್ನಾಗಿ ಮಾಡಲು, ಆಳ್ವಾರುಗಳ ಜೊತೆಯಾಗಿ ಭಗವಂತನು ಅನುಭವಿಸುವಾಗ ತಾನು ಸಹಾ ಆ ಅನುಭವದ ಅನುಭೂತಿ ಪರಿಪಕ್ವವಾಗಿ ದೇಶಿಯವಾಗಿ ಆ ಭೋಗರಸವನ್ನು ವರ್ಧಿಸಿ ಭಗವಂತನ ದಿವ್ಯ ಹೃದಯದಲ್ಲಿ ಆಹ್ಲಾದಪರವಶಾದಿ ಗುಣವಿಷ್ಟಗಳಿರಲು,

ಯದಾ ಯದಾ ಹಿ ಕೌಸಲ್ಯಾ ದೀಸಿವಚ್ಚ ಸಖಿವ ಚ
ಭಾರ್ಯಾವ ದ್ಭಗಿನಿವಚ್ಚೆ ಮಾತೃವಚ್ಚಾವ ತಿಷ್ಠತೇ

(ಮುಂದುವರೆಯುತ್ತದೆ)



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಇದು ಚಂದ್ರನ ವರ್ಣನೆಯಾದರೆ ಸೂರ್ಯನ ವರ್ಣನೆ ಬೇಡವೆ? ನಮ್ಮ ಸಮಸ್ಯೆಯನ್ನು ಎದುರು ನೋಡಿಯೇ ಆಳ್ವಾರ್ ಅದನ್ನೂ ಸಿದ್ಧಪಡಿಸಿಕೊಂಡಿದ್ದಾರೆ. ಸೂರ್ಯನು ತನ್ನ ತೇರಿನಲ್ಲಿ ಪ್ರತಿಷ್ಠೆಯೊಡನೆ ಬರುವಾಗ ಎದುರಿಗೆ ತಿರುಮಲೆಯ ಶಿಖರ, ಮೇಲಿನ ದೇಗುಲವನ್ನು ಕಾಣುತ್ತಾನೆ. ಅವನಿಗೆ ದೇವನಲ್ಲಿ ಭಕ್ತಿ ಉತ್ಪನ್ನವಾಗಿ ತನ್ನ ಗರ್ವವನ್ನು ಒತ್ತಟ್ಟಿಗೆ ಅಟ್ಟಿ ಭಕ್ತನ ಸೌಲಭ್ಯ ಗುಣದಿಂದ ತನ್ನ ತೇರನ್ನು ದೇವರಿಗೆ ಬಲಗೊಂಡು ಹೋಗುವಂತೆ ಏರ್ಪಾಡು ಮಾಡುತ್ತಾನೆ. ಇದೊಂದು ಮನೋಜ್ಞ ಭಾವನೆಯೇ ಸರಿ ! ಸಾಣೆಯ ಕಲ್ಲಿಗೆ ಕಬ್ಬಿಣದ ಸಲಕರಣೆ ಸೋಕಿದಾಗ ತೇಯುವಂತೆ ವೇಂಗಡದ ಶಿಖರದ ಕೋಡಿಗೆ ಪೂರ್ಣಚಂದ್ರನು ಸೋಕಿ ಸ್ವಲ್ಪ ಸ್ವಲ್ಪವಾಗಿ ಕರಗುತ್ತಾನೆ. ಕೆಳಗೆ ಇಳಿಯುವ ಚಂದ್ರ ಹಿರಿಯದಾಗಿ ಕಾಣುವುದು ಸಹಜ ಪ್ರಾಕೃತಿಕ ವ್ಯಾಪಾರ ತಾನೆ. ಅದರ ಒಡಲಿನಲ್ಲಿನ ಜಿಂಕೆಯ ಗುರುತೂ ಕೂಡ ದೊಡ್ಡದಾಗಿ ಕಾಣುತ್ತದೆ. ಪರ್ವತಾಗ್ರದಲ್ಲಿ ಹಸಿದು ಕಂಗೆಟ್ಟ ಹುಲಿಯು ಜಿಂಕೆಯನ್ನು ಕಂಡು ತನಗೆ ಆಹಾರ ದೊರಕಿದ ಸಂತೋಷಕ್ಕೆ ಘರ್ಜಿಸುತ್ತಾ ಮೈಮುರಿದು ಮೇಲೇಳುತ್ತದೆ. ಬೆಟ್ಟದ ಮೇಲೆ ದಟ್ಟವಾಗಿ ಹಬ್ಬಿರುವ ವೇಂಗೈ ಪುಷ್ಪದ ನರುಗಂಪು ಆ ಪ್ರಾಂತವನ್ನೆಲ್ಲಾ ಆವರಿಸಿರುತ್ತದೆ. ಬೇರು ತಿನ್ನಲು ಬಂದ ಕಾಡು ಹಂದಿಗಳು ನೆಲವನ್ನೆಲ್ಲಾ ಕೆದ ಕಲು ನೆಲವು ಉತ್ತು ಬಿತ್ತಿದಂತೆ ಆಗುವುದಲ್ಲದೆ ಅದರೊಳಗೆ ಅಡಗಿದ್ದ ಬಿದುರು ಕಡ್ಡಿಗಳು ಬೇರಿನೊಂದಿಗೆ ಮೇಲೆ ಬೀಳುತ್ತದೆ. ಈ ಉತ್ತ ನೆಲಕ್ಕೇ ವೃದ್ಧ ಕುರವರು ಕಾಳುಗಳನ್ನು ಚೆಲ್ಲಿ ಬೆಳೆಯನ್ನು ತೆಗೆಯುತ್ತಾರೆ. ಈ ಧಾನ್ಯದ ಬೆಳೆ, ನೆಲ ಕಚ್ಚಿ ಬೆಳೆದ ಬಿದುರು ಮಳೆಗಳ ಮಧ್ಯೆ ಕಂಗೊಳಿಸುತ್ತದೆ.

ಇಂತಹ ಸುಂದರ ಚಿತ್ರಗಳನ್ನು ಇದರ ಮಧ್ಯೆ ಭಕ್ತಿ ಪುಷ್ಪಗಳಿಂದ ಸಂಭ್ರಮಿಸುವ ವೇಂಗಡದೊಡೆಯನನ್ನು ಕಂಡೇ ರಾಮಾನುಜರು ಈ ಆಳ್ವಾರ್ ಪಾಶುರಗಳಿಂದ ಪರವಶರಾಗಿ 'ಶೆಂದಮಿಳ್ ಪಾಡುವಾರ್ ವಣಂಗುಂ ದೈವಂ' ಎಂದು ಉದ್ಗಾರ ಹೊರಡಿಸಿದ್ದರಲ್ಲಿ ಆಶ್ಚರ್ಯವೇನು? ಇಂತಹ ಸುಂದರ ಪಾಶುರಗಳನ್ನು ದೇವಸ್ಥಾನದ ಅಧ್ಯಯನೋತ್ಸವದಲ್ಲಿ ಪ್ರಥಮವಾಗಿ ಅನುಸಂಧಾನ ಮಾಡಲು ಏರ್ಪಾಡು ಮಾಡಿದ್ದರಲ್ಲಿ ವಿಶೇಷವೇಕಿಲ್ಲ?

ಈ ಮೂವರ ಕಾಲಕ್ಕೆ ತಿರುವೇಂಗಡವು ಸುಸಂಸ್ಕೃತ ಸ್ಥಿತಿಯಲ್ಲಿ ಮುಂದುವರಿದಿತ್ತು. ಮೊದಲನೇ ಆಳ್ವಾರ್ ಮೂರನೆಯ ಆಳ್ವಾರ್ ವನ್ಯಮೃಗಗಳನ್ನು ವಿವರಿಸಿದ್ದಾರೆ.

ಎರಡನೆಯ ಆಳ್ವಾರ್ ಬರಿಯ ಬಿದಿರುಮಳೆ, ಕಪಿಗಳನ್ನು ಮಾತ್ರ ವಿವರಿಸಿದ್ದಾರೆ. ಆನೆಯ ಒಂದು ಪಾಶುರವಿದೆ. ಮೊದಲನೆಯ ಆಳ್ವಾರ್ ಕಾಲಕ್ಕೆ ಆನೆಯನ್ನು ಹಿಡಿಯುವ ಕುರವರು ಆನೆಯಿಂದ ತಮ್ಮನ್ನೂ ತಮ್ಮ ಪೈರುಪಚ್ಚೆಗಳನ್ನು ರಕ್ಷಿಸುವ ಸಾಹಸದ ವಿವರಣೆಯಿದೆ.

ಎರಡನೆಯ ಆಳ್ವಾರ್ ಕಾಲಕ್ಕೆ ವೇಂಗಡದ ಮೇಲೆ ತೋಟಗಳೂ, ಕಾಲುವೆಗಳೂ ಇರುವ ವಿವರಣೆ ಇದೆ. ಇದನ್ನು ಕಂಡಾಗ ಮೂರನೆಯವರು ಮತ್ತು ಮೊದಲನೆಯವರು ಮೊದಲು ತಿರುವೇಂಗಡವನ್ನು ದರ್ಶಿಸಿದ್ದರು. ಅವರ ಕಾಲದಲ್ಲಿ ಇನ್ನೂ ಜನ ಪ್ರಾಣಿಗಳಿಂದ ರಕ್ಷಣೆ ಹೊಂದಲು ಕಷ್ಟಪಡುತ್ತಿದ್ದರು. ಇನ್ನೂ ಕಾಡಾಗಿಯೇ ಇದ್ದ ಕಾಲ. ಆದರೆ ಎರಡನೆಯ ಆಳ್ವಾರ್ ಕಡೆಯದಾಗಿ ವೇಂಗಡಕ್ಕೆ ಬಂದವರು. ಈ ವಿಚಾರಗಳಲ್ಲಿ ಸಾಕಷ್ಟು ಸುಧಾರಿತ ಪರಿಸ್ಥಿತಿಯನ್ನು ಕಂಡಿದ್ದರು. ಅವರ ಕಾಲಕ್ಕೆ ವೇಂಗಡದಲ್ಲಿ ಕಾಡು ತರಿಯಲ್ಪಟ್ಟು ಜನ ನೆಮ್ಮದಿಯ ಬಾಳನ್ನು ಕಾಣಲು ತೊಡಗಿದ್ದರು ಎಂಬುವುದು ಈ ತಿರುವಂದಾದಿಗಳಿಂದ ಕಂಡು ಬರುವ ಅಂಶ.

ಈ ಎರಡನೆಯ ಆಳ್ವಾರ್ ತಮ್ಮ ಪ್ರಬಂಧದಲ್ಲಿ **"ಮಾಮಲ್ಲೈ"** ಎಂದು ಮಹಾಬಲಿಪುರವನ್ನು ಕರೆದಿರುವುದೂ ಒಂದು ಗಮನಾರ್ಹ ವಿಚಾರವೇ ಸರಿ. ಏತಕ್ಕೆಂದರೆ ಮಾಮಲ್ಲನೆಂಬ ಬಿರುದನ್ನು ಬಳಸಿ ಪಲ್ಲವ ನರಸಿಂಹವರ್ಮನು ತನ್ನ ವಿಜಯೋತ್ಸವದ ಸೂಚಕವಾಗಿ ಮಹಾಬಲಿಪುರವನ್ನು ಮಾಮಲ್ಲಪುರವೆಂದು ಕರೆದ. ಅದಕ್ಕೆ ಮೊದಲು ಮಹಾಬಲಿಪುರಕ್ಕೆ ಈ ಹೆಸರು ಇರಲಿಲ್ಲ. ನರಸಿಂಹವರ್ಮನ ಕಾಲ ಕ್ರಿ.ಶ.630 ರಿಂದ 778 ಆದ್ದರಿಂದ ಪೂದತ್ತಾಳ್ವಾರ್ ಕಾಲ ನರಸಿಂಹವರ್ಮನ ಕಾಲವೋ, ಇಲ್ಲ ಅವನ ನಂತರದ್ದೋ ಇರಬೇಕೆಂಬುದಾಗಿ ಊಹಿಸಲು ಸಾಧ್ಯವಾಗುತ್ತದೆ. ಮೊದಲು ಮತ್ತು ಮೂರನೆಯವರ ಕಾಲ ಇದಕ್ಕೆ ಮೊದಲೋ ಅಥವಾ ಇದೇ ಸಮಯವೋ ಎಂದು ಕಲ್ಪಿಸಬಹುದು. ಆದರೆ ಎರಡನೆಯ ಆಳ್ವಾರ್ ತಿರುಮಲೆಯನ್ನು ದರ್ಶಿಸಿದಾಗ ಮೊದಲನೆಯ ಮತ್ತು ಮೂರನೆಯ ಆಳ್ವಾರ್ ತಿರುಮಲೆಯನ್ನು ದರ್ಶಿಸಿ ಬಹಳ ಕಾಲವೇ ಆಗಿತ್ತು ಎಂಬುವುದು ಮೇಲಿನ ಪಾಶುರಗಳಿಂದ ಕಂಡು ಬರಬಹುದಾದ ವಿಚಾರ.

ಆಳ್ವಾರುಗಳು ಕಟ್ಟಾ ವಿಷ್ಣುಭಕ್ತರೇ ಆದರೂ ಅವರು ಕೆಲವು ಪಾಶುರಗಳಲ್ಲಿ ಹರಿಹರ ಅಭೇದವನ್ನು ವ್ಯಕ್ತಪಡಿಸುತ್ತಾರೆ. ಇದೊಂದು ವಿಚಿತ್ರ ಸನ್ನಿವೇಶವೇ ಸರಿ. **"ಅರನ್ ನಾರಣನ್ ನಾಮಮ್" "ಏತ್ತಾನ್ ಪುಳ್ಳೂರ್ನ್ದಾನ್" "ಪೊನ್ ತಿಗಳುಂ ಮೇನಿ ಪುರಿಶಡೈ" "ತಾಳ್ ಶಡೈಯುಂ ನೀಣ್ ಮುಡಿಯುಂ"** ಮುಂತಾದ ಪಾಶುರಗಳಿಗೆ ಶ್ರೀವೈಷ್ಣವರೇನೋ, ವಿಷ್ಣು ಶರೀರಿ, ಶಿವ ಶರೀರ ಎಂದು ಅರ್ಥ ಮಾಡಿ ಮುಗಿಸುತ್ತಾರೆ. ಈ ಅರ್ಥ ಈ ಪಾಶುರಗಳಿಂದ ಸ್ಪಷ್ಟವಾಗಿ ಮೂಡುವುದೇ, ಈ ರೀತಿ ಅರ್ಥ ಮಾಡುವುದರಿಂದ ತೃಪ್ತಿ ಏರ್ಪಡುತ್ತದೆಯೇ, ಈ ಅರ್ಥವೇ ಆಳ್ವಾರ್‌ಗಳ ಅಭಿಪ್ರಾಯವೇ ಎನ್ನುವುದು ಅಸ್ಪಷ್ಟವಾಗುತ್ತದೆ. ಕೆಲವೊಮ್ಮೆ ಇಂದ್ರ, ಶಿವ, ಬ್ರಹ್ಮಾದಿಗಳು ವಿಷ್ಣುವಿನ ಅಧೀನ ಎನ್ನುವ ಅರ್ಥವುಳ್ಳ ಪಾಶುರಗಳು ಬಂದರೂ "ತಾಳ್ ಶಡೈಯುಂ" ಮುಂತಾದ ಪಾಶುರಗಳಲ್ಲಿ ಈ ಸ್ಪಷ್ಟವಾದ ಅರ್ಥ ವ್ಯಕ್ತಪಡುವುದಿಲ್ಲ. ಈ ಗೊಂದಲ ಈ ಮೂರು ಆಳ್ವಾರ್ ಪಾಶುರಗಳು ಮತ್ತು ತಿರುವಾಯ್ಮೊಳಿಯಲ್ಲಿ ಒಂದೆರಡು ಕಡೆ ಕಂಡು ಬರುತ್ತದೆ. ಇದಕ್ಕೆ ಒಂದು ರೀತಿಯ ಸಮಾಧಾನ ಹೇಳಬಹುದೆಂದು ಎನಿಸುತ್ತಿದೆ.

ಈ ಆಳ್ವಾರುಗಳ ಕಾಲಕ್ಕೆ ಶೈವ ಮತ ಪ್ರಾಬಲ್ಯವಾಗಿದ್ದಿತ್ತು. ಎಲ್ಲೆಲ್ಲಿಯೂ ಶಿವಾಲಯಗಳೇ ಏಳುತ್ತಿದ್ದ ಕಾಲ. ಸಾಲದ್ದಕ್ಕೆ ರಾಜ ಮಹಾರಾಜರೇ ಈ ಶೈವಮತ ಪ್ರಸಾರಣ ಕಾರ್ಯಕ್ಕೆ ಟೊಂಕ ಕಟ್ಟಿದ್ದರು. ಪೆರಿಯ ಪುರಾಣದಲ್ಲಿ ಸೌಂದರನಂಬಿಗೆ ಈಶ್ವರನು ಹೇಳುವ ಮಾತು ಇದು **"ಎಲ್ಲೆಲ್ಲಿ ನಿಚ್ಚಂ ಶಿವಾಲಯಂಗಳುಂಟಾದಲ್ಲಿ ಅಲ್ಲಲ್ಲಿ ಸಹಸ್ರ ನಂದಿಯುಂಡಿಗೆಗಳಂ ಈವೆಂ"**ಎನ್ನುತ್ತಾನೆ. ಮತ್ತೆ ನಂಬಿಗೆ **"ಹಾಡಯ್ಯ ಹಾಡೆನುತ ತಾಳಮಂ ಕುಡಲು"** ಎಂದು ತನ್ನನ್ನು ಸಂಕೀರ್ತಿಸುವಂತೆ ತಾನೇ ಹೇಳುತ್ತಾನೆ.

ಶಿವನು ಈ ರೀತಿ ತನ್ನ ಆಲಯಗಳನ್ನು ಕಟ್ಟಬೇಕೆಂದು ಅಪೇಕ್ಷೆ ಪಡುವುದೂ, ತನ್ನನ್ನು ಹಾಡಬೇಕೆಂದು ವಿಧಾಯಕ ಮಾಡುವುದೂ ಉತ್ಪ್ರೇಕ್ಷೆ ಎನಿಸಿದರೂ ಇದರ ಹಿನ್ನಲೆಯನ್ನು ವಿಚಾರ ಮಾಡಿದಾಗ ಅಂದಿನ ರಾಜರೇ ಶೈವ ಮತ ಹರಡಲು ಎಷ್ಟೊಂದು ಆಸ್ಥೆ ವಹಿಸಿದ್ದರು ಎನ್ನುವುದರ ಅರಿವು ಉಂಟಾಗುತ್ತದೆ. ಆದರೆ ವೈಷ್ಣವ ಧರ್ಮ ಪ್ರಚಾರಕ್ಕೋ ಈ ಪ್ರೋತ್ಸಾಹ ಎಲ್ಲಿ ಇದ್ದಿತು. ವೈಷ್ಣವರೂ ಶೈವರಷ್ಟು ಅಧಿಕ ಸಂಖ್ಯೆಯಲ್ಲಿಯೂ ಇರಲಿಲ್ಲ. ಶೈವರನ್ನು ಸ್ಪರ್ಧಿಸುವ ಎದೆಗಾರಿಕೆಯೂ ಇರಲಿಲ್ಲ. ಕಿರುಕುಳಗಳ ಮಧ್ಯೆ ವೈಷ್ಣವ ಧರ್ಮ ಉಳಿದದ್ದೇ ಹೆಚ್ಚು!

**- ಮುಂದುವರೆಯುತ್ತದೆ.**



**108 ದಿವ್ಯ ದೇಶಗಳು**



# ತಿರುವೈಗುಂದವಿಣ್ಣಗರಮ್

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಶ್ರೀಮತಿ. ಸೂರ್ಯವಂಶಿ**

ತಿರುನಾಂಗೂರ್ ದಿವ್ಯದೇಶಗಳಲ್ಲಿ ಇದು ಐದನೆಯ ದಿವ್ಯದೇಶವಾಗಿದೆ. ಈ ಆಲಯವನ್ನು ವೈಕುಂಠನಾಥನ ದೇವಾಲಯ ಎಂದೂ ಕರೆಯುತ್ತಾರೆ. ಇದಕ್ಕೆ ತಿರುವಿಣ್ಣಾಳೀ ಎಂಬ ಮತ್ತೊಂದು ಹೆಸರೂ ಇದೆ. ಈ ದೇವಾಲಯವು ಅದ್ಭುತವಾದ ಪ್ರಾಕಾರಗಳೊಂದಿಗೆ ನಿರ್ಮಾಣವಾಗಿದ್ದು, ಶ್ರೀಮನ್ನಾರಾಯಣನು ಶ್ರೀವೈಕುಂಠದಲ್ಲಿ ಯಾವ ರೀತಿ ನೆಲೆಸಿದ್ದಾನೋ ಅದೇ ರೀತಿಯಲ್ಲಿ ಕುಳಿತಿರುವ ಭಂಗಿಯಲ್ಲಿ ಮೂಲ ಮೂರ್ತಿಯು ವೈಕುಂಠನಾಥನೆಂಬ ದಿವ್ಯನಾಮದೊಂದಿಗೆ ಶ್ರೀದೇವಿ, ಭೂದೇವಿ, ನೀಳಾದೇವಿ ಸಮೇತವಾಗಿ ಪೂರ್ವದಿಕ್ಕನ್ನು ನೋಡುತ್ತಾ ಎಲ್ಲರನ್ನೂ ಅನುಗ್ರಹಿಸುತ್ತಿದ್ದಾನೆ. ಉತ್ಸವಮೂರ್ತಿಯು ಸಹ ವೈಕುಂಠನಾಥನಾಗಿ ಕುಳಿತಿರುವ ಭಂಗಿಯಲ್ಲಿ ಸೇವೆಯನ್ನು ಸ್ವೀಕರಿಸುತ್ತಾ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಅಮ್ಮನವರು ವೈಕುಂಠವಲ್ಲಿ ತಾಯಾರ್ ಎಂಬ ಹೆಸರಿನೊಂದಿಗೆ ಕುಳಿತಿರುವ ಭಂಗಿಯಲ್ಲಿ ಪ್ರತ್ಯೇಕವಾದ ಆಲಯದಲ್ಲಿ ನೆಲೆಸಿದ್ದಾಳೆ. ಸ್ಥಳ ತೀರ್ಥವನ್ನು ಲಕ್ಷ್ಮೀ ಪುಷ್ಕರಿಣಿ, ಉದಂಕ ಪುಷ್ಕರಿಣಿ ಎಂದೂ ಕರೆಯುತ್ತಾರೆ. ಆನಂದ ಸತ್ಯವರ್ಧಕ ವಿಮಾನ, ಸತ್ಯವ್ರತ ವಿಮಾನ ಎಂಬ ವಿಮಾನಗೋಪುರಗಳಿವೆ.

## ಸ್ಥಳ ಪುರಾಣ

ಪ್ರತಿಯೊಬ್ಬ ಜೀವಿಯೂ ಪರಮಪುರುಷಾರ್ಥವೆಂಬ ಮೋಕ್ಷವನ್ನು ಹೊಂದಿ ಆ ದಿವ್ಯ ಲೋಕದಲ್ಲಿ ಶ್ರೀವೈಕುಂಠನಾಥನಿಗೆ ಸೇವೆಯನ್ನು ಮಾಡಬೇಕೆಂಬ ಮಹಾದಾಸೆಯನ್ನು ಹೊಂದಿರುತ್ತಾರೆ. ಅದೇ ರೀತಿ ಶ್ವೇತಕೇತು ಎಂಬ ಮಹಾರಾಜ ಮತ್ತು ಅವನ ಧರ್ಮಪತ್ನಿಯಾದ ದಮಯಂತಿ, ಪರಮಪದದಲ್ಲಿ ವೈಕುಂಠನಾಥನಿಗೆ ಸೇವೆಯನ್ನು ಮಾಡಬೇಕೆಂಬ ಉದ್ದೇಶದಿಂದ ರಾಜಭೋಗಗಳನ್ನೆಲ್ಲಾ ತ್ಯಜಿಸಿ ಅತ್ಯಂತ ಕಠೋರವಾದ ತಪಸ್ಸನ್ನು ಮಾಡಿದರು. ಇದರ ಫಲವಾಗಿ ಇವರಿಬ್ಬರೂ ಶ್ರೀವೈಕುಂಠಕ್ಕೆ ಹೋದರು. ಆದರೆ ಅಲ್ಲಿ ಭಗವಂತನ ದರ್ಶನವು ದೊರೆಯಲಿಲ್ಲ ಅದೂ ಅಲ್ಲದೇ ಆ ಲೋಕದಲ್ಲಿ ಇವರಿಗೆ ಹಸಿವು, ಬಾಯಾರಿಕೆ, ನಿದ್ದೆ ಮೊದಲಾದ ಸಂಕಟಗಳೆಲ್ಲವೂ ಉಂಟಾಯಿತು. "ಅಯ್ಯೋ! ಈ ರೀತಿ ಏಕಾಯಿತು?'' ಎಂದುಕೊಂಡು ಖಿನ್ನರಾಗಿ ಅವರಿಬ್ಬರೂ ಹಿಂದಿರುಗಿ ಭೂಲೋಕಕ್ಕೆ ಬರುತ್ತಿರುವ ಸಮಯದಲ್ಲಿ ನಾರದ ಮಹರ್ಷಿಯು ಕಂಡು ಬಂದರು. ಆ ದಂಪತಿಗಳು ತಮ್ಮನೋವನ್ನೆಲ್ಲಾ ಆ ಮುನಿಗೆ ವಿವರಿಸಿದರು. ಆಗ ನಾರದ ಮಹರ್ಷಿಯು, "ಶ್ವೇತಕೇತು ಮಹಾರಾಜಾ! ಪೂರ್ವ ಜನ್ಮದಲ್ಲಿ ಯಜ್ಞಯಾಗಾದಿಗಳನ್ನು ಮಾಡದೇ, ವೇದಮಂತ್ರಗಳನ್ನು ಪಠಿಸದೇ, ಭಾಗವತರ ಸೇವೆಯನ್ನು ಮಾಡದೇ ಇರುವುದರಿಂದ ಇಂತಹ ಸ್ಥಿತಿಯು ಉಂಟಾಗಿದೆ. ಆದ್ದರಿಂದ ನೀವಿಬ್ಬರೂ ಭಗವಂತನು ಶ್ರೀವೈಕುಂಠದಲ್ಲಿ ಪಡೆಯುವಂತಹಾ ಆನಂದವನ್ನು ಭೂಲೋಕದಲ್ಲೇ ಹೊಂದುವುದಕ್ಕಾಗಿ ಭಗವಂತನು ಸಂಕಲ್ಪಿಸಿದ್ದಾನೆ. ಆದ್ದರಿಂದ ನೀವು ನಾರಾಯಣನ ದರ್ಶನಕ್ಕಾಗಿ ಕಾವೇರಿ ನದೀ ತೀರದಲ್ಲಿರುವ ಈ ವೈಗುಂದವಿಣ್ಣಗರಮ್ ಎಂಬ ದಿವ್ಯ ಕ್ಷೇತ್ರದಲ್ಲಿ ಪಲಾಸವನದ ಸಮೀಪದಲ್ಲಿ ಐರಾವತೇಶ್ವರನೆಂಬ ಹೆಸರಿನಿಂದ ಪರಮೇಶ್ವರನು, ಮತ್ತು ಉದಂಕ ಮಹರ್ಷಿ ಇಬ್ಬರೂ ತಪಸ್ಸು ಮಾಡುತ್ತಿದ್ದಾರೆ. ನೀವೂ ಅಲ್ಲಿಗೆ ಹೋಗಿ ತಪಸ್ಸು ಮಾಡಿದರೆ ನಾರಾಯಣನ ದರ್ಶನವು ಪ್ರಾಪ್ತಿಯಾಗುತ್ತದೆ'' ಎಂದು ಉಪದೇಶಿಸಿದರು.

ನಾರದರ ಸೂಚನೆಯ ಮೇರೆಗೆ ಶ್ವೇತಕೇತು ಮತ್ತು ಅವನ ಪತ್ನಿಯಾದ ದಮಯಂತಿ ಇಬ್ಬರೂ ಐರಾವತೇಶ್ವರ, ಉದಂಕಮಹರ್ಷಿಗಳೊಂದಿಗೆ ತಾವೂ ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದರು. ಅವರ ತಪಸ್ಸಿಗೆ ಮೆಚ್ಚಿದ ಭಗವಂತನು ಶ್ರೀವೈಕುಂಠನಾಥನೆಂಬ ಹೆಸರಿನಿಂದ ಅವರಿಗೆ ದರ್ಶನವನ್ನು ನೀಡಿದ. ಅವರ ಪ್ರಾರ್ಥನೆಯನ್ನು ಮನ್ನಿಸಿ ದೇವದೇವನು ಈ ದಿವ್ಯ ದೇಶದಲ್ಲೇ ವೈಕುಂಠನಾಥನಾಗಿ ನೆಲೆಸಿದ್ದಾನೆ. ಶ್ವೇತಕೇತು ದಮಯಂತಿ ದಂಪತಿಗಳು ಈ ಶ್ರೀವೈಕುಂಠನಾಥನಿಗೆ ಅನೇಕ ವಿಧವಾದ ಸೇವೆಗಳನ್ನು ಮಾಡಿ ಕೊನೆಗೆ ಮುಕ್ತಿಯನ್ನು ಪಡೆದರು.

ಈ ದಿವ್ಯದೇಶದ ಸ್ಥಳ ಪುರಾಣವನ್ನು ಯಾರು ಶ್ರವಣ ಮಾಡುತ್ತಾರೋ, ಯಾರು ಪಠನೆ ಮಾಡುತ್ತಾರೋ ಅವರಿಗೆ ಖಂಡಿತವಾಗಿಯೂ ಸತ್ಸಂತಾನ, ಧನ, ಧಾನ್ಯ, ಐಶ್ವರ್ಯಾದಿಗಳು, ಮುಕ್ತಿಯೂ ಉಂಟಾಗುತ್ತದೆಂದು ಪದ್ಮಪುರಾಣವು ತಿಳಿಸುತ್ತಿದೆ. ತಿರುಮಂಗೈ ಆಳ್ವಾರರು ಮಂಗಳಾಶಾಸನವನ್ನು ಮಾಡಿದ್ದಾರೆ. ಈ ದೇವಾಲಯದಲ್ಲಿ ಪಾಂಚರಾತ್ರಾಗಮದ ಪ್ರಕಾರ ಭಗವಂತನಿಗೆ ಪೂಜಾದಿ ಕಾರ್ಯಕ್ರಮಗಳನ್ನು ನಡೆಸುತ್ತಾರೆ.




# ಏಪ್ರಿಲ್ 2025
## ತಿಂಗಳ
# ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್



**ಮೇಷ**

ಆಸ್ತಿ, ಸಂಪತ್ತು, ವಿಲಾಸಮಯವಾದ ಸೌಕರ್ಯಗಳನ್ನು ಅನುಭವಿಸುತ್ತೀರಿ. ವ್ಯಾಪಾರದಲ್ಲಿ ಲಾಭಗಳನ್ನು ಪಡೆಯುವಿರಿ. ಸಾಲ ಬಾಧೆಗೆ ಬೀಳದಂತೆ ಅಧಿಕ ಖರ್ಚುಗಳನ್ನು ಕಡಿತಗೊಳಿಸಿಕೊಳ್ಳಿ. ಆಶಾವಾದಕರಾಗಿದ್ದು ನಿಮ್ಮ ಮಾತುಗಳಿಂದ ಇತರರನ್ನು ಮೆಚ್ಚಿಸಿ ಕಾರ್ಯಜಯವನ್ನು ಹೊಂದುವಿರಿ.



**ತುಲಾ**

ಆರ್ಥಿಕ ಪರಿಪುಷ್ಟಿ ಉಂಟಾಗಲಿದೆ. ಬಂಧು-ಮಿತ್ರರೊಂದಿಗೆ ಸಮಾಗಮ ಉಂಟಾಗಲಿದೆ. ಯೋಗ, ಧ್ಯಾನದಂಥ ಆರೋಗ್ಯ ಸೂತ್ರಗಳನ್ನು ಪಾಲಿಸುವಿರಿ. ವಿಕಸಿತವದನ-ನಿತ್ಯಯೌವನ ದಿಂದ ಕಾಣಿಸಿಗುವಿರಿ. ಎಷ್ಟೇ ಕಷ್ಟಕರವಾದ ಕೆಲಸವಾದರೂ ಅಷ್ಟೇ ಸುಲಭೋಪಾಯದಿಂದ ಮಾಡಬಲ್ಲವರಾಗುವಿರಿ ಆಯುವೃದ್ಧಿಯಾಗಲಿದೆ.



**ವೃಷಭ**

ಅನುಕೂಲಕರವಾದ ಕಾಲ. ಆರ್ಥಿಕವಾಗಿ ಸಬಲಗೊಳ್ಳುವಿರಿ. ಕುಟುಂಬ ಸದಸ್ಯರ ಬೆಂಬಲ ನಿಮ್ಮ ಆರ್ಥಿಕ ಸದೃಢತೆಗೆ ನಾಂದಿಯಾಗುತ್ತದೆ. ಸಾಮರಸ್ಯಪೂರಕ ಪರಿವಾರ-ಸಂಬಂಧಿಗಳಿಂದ ಸಮಯ ಕಳೆಯುವಿರಿ. ಸಮಾಜದಲ್ಲಿ ಗೌರವ ಮರ್ಯಾದೆಗಳು ಹೆಚ್ಚಲಿವೆ.



**ವೃಶ್ಚಿಕ**

ಶುಭಕಾರ್ಯ ಸಂಪ್ರದಾಯಗಳು, ಕಲ್ಯಾಣಾದಿ ಶುಭ ಕಾರ್ಯಗಳು ಜರುಗಲಿವೆ. ಬಂಧು ಮಿತ್ರ ವರ್ಗದವರ ಮಧ್ಯೆ ಸಂಭ್ರಮದ ವಾತಾವರಣ ಏರ್ಪಡಲಿದೆ. ಒಳ್ಳೆಯ ವಾತಾವರಣ ಆಲೋಚನೆಗಳು ಇತರರಿಗೂ ಹಂಚುವಿರಿ. ಕಾರ್ಯಸಿದ್ಧಿಯಾಗಲಿದೆ ದೀರ್ಘಕಾಲಿಕ ಯೋಜನೆಗಳಿಗೆ ಮುನ್ನುಡಿ ಹಾಡುವಿರಿ ಯಾವುದೇ ಕಾರ್ಯದಲ್ಲಿ ಪ್ರಬುದ್ಧತೆ ಅವಶ್ಯಕ.



**ಮಿಥುನ**

ಆರೋಗ್ಯವಂತರಾಗಿ, ಧನವಂತರಾಗಿ, ತಿಳುವಳಿಕಸ್ಥರಾಗಿ ರೂಪುಗೊಳ್ಳುವಿರಿ ಜನ್ಮರಾಶಿಯಲ್ಲಿನ ಗುರು ಸಂಚಾರ ಜ್ಞಾನ, ಸಂಪತ್ತು ಹಾಗೂ ಶ್ರೇಯಸ್ಸನ್ನು ತಂದುಕೊಡಲಿದೆ. ಆರ್ಥಿಕ ಪರಿಸ್ಥಿತಿ ಗಣನೀಯವಾಗಿ ವೃದ್ಧಿಯಾಗಲಿದೆ.



**ಧನಸ್ಸು**

ಜೀವನದಲ್ಲಿಯ ಯಾವುದೇ ಕಾರ್ಯವನ್ನು ಚುರುಕಾಗಿ ನಿರ್ವಹಿಸಲು ಉತ್ಸಾಹವನ್ನು ಹೊಂದಿರುತ್ತೀರಿ. ಅಳತೆ ಮೀರಿದ ಆಸೆಗಳನ್ನು ಸಹಾ ವಿಜಯವಂತರಾಗಿ ಸೇರಿಕೊಳ್ಳುವಿರಿ. ಸಮಾಜದಲ್ಲಿ ಕುಟುಂಬದಲ್ಲಿ, ಸ್ನೇಹಿತರಲ್ಲಿ ಮೊದಲಾದ ಎಲ್ಲಾ ವಿಷಯಗಳಲ್ಲಿ ಪ್ರಸಿದ್ಧಿ ಪಡೆಯುವಿರಿ.



**ಕರ್ಕಾಟಕ**

ಕುಟುಂಬ ಪರವಾದ ಖರ್ಚುಗಳು ವೃದ್ಧಿಯಾಗುತ್ತವೆ. ವಿದೇಶಿ ಪ್ರಯಾಣ ಕುಟುಂಬದಿಂದ ದೂರವಾಗುವಿರಿ. ವೃತ್ತಿ-ವ್ಯವಹಾರಗಳಲ್ಲಿ ಆತಂಕಗಳು ಎದುರಾದರೂ ಅತಿ ಕ್ರಮಿಸಬಲ್ಲಿರಿ. ದೀರ್ಘಕಾಲೀಯ ವ್ಯಾಧಿಗಳು ಬಾಧಿಸ ಬಹುದು.



**ಮಕರ**

ಜ್ಞಾನ ಮತ್ತು ತಿಳುವಳಿಕೆ ವೃದ್ಧಿಯಾಗಲಿವೆ. ಜೀವನದಲ್ಲಿ ಅನೇಕ ರಂಗಗಳಲ್ಲಿ ಉನ್ನತವಾದ ಸಾಮರ್ಥ್ಯ ಶಕ್ತಿವೃದ್ಧಿಯಾಗಲಿದೆ. ಪ್ರಬುದ್ಧತೆಯಿಂದ ಕೃಷಿ ಮಾಡಿದಲ್ಲಿ ಗಮನ ಗಹನವಾಗಿ ವಿಜಯದೆಡೆಗೆ ತೆಗೆದುಕೊಂಡು ಹೋಗುವುದು. ಎಲ್ಲಾ ರಂಗಗಳಲ್ಲಿಯೂ ವಿಜಯ ಸಾಧಿಸುವಿರಿ.



**ಸಿಂಹ**

ಕುಟುಂಬದಲ್ಲಿ ಶಾಂತಿ. ಸಾಮರಸ್ಯವಿರುತ್ತದೆ. ಸಂತೋಷಕರವಾದ ವೈವಾಹಿಕ ಜೀವನ ನಡೆಸುವಿರಿ. ವೃತ್ತಿಯಲ್ಲಿ ಹೆಸರು-ಉತ್ಸಾಹಗಳುಂಟಾಗಲಿವೆ. ಉದ್ಯೋಗದಲ್ಲಿ ಪ್ರಮೋಷನ್ ಬರುವ ಅವಕಾಶಗಳಿರುತ್ತವೆ. ವ್ಯವಹಾರಸ್ಥರಿಗೆ ಅನೂಹ್ಯ ಲಾಭಗಳುಂಟಾಗಲಿವೆ. ಅದೃಷ್ಟ ಕಾಲ ವಿರಲಿದೆ.



**ಕುಂಭ**

ಗೃಹ ಖರೀದಿಯಂತಹ ಯೋಜನೆಗಳು ನೆರವೇರಲಿವೆ. ಧನವನ್ನು ಶುಭ ವಿಷಯಗಳಿಗೆ ಮಾತ್ರವೇ ಖರ್ಚು ಮಾಡುವಿರಿ. ಅಧಿಕ ಖರ್ಚುಗಳನ್ನು ಹೆದುಬಸ್ತಿನಲ್ಲಿಟ್ಟು ಕೊಳ್ಳುವಿರಿ. ಪರಿಹಾರ ಮಾರ್ಗದಲ್ಲಿ ಪ್ರಬುದ್ಧತೆ ಅಗತ್ಯವಿದೆ. ಪುತ್ರ ಸಂತಾನ ವುಂಟಾಗಲಿದೆ. ಧನವೃದ್ಧಿಯಾಗಲಿದೆ.




**ಕನ್ಯೆ**

ಗುರುಬಲವಿದೆ,ಕನಸುಗಳನ್ನು ಸಾಕಾರಗೊಳಿಸಲು ಯೋಜನೆಯನ್ನು ರೂಪಿಸಿಕೊಳ್ಳುವಿರಿ. ಗುರಿ ಸಾಧಿಸುವವರೆಗೆ ದೃಢನಿಶ್ಚಯದಿಂದ ಯತ್ನಿಸುವಿರಿ. ದೈವಬಲದಿಂದ ಅಂದುಕೊಂಡ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಇತರರಿಗೂ ನಿಮ್ಮ ಕೈಲಾದಷ್ಟು ಸಹಾಯವನ್ನು ಮಾಡುವಿರಿ.



**ಮೀನ**

ಆತ್ಮ ವಿಶ್ವಾಸದಿಂದ ಕಾರ್ಯನಿರ್ವಹಣೆ ಮತ್ತು ಹತ್ತು ಜನರನ್ನು ಪ್ರೋತ್ಸಾಹಿಸಿ ಮುನ್ನಡೆಸುವ ಸಾಮರ್ಥ್ಯವನ್ನು ಹೊಂದುವಿರಿ. ಆರ್ಥಿಕವಾಗಿ ಹೆಚ್ಚೇನೂ ಲಾಭವಿರಲಾರದು. ಇತರರೊಂದಿಗಿನ ಲೇವಾ - ದೇವಿ ವ್ಯವಹಾರ ಗಳಲ್ಲಿ ಜಾಗ್ರತೆ ಅತ್ಯಾವಶ್ಯಕ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ।। ಅನಸೂಯ ಎಸ್. ರಾಜೀವ್

**1. ಮುತ್ತೈದೆಯ ಲಕ್ಷಣಗಳೇನು?**

**ಉತ್ತರ :** ಮುತ್ತೈದೆ ಎಂದರೆ ಐದು ಮುತ್ತುಗಳನ್ನು ಹೊಂದಿರುವವಳು ಎಂದರ್ಥ. ಆಕೆಯಲ್ಲೆ ಐದು ಮಂಗಳ ಕಾರಕ ವಿಶೇಷ ವಸ್ತುಗಳಿವೆ. ತಾಳಿ,ತಿಲಕ (ಕುಂಕುಮ), ಬಳೆ (ಗಾಜಿನ ಬಳೆ),ಕಾಲುಂಗುರ,ಮುಡಿಗೆ ಅರಳಿದ ಹೂವು, ಇವುಗಳನ್ನು ಧರಿಸಿರುವವಳೇ ಮುತ್ತೈದೆ ಅಂದರೆ ಸುಮಂಗಲಿ. ಹೆಣ್ಣು ಚಂಚಲೆ ಆ ಚಂಚಲತೆ ಕಡಿಮೆ ಮಾಡಲು ಕುಂಕುಮವಿಟ್ಟು ಅಗ್ನಿ ಬಂಧನ, ಮೂಗುತಿ ಹಾಕಿ ವಾಯು ಬಂಧನ, ತಲೆಯಲ್ಲಿ ಬೈತಲೆ ತೆಗೆದು ಬಾಚಿ ಆಕಾಶ ತತ್ವ ಬಂಧನ, ಕಿವಿ ಚುಚ್ಚಿ ಜಲತತ್ವದ ಬಂಧನ, ಕಾಲುಂಗರ ಹಾಕಿ ಅಥವಾ ಅರಿಶಿನ ಹಚ್ಚಿ ಭೂಬಂಧನ ಮಾಡಲಾಗುತ್ತದೆ ಎಂಬ ವಿವರಣೆಯು ಇದೆ. ಇದನ್ನೇ ಸಂಸಾರ ಬಂಧನ ಎನ್ನುತ್ತಾರೆ. ಈ ಎಲ್ಲಾ ಬಂಧನಗಳನ್ನು ಹೊತ್ತಿರುವ ಮಹಿಳೆಗೆ ಸಮಾಜದಲ್ಲಿ ಅಗ್ರ ಸ್ಥಾನ. ಆದಿಶಕ್ತಿಯಾಗಿ ಗೃಹಲಕ್ಷ್ಮಿಯಾಗಿ ಭಾಗ್ಯಲಕ್ಷ್ಮಿಯಾಗಿ ಸಂತಾನ ಲಕ್ಷ್ಮಿಯಾಗಿ ಅಷ್ಟಲಕ್ಷ್ಮಿಯಾಗಿ ಮನೆ ಮನವನ್ನು ಬೆಳಗುವವಳು.

ಈ ಕಾಲದಲ್ಲಿ ಮದುವೆಯಾದ ಗೃಹಿಣಿಯು ಇವೆಲ್ಲ ಸೌಭಾಗ್ಯಕರವಾದುವುಗಳನ್ನು ಧರಿಸಿರುವುದರಲ್ಲಿ ಆಸಕ್ತಿವಹಿಸುತ್ತಿಲ್ಲ. ಆದರೆ ಅವುಗಳಿಗಿರುವ ಮಹತ್ವ, ನಮ್ಮ ಸಂಪ್ರದಾಯವನ್ನು ಎತ್ತಿ ಹಿಡಿಯುವ ಗೌರವಾರ್ಹವಾಗುವಂತಹ ಮಂಗಳಕರ ಆಭರಣಗಳನ್ನು ಧರಿಸಿರುವುದರಿಂದ ನಾರಿಯು ಪೂಜನೀಯಳಾಗುತ್ತಾಳೆ. ಅವಳನ್ನು ನೋಡಿದ ಪರಪುರುಷನಿಗೆ ಕೆಟ್ಟ ಭಾವನೆ ಬರುವುದಿಲ್ಲ. ಈ ಐದು ಮಂಗಳಕರ ಸೌಭಾಗ್ಯಕರ ವಸ್ತುಗಳ ಹಿನ್ನೆಲೆಯನ್ನು ತಿಳಿದುಕೊಳ್ಳೋಣ.

**ಕಾಲುಂಗುರ :** ಕಾಲುಂಗುರವನ್ನು ಧರಿಸುವ ಬೆರಳಿಗೂ, ಗರ್ಭಕೋಶಕ್ಕೂ ನೇರವಾದ ನರಸಂಬಂಧವಿದೆ. ಕಾಲುಂಗುರವು ಸದಾ ಆ ನಾಡಿಯ ಮಿಡಿತವನ್ನು ಸಮತೋಲನದಲ್ಲಿರಿಸುತ್ತದೆ. ಕುಂಡಲಿನಿ ಶಕ್ತಿಯ ಸಚೇತನವಾದ ಸುಷುಮ್ನಾ ನಾಡಿಗೆ ಸಂಬಂಧವಿರುವ ಕಾರಣ ಆ ತಾಯಿ ಶರೀರದ ಅಡಿಯಿಂದ ಮುಡಿಯವರೆಗೆ ಚೈತನ್ಯ ಶಕ್ತಿಯ ಸಮರ್ಪಕವಾಗಿ ಸದಾ ಹರಿಯಲು ಕಾಲುಂಗುರ ಸಹಾಯಕ.

ತಾಳಿಯು ಹೃದಯ ಜ್ಯೋತಿಯು ಸದಾ ದರ್ಶನೀಯವೆಂದು ಸೂಚಿಸುವುದೇ ಮಾಂಗಲ್ಯದ ಸಂಕೇತ. ಸ್ತ್ರೀಯು ಉದ್ರೇಕಗೊಂಡಾಗ ನಾಡಿಮಿಡಿತ ಹತೋಟಿ ಮೀರಬಹುದು. ಬಳೆಗಳು ಸ್ತ್ರೀಯ ಮಣಿಕಟ್ಟಿನ ಮೇಲೆ ನರಗಳ ಮೇಲೆ ಆಡುವುದರಿಂದ ನರಗಳು ಶಾಂತಗೊಂಡು ಸಹಜಸ್ಥಿತಿಗೆ ಬರುತ್ತವೆ. ಇನ್ನು ಕುಂಕುಮ, ಸಹಜವಾಗಿ ಉದ್ರೇಕಗಳಿಂದ ಹಣೆಯ ಭಾಗ ಮುದುಡುವುದು. ಆ ಸಮಯದಲ್ಲಿ ಅಲ್ಲಿರುವ ನರಮಂಡಲಗಳು ಮತ್ತು ಚರ್ಮ ತತ್ತರಿಸುವುದು. ಕುಂಕುಮದಲ್ಲಿರುವ ಅನೇಕ ಆಯುರ್ವೇದಿಕ ಅಂಶಗಳು ಉದ್ರೇಕಗೊಂಡ ಚರ್ಮದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುತ್ತವೆ. ಕುಂಕುಮ ವಿಡುವ ಜಾಗವೇ ಆಜ್ಞಾಚಕ್ರದ ಸ್ಥಾನ. ಜ್ಞಾನದ ಸಂಕೇತ. ಗೃಹಿಣಿಯು ಆ ಭಾಗವನ್ನು ಪವಿತ್ರವೆಂದು ಅಲಂಕರಿಸುವಳು. ಯಾವುದೇ ಪರಪುರುಷನು ಗೃಹಿಣಿಯನ್ನು ಕಾಮದೃಷ್ಟಿಯಿಂದ ಅವಳ ಮೊಗವನ್ನು ವೀಕ್ಷಿಸಿದರೆ ಶಿವನ ಮುಕ್ಕಣ್ಣಿನಲ್ಲಿ ಅಡಗಿರುವಂತಹ ತೀಕ್ಷ್ಣತೆಯಿಂದ ಪತಿವ್ರತೆಯ ತೀಕ್ಷ್ಣತೆಯು ಕಾಮಾಂಧನಲ್ಲಿ ಅಡಗಿರುವ ಕಾಮವನ್ನು ಮುತ್ತೈದೆಯ ಕುಂಕುಮ ಅಡಗಿಸುವುದು.

ಋತುಮಾನಕ್ಕೆ ಅನುಗುಣವಾಗಿ ಸುವಾಸನೆಯುಳ್ಳ ಪುಷ್ಪಗಳನ್ನು ಮುಡಿಯುವುದರಿಂದ ಕೂದಲು ಬೇಗ ಬೆಳ್ಳಗಾಗುವುದಿಲ್ಲ. ಹೂವಿನ ಸುವಾಸನೆಯು ಕೂದಲಿಗೆ ರಕ್ಷಣೆ ನೀಡುತ್ತದೆ. ಹೂವನ್ನು ಮುಡಿಯುವುದು ಬ್ರಹ್ಮರಂಧ್ರವಿರುವ ಸಹಸ್ರಾರ ಚಕ್ರವಿರುವ ಜಾಗದಲ್ಲಿ. ಇದು ಬ್ರಹ್ಮರಂಧ್ರವನ್ನು ಪೂಜಿಸುವುದರ ಸಂಕೇತ. ಇಂತಹ ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಮಹತ್ವವುಳ್ಳ ಸೌಭಾಗ್ಯಕರ ವಸ್ತುಗಳನ್ನು ಮುತ್ತೈದೆಯು ಧರಿಸುವುದರಿಂದ ದೀರ್ಘ ಸುಮಂಗಲಿಯಾಗಿ ಬಾಳುವಳು.



**ನೀತಿ ಕಥೆ**

# ಸಣ್ಣ ಕೆಲಸದಿಂದಲೇ ಪ್ರಾಮಾಣಿಕ ನಡೆ

- ಎ.ಆರ್. ರಘುರಾಮ
99161 38436


ಚೀನಾ ದೇಶದ ಯಾತ್ರಿಯೊಬ್ಬ ಭಾರತಕ್ಕೆ ಬಂದು ಚಾಣಕ್ಯನನ್ನು ಭೇಟಿ ಮಾಡಿದ. ಆಗ ತಡ ರಾತ್ರಿ. ಮಂದವಾಗಿ ಉರಿಯುತ್ತಿದ್ದ ದೀಪದ ಬೆಳಕಿನಲ್ಲಿ ಏನನ್ನೋ ಬರೆಯುತ್ತಿದ್ದ ಚಾಣಕ್ಯನನ್ನು ಮಾತನಾಡಿಸಲು ಆತನ ಕೋಣೆಗೆ ಬಂದ. ಚೀನಾದೇಶದ ಪ್ರಜೆಯನ್ನು ಸ್ವಾಗತಿಸಿ ಕುಳಿತುಕೊಳ್ಳಲು ಸಂಜ್ಞೆ ಮಾಡಿದ ಚಾಣಕ್ಯ. ಬರವಣಿಗೆ ಕಾಯಕ ಮುಂದುವರಿಸಿದ. ಸ್ವಲ್ಪ ಸಮಯದ ನಂತರ ಉರಿಯುತ್ತಿದ್ದ ಆ ತೈಲ ದೀಪವನ್ನು ಆರಿಸಿದ. ಬೇರೊಂದು ದೀಪ ಹಚ್ಚಿದ. ಇದೇನು ಇದು ಎಂದು ಚೀನಾ ದೇಶದ ಯಾತ್ರಿ ಬೆರಗಾದ. ಇದು ಭಾರತೀಯರ ಅತಿಥಿ ಸತ್ಕಾರದ ನಿಯಮವೇ ಎಂದು ಚೀನಾ ದೇಶದ ಯಾತ್ರಿ ಬೆರಗಾದ. ಇದು ಭಾರತೀಯರ ಅತಿಥಿಸತ್ಕಾರದ ನಿಯಮವೇ ಎಂದು ಅವನಿಗೆ ಪ್ರಶ್ನೆ ಮೂಡಿತು. ಅದರ ಬಗ್ಗೆ ಚಾಣಕ್ಯನಿಗೆ ಕೇಳಿದ. ನೀವು ನನ್ನ ಕೊಠಡಿಗೆ ಪ್ರವೇಶ ಮಾಡಿದಾಗ "ನಾನು ನನ್ನ ರಾಜ್ಯದ ಲೆಕ್ಕಪತ್ರ ದಾಖಲು ಮಾಡುತ್ತ ಇದ್ದೆ. ಆ ಕೆಲಸ ಪೂರ್ಣವಾಯಿತು." ಅದು ರಾಜರು ನೀಡಿದ ದೀಪ. ಅದರಲ್ಲಿ ಇದ್ದದ್ದು ಪ್ರಜೆಗಳ ಬೆವರಿನ ತೆರಿಗೆಯಿಂದ ಬಂದ ಖಜಾನೆಯ ಹಣದ ತೈಲ. ಅದನ್ನು ಕೇವಲ ರಾಜ್ಯದ ಕರ್ತವ್ಯಕ್ಕೆ ಮಾತ್ರ ಬಳಸಬೇಕು. ನಂತರ ಇದೀಗ ನಾನು ನಿಮ್ಮ ಸಂಗಡ ಕೂತು ಮಾತನಾಡುತ್ತ ಇದ್ದೇನೆ. ಇದು ನನ್ನ-ನಿಮ್ಮ ಖಾಸಗಿ ಭೇಟಿ. ಇದಕ್ಕಾಗಿ ನಾನು ಸಂಪಾದಿಸಿದ ಹಣದಿಂದಲೇ ಬಂದ ಎಣ್ಣೆ ದೀಪ ಹಚ್ಚಿಕೊಂಡೆ. ರಾಜ್ಯದ ಬೊಕ್ಕಸದ ಹಣದ ಸೌಲತ್ತುಗಳನ್ನು ನನ್ನ ವಯಕ್ತಿಯ ಕೆಲಸದ ಸಂದರ್ಭ ಬಳಸುವುದು ಧರ್ಮ ಅಲ್ಲ ಎಂದ ಚಾಣಕ್ಯ. ಚೀನಾ ದೇಶದ ಯಾತ್ರಿ ಆ ರಾತ್ರಿ ಚಳಿಯಲ್ಲೂ ಬೆವರಿದ.

ಚಿಕ್ಕ ಕೆಲಸದಲ್ಲೂ, ಯಾವ ರಾಜ ಮಹಾರಾಜರೂ ಗಮನಿಸದ ಚಟುವಟಿಕೆಯಲ್ಲೂ ಚಾಣಕ್ಯನ ನೀತಿ, ನಿಯಮ ಎಷ್ಟು ಬಿಗಿಯಾಗಿದೆ ಎಂದು ಅಚ್ಚರಿಪಟ್ಟ. ಅತಿ ಸಣ್ಣ ಸಣ್ಣ ನಡೆಯಲ್ಲೂ ಚಾಣಕ್ಯನ ಶ್ರೇಷ್ಠ ಚಿಂತನೆ ಇರುವುದನ್ನು ಕಂಡು ದಂಗಾದ. ಪ್ರಾಮಾಣಿಕತೆ ಎಂದರೆ ಅದು ದೊಡ್ಡ ಕೆಲಸದಲ್ಲಿ, ಎಲ್ಲರ ಎದುರು ಪ್ರದರ್ಶನಕ್ಕೆ ತೋರುವ ಬದ್ಧತೆ ಅಲ್ಲ. ಯಾರೂ ಇಲ್ಲದಾಗ ನಾವು ಹೇಗೆ ಇರುತ್ತೇವೆ ಎಂಬುದರ ಬಂಡವಾಳ. ಇಂದು ಭ್ರಷ್ಟಾಚಾರದ ಬೇರು ಎಲ್ಲೆಡೆ ವ್ಯಾಪಿಸಿದೆ ಎಂದು ನಾವು ಬೇಸರ ಪಟ್ಟುಕೊಳ್ಳುತ್ತ ಇದ್ದೇವೆ. ದೇಶದ ಪ್ರಗತಿ ಆಗಬೇಕು ಎಂದರೆ ಹೀಗೆ ಒಂದು ಸಣ್ಣ ಸಂಗತಿಯಲ್ಲೂ ನಮ್ಮ ಪ್ರಾಮಾಣಿಕತೆ ವಿಜೃಂಭಿಸಬೇಕು. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಖ್ಯಾತ ಇಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯನವರೂ ಸರ್ಕಾರದ ಲೆಕ್ಕಪತ್ರ ಬರೆಯಲು ಒಂದು ಪೆನ್ನು. ಖಾಸಗಿ ಕೆಲಸಕ್ಕೆ ಒಂದು ಪೆನ್ನು ಬಳಸಿ ಆದರ್ಶ ವ್ಯಕ್ತಿತ್ವ ತೋರಿದ್ದರು. ಭಾರತ ಮೌಲ್ಯಗಳ ತವರು. ಹಾಗಾಗಿ ನಮ್ಮ ನಾಡು ವಿಶ್ವಕ್ಕೆ ಗುರು. ನಮ್ಮ ನಿತ್ಯದ ವ್ಯವಹಾರದಲ್ಲಿ ದುರಾಸೆ, ಮೋಸ ಇರಬಾರದು ಎಂದು ವೇದ-ಉಪನಿಷತ್ತು,ರಾಮಾಯಣ-ಮಹಾಭಾರತವು ಹೇಳಿದೆ. ಪ್ರತಿಯೊಬ್ಬರ ಅಂತರಂಗ-ಬಹಿರಂಗ ಶುದ್ಧಿಗೆ ದಾಸರು, ಶರಣರು, ವಚನಕಾರರು ಕರೆ ನೀಡಿದ್ದಾರೆ. ಒಬ್ಬನೇ ಒಬ್ಬ ಪ್ರಾಮಾಣಿಕನಾಗಿದ್ದರೂ ಅದು ದೇಶದ ಸರ್ವಾಂಗೀಣ ವಿಕಾಸಕ್ಕೆ ಪೂರಕ ಎಂಬುದನ್ನು ಮರೆಯದಿರೋಣ.


**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮ ಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧಿಸುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.



ಬಣ್ಣವನ್ನು ತುಂಬಿರಿ.






1. ಶ್ರೀ ರಾಮನವಮಿ
2. ಕ್ಷೀರಸಾಗರದಲ್ಲಿ ಉದ್ಭವವಾದದ್ದು
3. ಮಲೆಯಾಳಂ ಹೊಸ ವರ್ಷ ವಿಷು

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ



ಮಕ್ಕಳೇ, ಹನುಮ ಯಾವ ಹಾದಿಯಲ್ಲಿ ಹೋದರೆ ಸೀತೆಯನ್ನು ಸೇರಬಹುದು ಕಂಡು ಹಿಡಿಯಿರಿ ನೋಡೋಣ!

ಮಾರ್ಗ ಅನ್ವೇಷಣೆ



ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಗಾದೆ

ಲ್ಲ ಹೆ ಮೇ ಕ್ಕಿ ಲ್ಲ ಸಾ ಮೇ ಕ್ಕಿ

ಉ ದ ಲೆ ರ ಸೊ ದ ಲೆ ಣ್ಣ

ಉತ್ತರಗಳು:

ಉಕ್ಕಿದ ಮೇಲೆ ಸಾರಲ್ಲ ಸೊಕ್ಕಿದ ಮೇಲೆ ಹೆಣ್ಣಲ್ಲ

# ರಸ ಪ್ರಶ್ನೆಗಳು

01. ವಾನರ ಸೇನೆಯಲ್ಲಿ ಅಧಿಕ ಬಲಶಾಲಿಯಾರು?..........
02. ಒಂಟಿಮಿಟ್ಟ ಕ್ಷೇತ್ರವು ಎಲ್ಲಿದೆ?..........
03. ಶ್ರೀರಾಮನು ಎಷ್ಟುವರ್ಷ ವನವಾಸಕ್ಕೆ ಹೋದನು? ..........
04. ಮನೋಕಾಮನ ದುರ್ಗಾ ಮಂದಿರ ಎಲ್ಲಿದೆ?..........
05. ಚಿತ್ರಾಪೂರ್ಣಿಮೆಯಂದು ಯಾರ ಜಯಂತಿಯನ್ನು ಆಚರಿಸಲಾಗುತ್ತದೆ? ..........
06. ದೊಡ್ಡಮಳೂರು ಹಿಂದೆ ಏನಾಗಿತ್ತು? ..........
07. ವಿಷ್ಣುವಿನ ಮೂರ್ತಿಯ ರೂಪದ ವಿವರಣೆ ಎಲ್ಲಿದೆ? ..........
08. ಪಾಂಡವರು ಯಾರಿಂದ ಅಕ್ಷಯ ಪಾತ್ರೆಯನ್ನು ಪಡೆದರು?..........
09. ವಯಿರಮುಡಿ ಉತ್ಸವ ಎಲ್ಲಿ ನಡೆಯುತ್ತದೆ?..........
10. ವನಕರ್ತನ ಸೈನ್ಯವನ್ನು ಸೋಲಿಸಿದವರು ಯಾರು?..........
11. ಯಾರ ಸೌಂದರ್ಯ ಲೋಕ ವಿಖ್ಯಾತವಾಯಿತು? ..........
12. ಯಾರ ಮುಖಾಂತರ ರಾಮಾಯಣದ ಕಾವ್ಯನಾಮವಾಯಿತು?..........
13. ತಿರುನಾಂಗೂರ್ ದಿವ್ಯದೇಶಗಳಲ್ಲಿ ಎಷ್ಟನೇಯದು?..........
14. ಚಾಣಕ್ಯನ ಮಾತಿಗೆ ಯಾರು ಚಳಿಯಲ್ಲೂ ಬೆವರಿದರು?..........
15. ದಶಕಂಠನನ್ನು ಸಂಹರಿಸಿದವರು ಯಾರು? ..........

## ಸೂಚನೆಗಳು

**34 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.


**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**


ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ











1) ವಾಲ್ಮೀಕಿ 2) ಸೂರ್ಯವಂಶ 3) ಲವ ಮತ್ತು ಕುಶ 4) ಶಿವ ಧನಸ್ಸು 5) ದಶರಥ ಹಾಗೂ ಕೌಸಲ್ಯೆ 6) ಹನುಮ
7) ರಾವಣ 8) ಲಕ್ಷ್ಮಣ

ಮಕ್ಕಳೇ ಈ ಚಿತ್ರದಲ್ಲಿರುವ ಬಾಣದಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಬಿಲ್ಲುನಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ!




1) i 2) ii 3) iii 4) vi 5) v





ಈ ಚಿತ್ರದಲ್ಲಿ ರಾಮಾಯಣದಲ್ಲಿ ಕಂಡು ಬರುವ ಜೀವರಾಶಿಗಳನ್ನು ಕಂಡು ಹಿಡಿಯಿರಿ.

ಅಳಿಲು, ಜಟಾಯು ಮತ್ತು ಜಿಂಕೆ

# ಸುಗುಣಾಭಿರಾಮ

ಚಿತ್ರಕಥೆ


ಕಥೆ: ತೆಲುಗು ಮೂಲ : ಕೆ. ವೆಂಕಟಅಪ್ಪಲಾಚಾರ್ಯ
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ.ವಿ. ಲಿಂಗಾಚಾರಿ


## ಮಕ್ಕಳಿಗಾಗಿ ರಾಮಾಯಣದಲ್ಲಿರುವ ರಾಮನ ಗುಣಗಳ ಬಗ್ಗೆ ತಿಳಿಸುವ ಕಥಾ ದೃಶ್ಯಮಾಲಿಕೆ....



ದಶರಥನ ಮಕ್ಕಳಾದ ರಾಮಲಕ್ಷ್ಮಣ ಮತ್ತು ಭರತ ಶತ್ರುಘ್ನ ಸಹೋದರರ ವಾತ್ಸಲ್ಯದ ಪ್ರತೀಕ.



ರಾಮನಂತಹ ಶಿಷ್ಯ ಮತ್ತು ವಿಶ್ವಾಮಿತ್ರನಂತಹ ಗುರುಗಳು ಈ ಸೃಷ್ಟಿಯಲ್ಲಿ ಇಲ್ಲ. ಇವರಿಬ್ಬರು ಗುರು ಶಿಷ್ಯ ಸಂಬಂಧಕ್ಕೆ ಪ್ರತೀಕರು.



ತಂದೆಗೆ ಕೊಟ್ಟ ಮಾತಿಗೆ ರಾಮನು ತನ್ನ ಪತ್ನಿ ಸೀತೆಯನ್ನು ಮತ್ತು ಕಿರಿಯ ಸಹೋದರ ಲಕ್ಷ್ಮಣನೊಂದಿಗೆ 14 ವರ್ಷಗಳ ಕಾಲ ವನವಾಸಕ್ಕೆ ಹೋದನು.



ಋಷಿಗಳ ಆಜ್ಞೆಯನ್ನು ಪಾಲಿಸಿ ಋಷಿಗಳನ್ನು ರಾಕ್ಷಸರ ಕಪಿಮುಷ್ಟಿಯಿಂದ ರಕ್ಷಿಸಿದ ಆಶ್ರಿತವತ್ಸಲನು.



ಗೌತಮನ ಆಶ್ರಮದಲ್ಲಿ ಬೂದಿಯ ರೂಪದಲ್ಲಿದ್ದ ಅಹಲ್ಯೆಗೆ ಶ್ರೀರಾಮನ ಪಾದಸ್ಪರ್ಶದಿಂದ ಶಾಪ ವಿಮೋಚನೆಯಾಯಿತು.



ನಂತರ ರಾಮಲಕ್ಷ್ಮಣರು ಅಹಲ್ಯೆ ಗೌತಮರ ಆಶೀರ್ವಾದ ಪಡೆದು ಧನ್ಯರಾದರು.



ತನ್ನ ತಂದೆಯ ಸ್ನೇಹಿತನಾದ ಜಟಾಯುವಿಗೆ ಉತ್ತರಕ್ರಿಯೆಗಳನ್ನು ನಿರ್ವಹಿಸಿ ಮೋಕ್ಷವನ್ನು ನೀಡಿ ಭಕ್ತವತ್ಸಲನಾದನು.



ಸುಗ್ರೀವನೊಂದಿಗೆ ಸ್ನೇಹ ಮಾಡಿ ಸ್ನೇಹದ ಗುಣವನ್ನು ಸಾರಿದ ಸದ್ಗುಣರಾಶಿ ಶ್ರೀರಾಮನು



ಹನುಮಂತನನ್ನು ತನ್ನ ಬಂಟನಾಗಿ ಮಾಡಿಕೊಂಡು ಆತನ ಮೇಲೆ ಅಪಾರ ಪುತ್ರವಾತ್ಸಲ್ಯ ತೋರಿದ ಕಾರುಣ್ಯಧಾಮನು.



ವಾನರರ ಸಹಾಯ ಸಹಕಾರಗಳಿಂದ ದಕ್ಷಿಣ ದಿಕ್ಕಿನಲ್ಲಿರುವ ಸಮುದ್ರದ ಮೇಲೆ ವಾರಿಧಿಯನ್ನು ನಿರ್ಮಿಸಿದ ವಿಜ್ಞಾನಿ ಶ್ರೀರಾಮನು.



ಲಂಕಾಧಿಪತಿ ದಶಕಂಠನಾದ ರಾವಣಾಸುರನನ್ನು ಸಂಹರಿಸಿ ಲೋಕೋಪಕಾರನಾದನು.



ಏಕಪತ್ನಿವ್ರತ -ಒಂದೇ ಮಾತು - ಒಂದೇ ದಾರಿ - ಒಂದೇ ಬಾಣ ಎಂಬ ಸೂತ್ರದಿಂದ 11 ಸಾವಿರ ವರ್ಷಗಳ ಕಾಲ ರಾಜ್ಯವನ್ನು ಆಳಿದನು. ಆದುದರಿಂದಲೇ ಅದಕ್ಕೆ ರಾಮರಾಜ್ಯ ಎಂಬ ಹೆಸರು ಬಂತು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತವ್ಮು ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿವ್ಮು ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನವ್ಮು ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., P.G. Dip.in Ephigraphy, Dip.in Yoga on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



ಮಹಾಕುಂಭಮೇಳ ಸಂದರ್ಭವಾಗಿ 18-02-2025 ರಂದು ವಾರಣಾಸಿಯಲ್ಲಿರುವ ಬೆನಾರಸ್ ಹಿಂದೂ ವಿಶ್ವ ವಿದ್ಯಾಲಯದಲ್ಲಿರುವ ಬಿರ್ಲಾ ಮಂದಿರದಲ್ಲಿ ವೈಭವವಾಗಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವ ಸಂದರ್ಭವಾಗಿ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು




ಶ್ರೀರಾಮಕೃಷ್ಣ ತೀರ್ಥ ಮುಕ್ಕೋಟಿ ಸಂದರ್ಭವಾಗಿ 12-02-2025 ರಂದು ನಡೆದ ಉತ್ಸವದಲ್ಲಿ ಪಾಲ್ಗೊಂಡ ಭಕ್ತರು.



ಶ್ರೀ ಶೈಲದಲ್ಲಿ ಮಹಾಶಿವರಾತ್ರಿ ಶ್ರೀಭ್ರಮರಾಂಬ ಮಲ್ಲಿಕಾರ್ಜುನ ಸ್ವಾಮಿಯವರ ಬ್ರಹ್ಮೋತ್ಸವಗಳ ಸಂದರ್ಭವಾಗಿ 22-02-2025 ರಂದು ತಿ.ತಿ.ದೇ., ವತಿಯಿಂದ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು



ಮಹಾಶಿವರಾತ್ರಿ ಶ್ರೀ ಕಾಳಹಸ್ತೀಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳ ಸಂದರ್ಭವಾಗಿ ತಿ.ತಿ.ದೇ., ವತಿಯಿಂದ ರೇಷ್ಮೆ ವಸ್ತ್ರಗಳನ್ನು 28-02-2025 ರಂದು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು



10-02-2025 ರಂದು ಸ್ವಾಮಿಯವರ ದರ್ಶನಾ ನಂತರ ಆಂಧ್ರಪ್ರದೇಶದ ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ಶ್ರೀ ಧೀರಜ್‌ಸಿಂಗ್ ಠಾಕೂರ್ ದಂಪತಿಗಳಿಗೆ ತಿರುಮಲೆ ಸ್ವಾಮಿಯವರ ತೀರ್ಥಪ್ರಸಾದಗಳನ್ನು, ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯಚೌದರಿ, ಐ.ಆರ್.ಎಸ್., ರವರು



ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್‌ಅಫಿಷಿಯಾ ಸದಸ್ಯರಾಗಿ 23-02-2025 ರಂದು ಪ್ರಮಾಣ ಸ್ವೀಕಾರ ಮಾಡಿದ ಆಂಧ್ರಪ್ರದೇಶದ ದೇವಾದಾಯ ಇಲಾಖೆಯ ಕಾರ್ಯದರ್ಶಿ ಶ್ರೀ ವಿ. ವಿನಯ್‌ಚಂದ್, ಐ.ಎ.ಎಸ್., ದಂಪತಿಗಳಿಗೆ ಸ್ವಾಮಿಯವರ ಚಿತ್ರಪಟ, ತೀರ್ಥಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯಚೌದರಿ, ಐ.ಆರ್.ಎಸ್., ರವರು

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-03-2025 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.

